**ದಿನಾಂಕ: 30.09.2020 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 30ನೇ ಸಭೆಯ ನಡವಳಿಗಳು**

: ಅಧ್ಯಕ್ಷತೆ :

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್**

ಸನ್ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಹಾಗೂ

ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳ, ಬೆಂಗಳೂರು.

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿಗಳು:- (ಸದಸ್ಯರುಗಳು)**

1. ಶ್ರೀ ಎಸ್. ಎಸ್ ಪ್ರಕಾಶಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು
2. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ, ಬೆಂಗಳೂರು
3. ಶ್ರೀ ಕೆ.ವಿಶ್ವನಾಥ್ ಶೆಟ್ಟಿ, ಅಧ್ಯಕ್ಷರು, ಭಾರತೀಯ ಮಜ್ದೂರ್ ಸಂಘ, ಬೆಂಗಳೂರು.
4. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳ, ಬೆಂಗಳೂರು.
5. ಶ್ರೀ ಮೋಹನ್ ರಾವ್, ಕಾರ್ಯದರ್ಶಿಗಳು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು (ಅಧ್ಯಕ್ಷರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ರವರ ಪರವಾಗಿ)

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಮಾಲೀಕರ ಪರ ಪ್ರತಿನಿಧಿಗಳು:-(ಸದಸ್ಯರುಗಳು)**

1. ಶ್ರೀ ದುಶ್ಯಂತ ರಾಜಾನಂದ, ಟೆಕ್ನೀಕಲ್ ಆಸೀಸ್‌ಟೆಂಟ್-ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು (ಇವರ ಪರವಾಗಿ)

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮನಿರ್ದೇಶಿತ ಸದಸ್ಯರು:**

1. ಶ್ರೀಡಾ.ರಾಜಕುಮಾರ್ ಖತ್ರಿ., ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು
3. ಶ್ರೀ ಡಿ. ಕುಂಬಾರ್, ಕಲ್ಯಾಣ ಆಡಳಿತಗಾರರು-ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು(ಇವರ ಪರವಾಗಿ).
4. ಶ್ರೀಮತಿ ಎಲಿಷ ಆಂಡ್ರೂಸ್, ಉಪ ಕಾರ್ಯದರ್ಶಿ-ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು(ಇವರ ಪರವಾಗಿ).
5. ಶ್ರೀ ಡಬ್ಲ್ಯೂ.ಎಸ್. ಮಿರ್ಜಿ, ಜಂಟಿ ಕಾರ್ಯದರ್ಶಿಗಳು-ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು (ಇವರ ಪರವಾಗಿ)

**ಗೈರು ಹಾಜರಿದ್ದವರು:-**

1. ಅಧ್ಯಕ್ಷರು, CREDAI, ಬೆಂಗಳೂರು.
2. ಅಧ್ಯಕ್ಷರು, Construction Federation of India, New Dehli.

******

ಮಂಡಳಿಯ ಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗು ಸದಸ್ಯರುಗಳನ್ನು ಸ್ವಾಗತಿಸುತ್ತಾ, ಈ ದಿನದ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳನ್ನು ಚರ್ಚಿಸುವ ಪೂರ್ವದಲ್ಲಿ ಸದಸ್ಯರುಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಕೋರಿದರು.

ಶ್ರೀ ಎಸ್.ಎಸ್. ಪ್ರಕಾಶಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು ರವರು ಮಾತನಾಡಿ ಕೋವಿಡ್-19 ಸಾಂಕ್ರಮಿಕ ರೋಗದ ನಿಮಿತ್ತ ಲಾಕ್‌ಡೌನ್ ಅವಧಿಯಲ್ಲಿ ರಾಜ್ಯ ಸರ್ಕಾರ ಮತ್ತು ಎಲ್ಲಾ ಟ್ರೇಡ್ ಯೂನಿಯನ್‌ಗಳು ಕಾರ್ಮಿಕರ ಹಿತದೃಷ್ಟಿಯಿಂದ ಕೈಗೊಂಡಿರುವ ಹಲವಾರು ಯೋಜನೆಗಳು ಮತ್ತು ಕ್ರಮಗಳ ಕುರಿತು ಮೆಚ್ಚಿಗೆ ವ್ಯಕ್ತಪಡಿಸಿದರು ಮತ್ತು ಸದರಿ ಅವಧಿಯಲ್ಲಿ ರಾಜ್ಯ ಸರ್ಕಾರದಿಂದ ಕಟ್ಟಡ ಕಾರ್ಮಿಕರಿಗೆ ನೀಡಿದ ರೂ.5000/- ಗಳನ್ನು ಕೇಂದ್ರ ಸರ್ಕಾರದಿಂದ ಮರು ಪಾವತಿಸಲು ಕೋರಿ ಪತ್ರ ಬರೆಯುವಂತೆ ಅಧ್ಯಕ್ಷರಿಗೆ ಕೋರಿದರು. ಅದೇ ರೀತಿ ಲಾಕ್‌ಡೌನ್ ಅವಧಿಯಲ್ಲಿ ಕಟ್ಟಡ ಕಾರ್ಮಿಕರಿಗೆ ವಿತರಿಸಲು ಶಾಸಕರುಗಳಿಗೆ ನೀಡಿದ ಆಹಾರ ಕಿಟ್‌ಗಳಿಗೆ ತಗುಲಿದ ಮೊತ್ತವನ್ನು ಆಯಾ ಶಾಸಕರ ಅನುದಾನದಿಂದ ಹಿಂಪಡೆಯಲು ಕ್ರಮವಹಿಸುವಂತೆ ಕೋರಿದರು.

ಮುಂದುವರೆದು, ಕಟ್ಟಡ ಕಾರ್ಮಿಕರನ್ನು ನೋಂದಣಿ ಮಾಡಿಕೊಳ್ಳಲು ಆನ್‌ಲೈನ್ ಅಪ್ಲಿಕೇಷನ್ ಅನ್ನು ಪುನರಾಂಭ ಮಾಡಲು ಸಭೆಯಲ್ಲಿ ವಿನಂತಿಸಿದರು.

ಶ್ರೀ ಮೋಹನ್‌ರಾವ್, ಕಾರ್ಯದರ್ಶಿಗಳು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು ರವರು ಮಾತನಾಡಿ ಮಂಡಳಿ ವತಿಯಿಂದ ಕಟ್ಟಡ ಕಾರ್ಮಿಕರಿಗೆ ಈವರೆಗೆ ನೀಡಿದ ವಿವಿಧ ತರಬೇತಿಗಳ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ಆದರೆ, ಸದರಿ ತರಬೇತಿಗಳನ್ನು ಒಳಗೊಂಡ ಶಿಬಿರಾರ್ಥಿಗಳಿಗೆ ತರಬೇತಿ ನೀಡಿದ ಸಂಸ್ಥೆಯು ಉದ್ಯೋಗ ಒದಗಿಸಬೇಕಾಗುತ್ತದೆ. ಆದರೆ, ಈವರೆಗೆ ತರಬೇತಿ ಪಡೆದ ಎಷ್ಟು ಶಿಬಿರಾರ್ಥಿಗಳಿಗೆ ಉದ್ಯೋಗವನ್ನು ಒದಗಿಸಲಾಗಿದೆ ಎಂಬುದರ ಕುರಿತು ಮಾಹಿತಿಯನ್ನು ಪಡೆಯಲು ಕೋರಿದರು. ತರಬೇತಿಯನ್ನು ಪಡೆದ ಶಿಬಿರಾರ್ಥಿಗಳು ಉದ್ಯೋಗ ಪಡೆಯದಿದ್ದಲ್ಲಿ ಅವರಿಗೆ ಕೂಡಲೇ ಉದ್ಯೋಗ ಒದಗಿಸುವಂತೆ ಸಂಬಂಧಿಸಿದ ಸಂಸ್ಥೆಗಳಿಗೆ ಸೂಚನೆ ನೀಡಲು ಕೋರಿದರು.

ಮುಂದುವರೆದು, ನಿರ್ಮಿತಿ ಕೇಂದ್ರಗಳಿಗೆ ಮಂಡಳಿ ವತಿಯಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ತರಬೇತಿಗಳನ್ನು ಆಯೋಜಿಸಲು ಮಂಡಳಿ ವತಿಯಿಂದ ಅನುದಾನವನ್ನು ಬಿಡುಗಡೆ ಮಾಡಿದ್ದು, ಆದರೆ ಸದರಿ ಬಿಡುಗಡೆಯಾದ ಮೊತ್ತಕ್ಕೆ ಯಾವ ಸಾಮಾಗ್ರಿಗಳನ್ನು ಖರೀದಿಸಿದ್ದಾರೆ ಆ ವಿವರಗಳು ಮಂಡಳಿಯಲ್ಲಿ ಲಭ್ಯವಿರುವುದಿಲ್ಲ ಮತ್ತು ತರಬೇತಿ ಪಡೆದವರ ವಿವರಗಳು ಸಹ ಮಂಡಳಿಯಲ್ಲಿ ಲಭ್ಯವಿರುವುದಿಲ್ಲ. ಈ ಪ್ರಯುಕ್ತ ವಿವರಗಳನ್ನು ಸಂಬಂಧಿಸಿದ ನಿರ್ಮಿತಿ ಕೇಂದ್ರಗಳಿಂದ ಪಡೆಯಲು ವಿನಂತಿಸಿದರು.

ಕೋವಿಡ್-19 ಪ್ರಯುಕ್ತ ಕಟ್ಟಡ ಕಾರ್ಮಿಕರಿಗೆ ತರಬೇತಿಗಳನ್ನು ಆಯೋಜಿಸುತ್ತಿದ್ದ ತರಬೇತಿದಾರರಿಗೆ ವೇತನವನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಸದರಿಯವರುಗಳಿಗೆ ವೇತನವನ್ನು ಬಿಡುಗಡೆಗೊಳಿಸುವಂತೆ ಸಭೆಗೆ ಕೋರಿದರು.

ಶ್ರೀ ಕೆ.ವಿಶ್ವನಾಥ್ ಶೆಟ್ಟಿ, ಅಧ್ಯಕ್ಷರು, ಭಾರತೀಯ ಮಜ್ದೂರ್ ಸಂಘ, ಬೆಂಗಳೂರುರವರು ಮಾತನಾಡಿ ಕಟ್ಟಡ ಕಾರ್ಮಿಕರನ್ನು ನೋಂದಣಿ ಮಾಡಿಕೊಳ್ಳಲು ಆನ್‌ಲೈನ್ ಅಪ್ಲಿಕೇಷನ್ ಅನ್ನು ಪುನರಾಂಭ ಮಾಡಲು ಸಭೆಯಲ್ಲಿ ವಿನಂತಿಸಿದರು ಮತ್ತು ಮಂಡಳಿ ವತಿಯಿಂದ ವಿವಿಧ ತರಬೇತಿಗಳನ್ನು ಕಟ್ಟಡ ಕಾರ್ಮಿಕರುಗಳಿಗೆ ನೀಡುತ್ತಿದ್ದು, ಸದರಿ ತರಬೇತಿಗಳನ್ನು ತಾಲ್ಲೂಕುವಾರು ಆಯೋಜಿಸಿದ್ದಲ್ಲಿ ತಾಲ್ಲೂಕಿನಲ್ಲಿರುವ ಕಟ್ಟಡ ಕಾರ್ಮಿಕರುಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಸದರಿ ತರಬೇತಿಗಳನ್ನು ತಾಲ್ಲೂಕುವಾರು ಆಯೋಜಿಸಲು ವಿನಂತಿಸಿಕೊಂಡರು.

ಮುಂದುವರೆದು, ಪ್ರಸ್ತುತ ನೀಡುತ್ತಿರುವ ಮದುವೆ ಸಹಾಯಧನ ಮೊತ್ತವನ್ನು ಹೆಣ್ಣು ಮಕ್ಕಳ ಮದುವೆಗೆ ರೂ.1.00 ಲಕ್ಷಕ್ಕೆ ಹೆಚ್ಚಿಸಲು ಅಧ್ಯಕ್ಷರಲ್ಲಿ ವಿನಂತಿಸಿದರು.

ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ, ಬೆಂಗಳೂರು, ರವರು ಮಾತನಾಡಿ ಮೀಟಿಂಗ್ ನೋಟಿಸ್ ಜೊತೆ ಕಾರ್ಯಸೂಚಿಯನ್ನು ಕಳುಹಿಸಲು ವಿನಂತಿಸಿದರು. ಕಟ್ಟಡ ಕಾರ್ಮಿಕರಿಗೆ ಮಂಡಳಿ ವತಿಯಿಂದ ವಿತರಿಸುವ ವಿವಿಧ ಸೌಲಭ್ಯಗಳ ಅರ್ಜಿಗಳು ಬಾಕಿ ಉಳಿದಿದ್ದು ಸದರಿ ಅರ್ಜಿಗಳನ್ನು ಕೂಡಲೇ ವಿಲೇಗೊಳಿಸಲು ಕ್ರಮವಹಿಸುವಂತೆ ಕೋರಿದರು.

ಮುಂದುವರೆದು, ಪ್ರಸ್ತುತ ಇರುವ ಶೇ.1% ಸೆಸ್ ಮೊತ್ತವನ್ನು ಶೇ.1.5% ಗೆ ಹೆಚ್ಚಿಸುವಂತೆ ಅಧ್ಯಕ್ಷರಲ್ಲಿ ವಿನಂತಿಸಿಕೊಂಡರು.

ಎಲ್ಲಾ ಸದಸ್ಯರು ತಮ್ಮ ಅನಿಸಿಕೆಗಳನ್ನು ತಿಳಿಸಿದ ನಂತರ ಕಾರ್ಯಸೂಚಿಯ ಪ್ರಕಾರ ಸಭೆಯನ್ನು ನಡೆಸಲು ಮಾನ್ಯ ಅಧ್ಯಕ್ಷರು ಅನುಮತಿ ನೀಡಿದರು.

## ವಿಷಯ ಸಂಖ್ಯೆ-01

**ದಿನಾಂಕ: 23-03-2020 ರಂದು ನಡೆದ ಮಂಡಳಿಯ 29ನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ಸ್ಥಿರೀಕರಿಸುವುದು**

**ಪ್ರಸ್ತಾವನೆ:-**

ದಿನಾಂಕ: 23-03-2020 ರಂದು ನಡೆದ ಮಂಡಳಿಯ 29ನೇ ಸಭೆಯ ನಡವಳಿಗಳನ್ನು ಹಾಗೂ ಮಂಡಳಿಯ 29ನೇ ಸಭೆಯ ನಿರ್ಣಯಗಳಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಲಾಯಿತು.

ತೀರ್ಮಾನ:-

ದಿನಾಂಕ: 23-03-2020 ರಂದು ನಡೆದ ಮಂಡಳಿಯ 29ನೇ ಸಭೆಯ ನಡವಳಿಗಳನ್ನು ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

## ವಿಷಯ ಸಂಖ್ಯೆ-02

**ಹಿಂದಿನ ಸಭೆಯಲ್ಲಿ ಮುಂದೂಡಿದ ವಿಷಯ: ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಬಿಎಂಟಿಸಿ ಸಂಸ್ಥೆಯಿಂದ ಹಳೆಯ ಬಸ್‌ಗಳನ್ನು ಖರೀದಿಸಲು ಅನುಮೋದಿಸುವ ಕುರಿತು**

ಪ್ರಸ್ತಾವನೆ:-

2020-21ನೇ ಸಾಲಿನ ಸರ್ಕಾರದ ಆಯವ್ಯಯ ಭಾಷಣದ ಕಂಡಿಕೆ 138ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಆರು ವರ್ಷದೊಳಗಿನ ಮಕ್ಕಳ ಪಾಲನೆ ಪೋಷಣೆ ಮಾಡಲು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ 10 ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ಒಳಗೊಂಡಂತೆ ಒಟ್ಟು 110 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ಘೋಷಿಸಿರುತ್ತಾರೆ.

ಅದರಂತೆ, ದಿನಾಂಕ:23-03-2020 ರಂದು ಜರುಗಿದ 29ನೇ ಮಂಡಳಿಯ ಸಭೆಯಲ್ಲಿ ವಿಷಯ ಸಂಖ್ಯೆ-11 ರಲ್ಲಿ 10 ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಬಿ.ಎಂ.ಟಿ.ಸಿ ಸಂಸ್ಥೆಯಿಂದ ಹಳೆಯ ಬಸ್‌ಗಳನ್ನು ಖರೀದಿಸುವ ಕುರಿತು ಮಂಡಳಿಯ ಕಾರ್ಯಸೂಚಿಯಲ್ಲಿ ತೆಗೆದುಕೊಳ್ಳಲಾಗಿರುತ್ತದೆ. ಸದರಿ ಸಭೆಯಲ್ಲಿ ಸದರಿ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ನಿರ್ಣಯಿಸಲಾಗಿರುತ್ತದೆ.

2020-21ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿರುವಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 10 ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ಉದ್ದೇಶಿಸಲಾಗಿರುತ್ತದೆ. ಈ ಕುರಿತು ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರ ಪತ್ರ ಸಂಖ್ಯೆ ಬೆಮಸಾಸಂಸ್ಥೆ/ಕೇಕ/ಮುತಾಂಶಿ(ಉ)662/2019-20, ದಿನಾಂಕ:26-11-2019 ರನ್ವಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ರವರಿಗೆ ಪತ್ರಿಸಿ ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ನಡೆಸುವ ಸಲುವಾಗಿ ಸದರಿ ಸಂಸ್ಥೆ ವತಿಯಿಂದ 05 ಬಸ್‌ಗಳನ್ನು ಮಾರ್ಪಾಡು ಮಾಡಿ ನೀಡುವಂತೆ ಕೋರಿದ ಹಿನ್ನಲೆಯಲ್ಲಿ 05 ಬಸ್‌ಗಳನ್ನು ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ಗುರುತಿಸಿದ್ದು, ಸದರಿ ಬಸ್‌ಗಳ ವಿವರ ಮತ್ತು ಅಂದಾಜು ಮೊತ್ತ ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ಬಸ್ ಸಂಖ್ಯೆ | ಮಾದರಿ | ಅಂದಾಜು ರೂ.ಗಳಲ್ಲಿ 18% (ಜಿಎಸ್‌ಟಿ ಹೊರತು ಪಡಿಸಿ) |
|---|---|---|---|
| 1 | ಕೆಎ-01 ಎಫ್‌ಎ 0025 | ಲೇಲ್ಯಾಂಡ್ ಬಿ.ಎಸ್-3 | 3,13,045.00 |
| 2 | ಕೆಎ-01 ಎಫ್‌ಎ 0823 | ಲೇಲ್ಯಾಂಡ್ ಬಿ.ಎಸ್-3 | 3,00,658.00 |
| 3 | ಕೆಎ-01 ಎಫ್‌ಎ 0822 | ಲೇಲ್ಯಾಂಡ್ ಬಿ.ಎಸ್-3 | 2,99,934.00 |
| 4 | ಕೆಎ-01 ಎಫ್‌ಎ 0081 | ಲೇಲ್ಯಾಂಡ್ ಬಿ.ಎಸ್-3 | 2,96,658.00 |
| 5 | ಕೆಎ-01 ಎಫ್ 3939 | ಲೇಲ್ಯಾಂಡ್ ಬಿ.ಎಸ್-3 | 2,98,658.00 |
| | ಒಟ್ಟು | | 15,08,953.00 |

ಮೇಲೆ ತಿಳಿಸಿರುವ ಅಂದಾಜು ದರಕ್ಕೆ ಹೊರತಾಗಿ ಬಸ್‌ಗಳನ್ನು ಒಳ ಮತ್ತು ಹೊರಭಾಗಗಳನ್ನು ಸೂಕ್ತ ಮಾರ್ಪಾಡುಗಳನ್ನು ಮಾಡಲು ಮತ್ತು ಬಣ್ಣ ಲೇಪನ ಇತ್ಯಾದಿಗಳಿಗೆ ಪ್ರತಿ ಬಸ್ಸಿಗೆ ಅಂದಾಜು ರೂ.1,75,000/- ಹೆಚ್ಚುವರಿ ವೆಚ್ಚ ಆಗುತ್ತದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಪತ್ರ ಸಂಖ್ಯೆ: ಕಾಇ 304 ಎಲ್‌ಇಟಿ 2020, ದಿನಾಂಕ:16-09-2020 ರನ್ವಯ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಭಾಷಣದ ಕಂಡಿಕೆ 138 ರಲ್ಲಿ ಘೋಷಣೆ ಮಾಡಿದಂತೆ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ 10 ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ಒಳಗೊಂಡಂತೆ ಒಟ್ಟು 110 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು ಪರಿಶೀಲಿಸಿ ವಿವರವಾದ ಕ್ರಿಯಾ ಯೋಜನೆ/ಪ್ರಸ್ತಾವನೆ ಕಳುಹಿಸಿಕೊಡುವಂತೆ ಕೋರಿರುತ್ತಾರೆ. ಅದರಂತೆ ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಸದರಿ 05 ಬಸ್‌ಗಳನ್ನು ಬಿ.ಎಂ.ಟಿ.ಸಿ ರವರು ಪ್ರಸ್ತಾಪಿಸಿರುವ ದರಗಳಿಗೆ ಖರೀದಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ-03

**COVID-19 ರ ಲಾಕ್‌ಡೌನ್ ಅವಧಿಯಲ್ಲಿ ಮಂಡಳಿಯಿಂದ ಕಟ್ಟಡ ಮತ್ತು ವಲಸೆ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸಿರುವ ಖರ್ಚು ವೆಚ್ಚದ ಬಗ್ಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು**

**ಪ್ರಸ್ತಾವನೆ:-**

ಕೋವಿಡ್-19 ಹಿನ್ನಲೆಯಲ್ಲಿ ರಾಜ್ಯಾದ್ಯಂತ ಲಾಕ್‌ಡೌನ್ ಆದ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಾಇ 170 ಸ್ಲೀಮಠ 2018 (ಭಾ-7) ದಿನಾಂಕ:30-03-2020 ರಲ್ಲಿ ಮಂಡಳಿಯಿಂದ ಬೇಯಿಸಿದ ಅಥವಾ ಬೇಯಿಸದ ಪೌಷ್ಟಿಕಾಂಶ ಭರಿತ ಆಹಾರ/ಊಟ, ಆಹಾರ ಸರಬರಾಜಿಗೆ ವಾಹನ ವ್ಯವಸ್ಥೆ, ಸಹಾಯವಾಣಿ ಸ್ಥಾಪನೆ ಮತ್ತು ಅರಿವು ಕಾರ್ಯಕ್ರಮಗಳನ್ನು ಮಾಡಲು ಆದೇಶಿಸಿರುತ್ತದೆ.ಇದಕ್ಕಾಗಿ ಖರ್ಚಾಗುವ ಮೊತ್ತವನ್ನು ಮಂಡಳಿಯಿಂದ ಭರಿಸುವಂತೆ ಸಹ ತಿಳಿಸಿರುತ್ತದೆ.

ಅದರಂತೆ ಮಂಡಳಿಯಿಂದ ಅರಿವು ಕಾರ್ಯಚಟುವಟಿಕೆಗಳು ಹಾಗೂ ರಕ್ಷಣಾ ಸಾಮಾಗ್ರಿಗಳ ಖರೀದಿ, ಸಿದ್ಧಪಡಿಸಿದ ಆಹಾರ ವಿತರಣೆ, ಆಹಾರ ಸಾಮಾಗ್ರಿಗಳ ಕಿಟ್ ವಿತರಣೆ, ಸಹಾಯವಾಣಿ ಸ್ಥಾಪನೆ ಮಾಡಲಾಗಿರುತ್ತದೆ.

ಅಲ್ಲದೇ, ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಕೋವಿಡ್-19 ಲಾಕ್‌ಡೌನ್ ಹಿನ್ನಲೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಜೀವನಾಧಾರಕ್ಕಾಗಿ ತಲಾ ರೂ.5,000/- ಗಳನ್ನು ಸಂಬಂಧಿಸಿದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ವಿತರಿಸಲಾಗಿರುತ್ತದೆ. ಅವುಗಳ ಖರ್ಚುವೆಚ್ಚಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ವಿಷಯ | ಇದುವರೆವಿಗೂ ಖರ್ಚು ಮಾಡಿರುವ ವೆಚ್ಚ (ಕೋಟಿ ರೂ.ಗಳಲ್ಲಿ) | ವಿವರಗಳು |
|---|---|---|---|
| 1 | IEC ಚಟುವಟಿಕೆ ಮತ್ತು ಕಟ್ಟಡ ಕಾರ್ಮಿಕರಿಗೆ ಅವಶ್ಯಕ ರಕ್ಷಣಾ ವಸ್ತುಗಳ ಖರೀದಿಗಾಗಿ | 4.25 | ರಾಜ್ಯಾದ್ಯಂತ ಅರಿವು ಕಾರ್ಯಕ್ರಮಗಳು ಮತ್ತು ಕಟ್ಟಡ ಕಾರ್ಮಿಕರಿಗೆ ರಕ್ಷಣಾ ವಸ್ತುಗಳಾದ ಮಾಸ್ಕ್ ಸ್ಯಾನಿಟೈಸರ್ ಹಾಗೂ ಸೋಪುಗಳನ್ನು ಖರೀದಿಸಿ ನೀಡಲು ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ತಲಾ ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕಾರ್ಮಿಕ ಅಧಿಕಾರಿ ಕಾರವಾರಕ್ಕೆ ಹೆಚ್ಚುವರಿಯಾಗಿ ರೂ.15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |
| 2 | ಶಿಶುಪಾಲನಾ ಕೇಂದ್ರಗಳಲ್ಲಿನ ಮಕ್ಕಳಿಗೆ Packed Nutrition Food & Toys ಗಳ ವಿತರಣೆ | 0.18 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ 0-6 ವರ್ಷದೊಳಗಿನ ಮಕ್ಕಳ ಹಿತದೃಷ್ಟಿಯಿಂದ ಅವರಿಗೆ Packed Nutrition Food ಒಳಗೊಂಡ ಕಿಟ್‌ಗಳನ್ನು ರಾಜ್ಯಾದ್ಯಂತ ವಿತರಿಸಲು ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಇದಕ್ಕಾಗಿ ರೂ. 18.00 ಲಕ್ಷಗಳನ್ನು ಕಾರ್ಮಿಕ ಅಧಿಕಾರಿಗಳಿಗೆ ಮುಂಗಡವಾಗಿ ಬಿಡುಗಡೆ ಮಾಡಲಾಗಿರುತ್ತದೆ. |
| 3 | ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಸಹಾಯವಾಣಿ ಸ್ಥಾಪನೆ | 2.81 | ಲಾಕ್‌ಡೌನ್ ಸಂದರ್ಭದಲ್ಲಿ ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಮೆ॥Keonics ಸಂಸ್ಥೆಯ ವತಿಯಿಂದ 24*7 ಸಹಾಯವಾಣಿ ಕೇಂದ್ರಗಳನ್ನು ಮಂಡಳಿಯ ಪ್ರಧಾನ ಕಛೇರಿಯ 4ನೇ ಮಹಡಿಯಲ್ಲಿ ಮತ್ತು ರಾಜಾಜಿನಗರದಲ್ಲಿ ಸ್ಥಾಪಿಸಲಾಗಿರುತ್ತದೆ. ಅದಕ್ಕಾಗಿ ಇದುವರೆಗೂ ರೂ.2.72 ಕೋಟಿಗಳನ್ನು ಖರ್ಚು ಮಾಡಲಾಗಿರುತ್ತದೆ. |
| 4 | ಸಿದ್ಧಪಡಿಸಿದ ಆಹಾರದ ವಿತರಣೆ | 26.22 | ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಲಾಕ್ ಡೌನ್ ಸಂದರ್ಭದಲ್ಲಿ ಸಿದ್ಧಪಡಿಸಿದ ಆಹಾರ ಪ್ಯಾಕೆಟ್ ಗಳನ್ನು ವಿತರಿಸಲಾಗಿದ್ದು, ಇದುವರೆಗೂ 89.81 ಲಕ್ಷ ಪ್ಯಾಕೆಟ್‌ಗಳನ್ನು ವಿತರಿಸಿದ್ದು, ವಿವರಗಳನ್ನು ಅನುಬಂಧ -01ರಲ್ಲಿ ನೀಡಿದೆ. |
| 5 | ಆಹಾರ ಸಾಮಾಗ್ರಿಗಳ ಕಿಟ್ ವಿತರಣೆ | 48.11 | ಇದುವರೆಗೂ 6.08 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ಸಂಕಷ್ಟದಲ್ಲಿರುವ ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರುಗಳಿಗೆ ತಯಾರಿಸಿ ವಿತರಿಸಲಾಗಿರುತ್ತದೆ. ಅದರ ವಿವರಗಳನ್ನು ಅನುಬಂಧ-02 ರಲ್ಲಿ ನೀಡಿದೆ. |
| 6 | ಸಿದ್ಧಪಡಿಸಿದ ಆಹಾರ, ನೀರು ಮತ್ತು ಆಹಾರ ಸಾಮಾಗ್ರಿಗಳ ಕಿಟ್ ವಿತರಣೆಗಾಗಿ ವಾಹನ ವೆಚ್ಚ | 1.64 | ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಸಿದ್ಧಪಡಿಸಿದ ಆಹಾರ, ಆಹಾರ ಸಾಮಾಗ್ರಿಗಳ ಕಿಟ್‌ಗಳು ಮತ್ತು ನೀರು ಪೂರೈಸಲು ವಿವಿಧ ಸಂಸ್ಥೆಗಳಿಂದ ವಾಹನ ಸೌಲಭ್ಯವನ್ನು ಪಡೆಯಲಾಗಿರುತ್ತದೆ. ಅದರ ವಿವರಗಳನ್ನು ಅನುಬಂಧ-03 ರಲ್ಲಿ ನೀಡಿದೆ. |
| 7 | ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ತಲಾ ರೂ.5,000/-ಗಳ ಸಹಾಯ ಧನ ವಿತರಣೆ | 824.21 | ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದಂತೆ ಮಂಡಳಿಯ ಫಲಾನುಭವಿಗಳಿಗೆ ಲಾಕ್‌ಡೌನ್ ಸಂದರ್ಭದಲ್ಲಿ ಜೀವನಾಧಾರಕ್ಕಾಗಿ ತಲಾ ರೂ.5,000/-ಗಳಂತೆ ದಿನಾಂಕ: 14-09-2020 ರವರೆಗೆ 16,48,431ಕಟ್ಟಡ ಕಾರ್ಮಿಕರಿಗೆ ಈ ಸಹಾಯಧನ ವಿತರಿಸಲಾಗಿರುತ್ತದೆ. |
| | ಒಟ್ಟು | 907.42 | |

ಮುಂದುವರೆದು, ನೋಂದಾಯಿತ ಮಂಡಳಿಯ ಫಲಾನುಭವಿಗಳಿಗೆ ತಲಾ ರೂ. 5,000/- ಸಹಾಯಧನವನ್ನು DBT ಮೂಲಕ ವಿತರಣೆ ಮಾಡಲು ಸರ್ಕಾರವು ಸೂಚಿಸಿದ ಹಿನ್ನಲೆಯಲ್ಲಿ DBT ಮೂಲಕ ಹಣ ವರ್ಗಾವಣೆಗಾಗಿ State Bank of India, Nimhans ಶಾಖೆ ಇಲ್ಲಿ ಹೊಸದಾಗಿ ಮಂಡಳಿಯ ಹೆಸರಿನಲ್ಲಿ ಖಾತೆ ಸಂಖ್ಯೆ: 39251844144 ಅನ್ನು ತೆರೆಯಲಾಗಿರುತ್ತದೆ.

ಮೇಲ್ಕಂಡ ಅಂಶಗಳಿಗಾಗಿ ಮಂಡಳಿಯು ಈವರೆಗೆ ಮಾಡಿದ ಖರ್ಚುವೆಚ್ಚಗಳಿಗೆಹಾಗೂ DBT ಮೂಲಕ ಹಣ ವರ್ಗಾವಣೆಗಾಗಿ State Bank of India, Nimhans ಶಾಖೆ ಇಲ್ಲಿ ಹೊಸದಾಗಿ ಮಂಡಳಿಯ ಹೆಸರಿನಲ್ಲಿ ತೆರೆಯಲಾದ ಬ್ಯಾಂಕ್ ಖಾತೆಗೆ ಘಟನೋತ್ತರ ಅನುಮೋದನೆ ನೀಡಲು ಕೋರಿ ಸಭೆಗೆ ಮಂಡಿಸಿದೆಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

**ಅಪರ ಮುಖ್ಯ ಕಾರ್ಯದರ್ಶಿಯವರು ಈ ಕುರಿತು ಮಾತನಾಡುತ್ತಾ, ಕಾರ್ಮಿಕ ಅಧಿಕಾರಿಗಳಿಗೆ ಐಇಸಿ ಚಟುವಟಿಕೆ ಕೈಗೊಳ್ಳಲು ಬಿಡುಗಡೆ ಮಾಡಿದ ರೂ.10.00 ಲಕ್ಷಗಳ ಮತ್ತು ಶಿಶುಪಾಲನಾ ಕೇಂದ್ರಗಳಲ್ಲಿನ ಮಕ್ಕಳಿಗೆ Packed & Nutrition food and Toys ವಿತರಣೆಗಾಗಿ ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆ ಮಾಡಿದ ಮೊತ್ತಗಳಿಗೆ ಯು.ಸಿ ಗಳನ್ನು ಮತ್ತು ಸದರಿ ಅಧಿಕಾರಿಗಳ ಮೇಲಾಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಪಡೆಯುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.**

**ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ತೆರೆಯಲಾದಸಹಾಯವಾಣಿ ಕೇಂದ್ರಗಳಿಗೆ ಪಾವತಿಸಬೇಕಾದ ಮೊತ್ತದ ಕುರಿತು ಚರ್ಚಿಸಲಾಗಿ, ಸದರಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾದ ವಿವರಗಳು, ಸದರಿ ಸಹಾಯವಾಣಿ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳ ವಿವರ ಮತ್ತು ಇತರೆ ವಿವರಗಳನ್ನು ಪಡೆಯಬೇಕೆಂದು ಅಪರ ಮುಖ್ಯ ಕಾರ್ಯದರ್ಶಿಯವರು ತಿಳಿಸಿದರು.**

**ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು ಮೇಲ್ಕಾಣಿಸಿದ ಕಾರ್ಯಗಳಿಗೆ ಈಗಾಗಲೇ ಹಣವುವೆಚ್ಚವಾಗಿದ್ದರಿಂದಷರತ್ತುಗಳಿಗೆ ಒಳಪಟ್ಟು ಸದರಿ ವೆಚ್ಚಗಳಿಗೆ ಘಟನೋತ್ತರ ಅನುಮೋದನೆ ನೀಡಲು ಸಭೆಗೆ ಕೋರಿದರು. ಈ ಕುರಿತು ಸಮಿತಿ ಸದಸ್ಯರು ಒಪ್ಪಿಗೆ ಸೂಚಿಸುತ್ತಾ ಮೇಲ್ಕಾಣಿಸಿದ ಎಲ್ಲಾ ವೆಚ್ಚಗಳಿಗೆ ಈ ಕೆಳಕಾಣಿಸಿದ ಷರತ್ತುಗಳಿಗೆ ಒಳಪಟ್ಟು ಅನುಮೋದಿಸಲು ತೀರ್ಮಾನಿಸಲಾಯಿತು.**

1. **IEC ಚಟುವಟಿಕೆ ಮತ್ತು ಕಟ್ಟಡ ಕಾರ್ಮಿಕರಿಗೆ ಅವಶ್ಯಕ ರಕ್ಷಣಾ ವಸ್ತುಗಳ ಖರೀದಿಗಾಗಿ ಮತ್ತು ಶಿಶುಪಾಲನಾ ಕೇಂದ್ರಗಳಲ್ಲಿನ ಮಕ್ಕಳಿಗೆ Packed Nutrition Food & Toys ಗಳ ವಿತರಣಾ ವೆಚ್ಚಗಳಿಗೆ ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತಕ್ಕೆ ಯು.ಸಿ ಗಳನ್ನು ಮತ್ತು ಅವರ ಮೇಲಾಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಪಡೆಯುವುದು.**
2. **ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಸಹಾಯವಾಣಿ ಸ್ಥಾಪನೆಗೆ ಸಂಬಂಧಿಸಿದಂತೆ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಿರುವ ವಿವರಗಳು ಸದರಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಗಳ ವಿವರಗಳನ್ನು ಮತ್ತು ದಿನಂಪ್ರತಿ ಸ್ವೀಕರಿಸಿದ ದೂರಗಳ ವಿವರಗಳನ್ನು ಪಡೆಯುವುದು. ಮುಂದುವರೆದು, ಈ ಕೆಳಕಂಡ ವಿಷಯಗಳಿಗೆ ಅನುಮೋದನೆ ನೀಡಲಾಯಿತು.**
3. **ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಲಾಕ್‌ಡೌನ್ ಸಂದರ್ಭದಲ್ಲಿ ಸಿದ್ಧಪಡಿಸಿದ ಆಹಾರ ವಿತರಣೆ ಮತ್ತು ಆಹಾರ ಸಾಮಾಗ್ರಿಗಳ ವಿತರಣೆ ಹಾಗೂ ಸಿದ್ಧಪಡಿಸಿದ ಆಹಾರ, ನೀರು ಮತ್ತು ಆಹಾರ**

ಸಾಮಾಗ್ರಿಗಳ ಕಿಟ್ ವಿತರಣೆ ಮಾಡಿದ ವಾಹನ ವೆಚ್ಚ ರೂ.1,64,10,874/- ಗಳಿಗೆ ಅನುಮೋದನೆ ನೀಡಲಾಯಿತು.

4. ಲಾಕ್‌ಡೌನ್ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದಂತೆ, ದಿನಾಂಕ 29-09-2020 ರವರೆಗೆ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ತಲಾ ರೂ.5,000/- ಗಳಂತೆ 16,48,431 ಫಲಾನುಭವಿಗಳಿಗೆ ರೂ.824,21,55,000/- ಸಹಾಯಧನ ವಿತರಿಸಲಾಗಿರುವುದನ್ನು Test Audit ಗೆ ಒಳಪಟ್ಟು ಅನುಮೋದನೆ ನೀಡಲಾಯಿತು.
5. ದಿನಾಂಕ 17-08-2020 ರಂದು 1.75 ಲಕ್ಷ ಕಿಟ್‌ಗಳನ್ನು ಪೂರೈಸಲು ಕಾರ್ಮಿಕ ಆಯುಕ್ತರಿಂದ ಬೇಡಿಕೆ ಬಂದಿರುತ್ತದೆ. ಅದರಂತೆ ರೂ.6.54 ಕೋಟಿಗಳಿಗೆ 1.20 ಲಕ್ಷ ಕಿಟ್‌ಗಳನ್ನು ಒದಗಿಸುಲು ಆದೇಶ ನೀಡಿರುತ್ತದೆ. ಸದರಿ ಪ್ರಸ್ತಾವನೆಗೂ ಕೂಡಾ ಅನುಮೋದನೆ ನೀಡಲಾಯಿತು.

## ವಿಷಯ ಸಂಖ್ಯೆ-04

ಸರ್ಕಾರದ ಆದೇಶ ಸಂಖ್ಯೆ ಕಾಇ 214 ಎಲ್ಇಟಿ 2020 ದಿನಾಂಕ 26-08-2020 ರನ್ವಯ ಕೋವಿಡ್-19 ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸಲು ಕೋವಿಡ್-19 Mission Mode Project ಅಡಿಯಲ್ಲಿ ಈ ಕೆಳಕಂಡ ಕ್ರಮಗಳನ್ನು ಅಳವಡಿಸಿ ಈ ಮಂಡಳಿಯಿಂದ ಜಾರಿಗೊಳಿಸಲು ಆದೇಶಿಸಿದ್ದು ಸದರಿ ವಿಷಯವನ್ನು ಸಭೆಯ ಗಮನಕ್ಕೆ ತರುವ ಕುರಿತು.

ಪ್ರಸ್ತಾವನೆ:-

ದಿನಾಂಕ:16-06-2020ರಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ ಇವರು ನಡೆಸಿದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಅರ್ಹ ಎಲ್ಲಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಗುರುತಿಸಿ ಅವರನ್ನು ಮಂಡಳಿಯಲ್ಲಿ ನೋಂದಾಯಿಸುವ ಬಗ್ಗೆ ವಿಶೇಷ ಗಮನ ಹರಿಸಲು ನಿರ್ದೇಶಿಸಿರುತ್ತಾರೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಕಾಇ 214 ಎಲ್ಇಟಿ 2020, ದಿನಾಂಕ:26-08-2020 ರನ್ವಯ ಕೋವಿಡ್-19 ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಾಯಿಸಲು ಕೋವಿಡ್-19 Mission Mode Project ಅಡಿಯಲ್ಲಿ ಈ ಕೆಳಕಂಡ ಕ್ರಮಗಳನ್ನು ಅಳವಡಿಸಿ ಈ ಮಂಡಳಿಯಿಂದ ಜಾರಿಗೊಳಿಸಲು ಆದೇಶಿಸಿರುತ್ತಾರೆ.

1. ನೋಂದಣಿಗಾಗಿ ಅರ್ಜಿ ಸಲ್ಲಿಸಿದ ನಂತರ ನಿಗಧಿತ ಅವಧಿಯಲ್ಲಿ ಫಲಾನುಭವಿಗಳ ನೋಂದಣಾಧಿಕಾರಿಗಳು ಅರ್ಜಿಯನ್ನು ವಿಲೇವಾರಿ ಮಾಡದೆ ಇದ್ದ ಪಕ್ಷದಲ್ಲಿ ಕಾಲಾವಧಿ ಮೀರಿದ ನಂತರ ಅರ್ಜಿಸಲ್ಲಿಸಿದ ದಿನಾಂಕದಿಂದ ಅಂಗೀಕರಿಸಲಾಗಿದೆ (deemed to be approved from the date of application) ಎಂದು ಪರಿಗಣಿಸುವುದು.
2. ಫಲಾನುಭವಿಗಳ ನೋಂದಣಿ ಮತ್ತು ನವೀಕರಣವನ್ನು ಶುಲ್ಕ ರಹಿತವಾಗಿ ಮಾಡುವುದು.
3. ಫಲಾನುಭವಿಗಳ ರದ್ದಾದ ಸದಸ್ಯತ್ವವನ್ನು ನವೀಕರಿಸಿಕೊಳ್ಳಲು ಪಡೆಯುತ್ತಿರುವ ದಂಡದ ಶುಲ್ಕವನ್ನು ಕೈಬಿಡುವುದು.
4. ಫಲಾನುಭವಿಗಳ ನೋಂದಣಿ ಮತ್ತು ನವೀಕರಣ ಸಂದರ್ಭದಲ್ಲಿ ಪಡೆಯುತ್ತಿರುವ ಉದ್ಯೋಗ ಪ್ರಮಾಣ ಪತ್ರಕ್ಕಾಗಿ ಸ್ವಯಂ ದೃಢೀಕರಣ ಪತ್ರವನ್ನು ಪರಿಗಣಿಸುವುದು.

ಅದರಂತೆ, ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಸದರಿ ವಿಷಯವನ್ನು ಚರ್ಚಿಸಲಾಯಿತು. ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕೆಲವು ಜಿಲ್ಲೆಗಳಲ್ಲಿ ಒಂದೇ ದಿನ ಸಾವಿರಾರು ಅರ್ಜಿಗಳು ನೋಂದಣಿಗಾಗಿ ಸ್ವೀಕೃತಗೊಂಡಿದ್ದು ಕೆಲವು ಏಜೆಂಟ್‌ಗಳು ಈ ಕೆಲಸದಲ್ಲಿ ಭಾಗಿಯಾಗಿದ್ದು, ಆರ್ಥಿಕ ಭದ್ರತೆಯಿರುವ ಕಟ್ಟಡ ಕೆಲಸ ನಿರ್ವಹಿಸದೆ ಇರುವವರು ಕೂಡ ಅರ್ಜಿ ಸಲ್ಲಿಸಿ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಸಿಗುವಂತಹ ಪ್ರಯೋಜನವನ್ನು ಪಡೆದಿರುವುದು ಕಂಡುಬಂದಿದ್ದು, ನಿಜವಾದ ಫಲಾನುಭವಿಗಳು ಸೌಲಭ್ಯ ವಂಚಿತರಾಗಿರುತ್ತಾರೆಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಆದಕಾರಣ ಈ ಬಗ್ಗೆ ಕಾರ್ಮಿಕ ಇಲಾಖೆಯ ಕ್ಷೇತ್ರಾ ಮಟ್ಟದ ಅಧಿಕಾರಿಗಳ ಪರಿಶೀಲನೆಯನ್ನು ಕಡ್ಡಾಯ ಮಾಡಿ ಅವರುಗಳಿಗೆ ಜವಾಬ್ದಾರಿ ನೀಡುವ ಮೂಲಕ ಆಗಿರುವ ತಪ್ಪುಗಳನ್ನು ಸರಿಪಡಿಸಬೇಕಾಗಿದೆ. ಇದಕ್ಕಾಗಿ ಎಲ್ಲರೂ ಕೈಜೋಡಿಸಿ ಸೌಲಭ್ಯಗಳ ದುರುಪಯೋಗ ಆಗುವುದನ್ನು ತಡೆಯಲು ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು. ಹಾಜರಿದ್ದ ಕಾರ್ಮಿಕ ಸಂಘದ ಪ್ರತಿನಿಧಿ ಈ ಕುರಿತಾಗಿ ಸೆಲ್ಫ್ ಅಸೆಸ್‌ಮೆಂಟ್‌ನಲ್ಲಿ ಕಾರ್ಮಿಕ ಸಂಘವನ್ನು ಪರಿಗಣಿಸಬೇಕೆಂದು ಸೂಚಿಸಿದರು.**

**ಈ ಸದರಿ ಯೋಜನೆಯನ್ನು ಸೂಕ್ತವಾಗಿ ಅನುಷ್ಠಾನಗೊಳಿಸಲು ಈ ಮೇಲೆ ಚರ್ಚಿಸಿದ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸೂಕ್ತ ಪರಿಹಾರವನ್ನು ಕಂಡು ಹಿಡಿದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.**

## ವಿಷಯ ಸಂಖ್ಯೆ-05

### 2020-21 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ Preventive health care campaign ಯನ್ನು ಪೈಲಟ್ ಪ್ರೊಜೆಕ್ಟ್ ಆಧಾರದ ಮೇಲೆ ಆಯೋಜಿಸಲು ಅನುಮೋದನೆ ನೀಡುವ ಕುರಿತು

**ಪ್ರಸ್ತಾವನೆ:-**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) (ಕರ್ನಾಟಕ) ನಿಯಮಗಳು 2006 ರ ನಿಯಮ 46 ಮತ್ತು 48 ರಡಿ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಕಟ್ಟಡ ಕಾರ್ಮಿಕರು ಕೆಲಸ ಮಾಡುವ ಸಮಯದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ, ವಿವಿಧ ಸಮಸ್ಯೆಗಳಿಗೆ ಒಳಗಾಗುತ್ತಾರೆ. ಅವುಗಳಲ್ಲಿ ಪ್ರಮುಖವಾಗಿ ಶ್ರವಣ ಸಮಸ್ಯೆಗಳು, ನರ ಹಾನಿ, ಚರ್ಮ ರೋಗಗಳು, ಉಸಿರಾಟದ ಕಾಯಿಲೆಗಳು ಇತ್ಯಾದಿ. ಇಂತಹ ಪ್ರಮುಖ ಕಾಯಿಲೆಗಳು ಮತ್ತು ಔದ್ಯೋಗಿಕ ಅಪಾಯಗಳಿಂದ ಪಾರಾಗಲು ಮುನ್ನೆಚ್ಚರಿಕೆ ಮತ್ತು ಪ್ರಾರಂಭಿಕ ತಪಾಸಣೆ ಹಾಗೂ ರೋಗ ನಿರ್ಣಯದಿಂದ ಕಾರ್ಮಿಕರ ಆರೋಗ್ಯವನ್ನು ಕಾಪಾಡಲು ಸಾಧ್ಯವಾಗುತ್ತದೆ.

ಹಾಗಾಗಿ, ಕಾರ್ಮಿಕರ ಹಾಗೂ ಅವರ ಅವಲಂಬಿತರ ಸ್ವಾಸ್ಥ್ಯ ಆರೋಗ್ಯ ಬಲವರ್ಧನೆಗಾಗಿ ಆಗಿಂದಾಗ್ಗೆ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ತರಬೇತಿ, ತಪಾಸಣೆ, ಲ್ಯಾಬ್ ಟೆಸ್ಟ್, ಎಕ್ಸರೇ, ಬಿಪಿ, ಶುಗರ್ ಹಾಗೂ ಇತರೆ ಟೆಸ್ಟ್‌ಗಳನ್ನು ನಡೆಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಮಂಡಳಿಯ ವತಿಯಿಂದ ಎಲ್ಲಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ Preventive Health Care Training and Checkup ಪ್ರಾರಂಭಿಸುವುದು ಅವಶ್ಯಕತೆ ಇರುವುದಾಗಿ ಮನಗಂಡು ಮಂಡಳಿಯು ತನ್ನ 2020-21ನೇ ಸಾಲಿನ ಆಯವ್ಯಯದಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಆರೋಗ್ಯದ ಕುರಿತು ತರಬೇತಿ ನೀಡಲು ಹಾಗೂ ತಪಾಸಣೆ ಜರುಗಿಸಲು ರೂ.150.00 ಕೋಟಿಗಳನ್ನು ಮೀಸಲಿರಿಸಿ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ

ಈ ಕುರಿತು ಈ ಮಂಡಳಿಯಿಂದ ಪತ್ರ ಸಂಖ್ಯೆ: ಕಕಾಮಂ/ಸ.ಸಂ/ಸಿಆರ್-12/2020-21 ದಿನಾಂಕ: 11-09-2020 ರನ್ವಯ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಚಿವ ಸಂಪುಟದ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಪತ್ರ ಸಂಖ್ಯೆ: ಕಾಇ 232 ಎಲ್‌ಇಟಿ 2020 ದಿನಾಂಕ: 18-09-2020 ರನ್ವಯ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಈ ಕೆಳಕಂಡಂತೆ ದ್ವಿಸದಸ್ಯ ಸಮಿತಿಯನ್ನು ರಚಿಸಿ ಆದೇಶಿಸಿರುತ್ತಾರೆ.

1. ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
2. ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು

ಅದರಂತೆ ಸದರಿ ಸಮಿತಿ ಸದಸ್ಯರು ಹೆಚ್‌ಎಲ್‌ಎಲ್, ಪಿಸಿಎಂಹೆಚ್ ಸಂಸ್ಥೆಗಳೊಂದಿಗೆ ಈ ಕುರಿತು ವಿವರವಾಗಿ ಚರ್ಚಿಸಲಾಗಿ ಸದರಿ ಯೋಜನೆಯನ್ನು ಪ್ರಾಯೋಗಿಕವಾಗಿ ಪೈಲಟ್ ಪ್ರೊಜೆಕ್ಟ್ ಆಧಾರದ ಮೇಲೆ ಅನುಷ್ಠಾನಗೊಳಿಸಲು ಇಚ್ಛಿಸಿದ್ದು, ಸದರಿ ಪ್ರಸ್ತಾವನೆಯನ್ನು ವಿವರವಾಗಿ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ, ಸದರಿ ಯೋಜನೆಯನ್ನು ಪೈಲಟ್ ಆಧಾರದ ಮೇಲೆ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.**

**ಮುಂದುವರೆದು, ಹೆಚ್.ಎಲ್.ಎಲ್, ಪಿ.ಸಿ.ಎಂ.ಹೆಚ್ ಸಂಸ್ಥೆಗಳ ಮುಖಾಂತರವಾಗಿ ಯೋಜನೆಯನ್ನು ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಯಿತು. ಇದಕ್ಕೆ ಸಭೆಯು ಇ.ಎಸ್.ಐ ಸಂಸ್ಥೆಯಿಂದ ಅವಶ್ಯಕವಿರುವ ಪರೀಕ್ಷೆಗಳ ವಿವರ ಮತ್ತು ಸಿ.ಜಿ.ಹೆಚ್.ಎಸ್ ದರಗಳನ್ನು ಪಡೆದು ಅದರನ್ವಯ ಮೇಲಿನ ಮೂರು ಸಂಸ್ಥೆಗಳ ಮೂಲಕ ಪ್ರತಿಯೊಂದು ಸಂಸ್ಥೆಯಿಂದ 30,000 ಫಲಾನುಭವಿಗಳಿಗೆ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-06

**2020-21 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ (Nutritional Kits) ಪೌಷ್ಠಿಕ ಆಹಾರದ ಕಿಟ್‌ಗಳನ್ನು ಮತ್ತು ಕಾರ್ಮಿಕರಿಗೆ (Immunity Kits) ಗಳನ್ನು ಕೆಟಿಪಿಪಿ ನಿಯಮಾನುಸಾರ ಟೆಂಡರ್ ಮೂಲಕ ಖರೀದಿಸಿ ವಿತರಿಸಲು ಅನುಮೋದನೆ ನೀಡುವ ಕುರಿತು**

ಪ್ರಸ್ತಾವನೆ:-

2020-21 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ವೈದ್ಯಕೀಯ ಸಹಾಯಧನ ನೀಡುವ ಘಟಕದಲ್ಲಿ ಪೌಷ್ಠಿಕ ಆಹಾರಗಳನ್ನು ಒದಗಿಸಲು ರೂ.100.00 ಕೋಟಿಗಳನ್ನು ಮೀಸಲಿರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಈ ಕುರಿತು ನಿರ್ದೇಶಕರು, ಇಎಸ್‌ಐ ರವರೊಂದಿಗೆ ಚರ್ಚಿಸಲಾಗಿ ಸದರಿಯವರುಗಳು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಮತ್ತು ಕಟ್ಟಡ ಕಾರ್ಮಿಕರಿಗೆ ಈ ಕೆಳಕಾಣಿಸಿದ ಪದಾರ್ಥಗಳುಳ್ಳ (Nutritional Kits)ಪೌಷ್ಠಿಕ ಆಹಾರದ ಕಿಟ್‌ಗಳನ್ನು ಮತ್ತು ಈ ಕೆಳಕಾಣಿಸಿದ ಪದಾರ್ಥಗಳುಳ್ಳ ಕಿಟ್ (Immunity Kits)ಗಳನ್ನು ವಿತರಿಸುವುದು ಸೂಕ್ತವಿದೆ ಎಂದು ಪ್ರಸ್ತಾವನೆಯನ್ನು ನೀಡಿರುತ್ತಾರೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

2013 ರಿಂದ ಜೂನ್-2020 ರವರೆಗೆ ಮಂಡಳಿಯಿಂದ ಹೆರಿಗೆ ಸಹಾಯಧನ ಪಡೆದವರು 3898 ಫಲಾನುಭವಿಗಳು ಮತ್ತು ಶೈಕ್ಷಣಿಕ ಸಹಾಯಧನ ಪಡೆದವರು (ಅಂಗನವಾಡಿಯಿಂದ ಸ್ನಾತಕೋತ್ತರ ಪದವಿ) 4,97,732 ಫಲಾನುಭವಿಗಳು ಇರುತ್ತಾರೆ. 2007-08 ನೇ ಸಾಲಿನಿಂದ 2020-21ನೇ ಸಾಲಿನ ಆಗಸ್ಟ್ ಮಾಹೆಯ ಅಂತ್ಯದವರೆಗೆ ಒಟ್ಟು 25,34,823 ಕಟ್ಟಡ ಕಾರ್ಮಿಕರು ಮಂಡಳಿಯಲ್ಲಿ ನೋಂದಾಯಿಸಿಕೊಂಡಿರುತ್ತಾರೆ.

ಸದರಿಯವರುಗಳಿಗೆ ಮಕ್ಕಳ ವಯಸ್ಸಿನ ಆಧಾರದ ಮೇಲೆ (Nutritional Kits)ಪೌಷ್ಠಿಕ ಆಹಾರದ ಕಿಟ್‌ಗಳನ್ನು ಮತ್ತು (Immunity Kits) ಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಮೂಲಕ ಖರೀದಿಸಿ ನೋಂದಣಿಯ ಜ್ಯೇಷ್ಠತೆಯ ಆಧಾರದ ಮೇಲೆ ವಿತರಿಸಲು ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ:-

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

2020-21 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ (Nutritional Kits) ಪೌಷ್ಠಿಕ ಆಹಾರದ ಕಿಟ್‌ಗಳನ್ನು ಮತ್ತು ಕಾರ್ಮಿಕರಿಗೆ (Immunity Kits) ಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಮೂಲಕ ಖರೀದಿಸಿ ವಿತರಿಸಲು ಅನುಮೋದನೆ ನೀಡುವ ಕುರಿತು ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಇವರು ಮಾತನಾಡುತ್ತಾ, ಈ ಬಗ್ಗೆ ಪ್ರಾರಂಭಿಕ ಸಲಹೆಗಳನ್ನು ಕೇಳಿದ್ದು, 6 ವರ್ಷದಿಂದ ಮಂಡಳಿಯಲ್ಲಿ ನೋಂದಾಯಿಸಲ್ಪಟ್ಟ ಹೆರಿಗೆ ಸೌಲಭ್ಯ ಪಡೆದ ಫಲಾನುಭವಿಗಳ ಮಕ್ಕಳಿಗೆ ಈ ಸೌಲಭ್ಯವನ್ನು ಜಾರಿಗೊಳಿಸುವ ಬಗ್ಗೆ ರೂಪುರೇಷೆಗಳನ್ನು ರೂಪಿಸಲಾಗುತ್ತಿದ್ದು, ಪೂರ್ಣ ಮಾಹಿತಿ / ವಿವರ ಪಡೆದು, ಕಾರ್ಯಕ್ರಮಗಳನ್ನು ಮಾಡುವುದಾಗಿ ತಿಳಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಈ ವಿಷಯವಾಗಿ ಮಾತನಾಡುತ್ತಾ, ಈಗಾಗಲೇ ಇಎಸ್ಐಯಿಂದ ವರದಿಗಳನ್ನು ಪಡೆದಿದ್ದು, ಸದರಿ ಕಿಟ್‌ಗಳಲ್ಲಿ ವಿತರಿಸಲು ಅವಶ್ಯಕತೆ ಇರುವ ಸಾಮಾಗ್ರಿಗಳ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಇಎಸ್ಐ ಇವರನ್ನು ಒಳಗೊಂಡ ಸಮಿತಿಯನ್ನು ರಚಿಸಿ, ಪ್ರಸ್ತಾವನೆಯನ್ನು ಪಡೆದು ಅಗತ್ಯ ಕ್ರಮವಹಿಸಬಹುದಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಈ ಎಲ್ಲಾ ವಿಷಯಗಳ ಕುರಿತು ಎಲ್ಲಾ ಸದಸ್ಯರು ಒಪ್ಪಿ ಸದರಿ ಕಾರ್ಯಕ್ರಮವನ್ನು ನಿಯಮಾನುಸಾರ ಜಾರಿಗೊಳಿಸಲು ಅನುಮೋದನೆ ನೀಡಲಾಯಿತು.

## ವಿಷಯ ಸಂಖ್ಯೆ-07

**ಶ್ರಮ ಸಾಮರ್ಥ್ಯ ಯೋಜನೆಯಡಿಯಲ್ಲಿ ಪ್ರಸ್ತುತ Training-Cum-Tool kit ಸೌಲಭ್ಯವನ್ನು ಸರ್ಕಾರದ ಸ್ವಾಮ್ಯ ಸಂಸ್ಥೆಗಳ ಮೂಲಕ ಒದಗಿಸುತ್ತಿದ್ದು, ಸದರಿ ತರಬೇತಿಗಳನ್ನು ಸರ್ಕಾರದ ಸ್ವಾಮ್ಯ ಸಂಸ್ಥೆಗಳ ಜೊತೆಗೆ ಆರ್‌ಪಿಎಲ್ ಯೋಜನೆಯಡಿಯಲ್ಲಿ Empanel ಗೊಳ್ಳುವ ಏಜೆನ್ಸಿಗಳ ಮೂಲಕ ನಿಯಮಾನುಸಾರ ತರಬೇತಿಗಳನ್ನು ಆಯೋಜಿಸಲು ಅನುಮೋದನೆ ನೀಡುವ ಕುರಿತು**

**ಪ್ರಸ್ತಾವನೆ:-**

ದಿನಾಂಕ: 22-06-2017 ರಂದು ನಡೆದ ಮಂಡಳಿಯ 23ನೇ ಸಭೆಯಲ್ಲಿ ಶ್ರಮ ಸಾಮರ್ಥ್ಯ ಯೋಜನೆ (ಟ್ರೈನಿಂಗ್-ಕಮ್-ಟೂಲ್‌ಕಿಟ್) ಎಂಬ ಪರಿಷ್ಕೃತ ಯೋಜನೆಗೆ ಅನುಮೋದನೆ ದೊರೆತಿದ್ದು, ಅದರನ್ವಯ ದಿನಾಂಕ: 09-11-2017 ರಂದು ಜರುಗಿದ ಸಚಿವ ಸಂಪುಟದ ಸಭೆಯಲ್ಲಿ ಸದರಿ ಯೋಜನೆಗೆ ಅನುಮೋದನೆ ದೊರಕಿದ್ದು. ಅದರನ್ವಯ ಸರ್ಕಾರವು ಆದೇಶ ಸಂಖ್ಯೆ: ಕಾಇ 196 ಎಲ್‌ಇಟಿ 2017 ದಿನಾಂಕ: 24-11-2017 ಆದೇಶ ಹೊರಡಿಸಿರುತ್ತದೆ.

ಸದರಿ ಆದೇಶದ ಹಿನ್ನಲೆಯಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 2017-18ನೇ ಸಾಲಿನಿಂದ 'ಶ್ರಮ ಸಾಮರ್ಥ್ಯ ಯೋಜನೆ' ಎಂಬ ಶೀರ್ಷಿಕೆಯಡಿ 'ಟ್ರೈನಿಂಗ್-ಕಮ್-ಟೂಲ್‌ಕಿಟ್' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಯೋಜನೆಯಡಿಯಲ್ಲಿ ರಾಜ್ಯದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ತಮಗೆ ಬೇಕಾದ ವೃತ್ತಿ ಕೌಶಲ್ಯ ಮತ್ತು ನೈಪುಣ್ಯತೆಯನ್ನು ಪಡೆಯುವುದಲ್ಲದೇ, ಈ ತರಬೇತಿ ಪಡೆದ ಅರ್ಹ ಕಾರ್ಮಿಕರಿಗೆ ತಮ್ಮ ವೃತ್ತಿಗನುಗುಣವಾದ ಉತ್ತಮ ಗುಣಮಟ್ಟದ ಉಪಕರಣಗಳನ್ನು ಪಡೆಯಲು ಅನುಕೂಲವಾಗುತ್ತದೆ. ಜೊತೆಗೆ, ಕಾರ್ಮಿಕರಿಗೆ ಜೀವನಕೌಶಲ್ಯ, ಆರೋಗ್ಯ ಮತ್ತು ಸ್ವಾಸ್ಥ್ಯಗಳ ಬಗ್ಗೆ ಅರಿವು ಮೂಡಿಸುವುದು, ರಕ್ಷಣಾತ್ಮಕ ಸಲಕರಣೆಯ ಉಪಯೋಗ, ಪ್ರಮಾಣಪತ್ರ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

ಈ ಕಾರ್ಯಕ್ರಮವನ್ನು ಮಂಡಳಿ ಮತ್ತು ವಸತಿ ಇಲಾಖೆಯ ಕೌಶಲ್ಯಶಾಲೆ/ಕಾರ್ನಿಕ್/ನಿರ್ಮಿತಿ ಕೇಂದ್ರಗಳು/ಕ್ಯಾಪ್ಟ್ಯಾಟಿಕ್ ನಿರ್ಮಿತಿ ಕೇಂದ್ರಗಳು ಜಂಟಿಯಾಗಿ ಕಾರ್ಪೋರೇಟ್ ಪಾಲುದಾರ ಸಂಸ್ಥೆಗಳಾದ ಏಷಿಯನ್ ಪೈಂಟ್ಸ್ ಲಿಮಿಟೆಡ್, ಸುಪ್ರೀಮ್ ಇಂಡಸ್ಟ್ರೀಸ್ ಲಿಮಿಟೆಡ್, ಅಲ್ಟ್ರಾಟೆಕ್ ಸಿಮೆಂಟ್

ಲಿಮಿಟೆಡ್, ಮೈಕೋ ಬಾಷ್ ಲಿಮಿಟೆಡ್ ಮತ್ತು ನಿರ್ಮಿತಿ ಕೇಂದ್ರಗಳು/ಕ್ಯಾಪ್ಯೂಟಿಕ್ /ಕಾರ್ನಿಕ್/ಕೌಶಲ್ಯ ಶಾಲೆ ಸಹಯೋಗದೊಂದಿಗೆ ಅನುಷ್ಠಾನಗೊಳಸಲಾಗುತ್ತಿದೆ.

ಸದರಿ ಯೋಜನೆಯಡಿ ಪ್ರಸ್ತುತ ಶಿಬಿರಾರ್ಥಿಗಳಗೆ ೩೦ ದಿನಗಳ ತರಬೇತಿಯನ್ನು ನೀಡಿ ತರಬೇತಿಗೆ ಅನುಗುಣವಾಗಿ ಟೂಲ್ ಕಿಟ್ ಮತ್ತು ಸುರಕ್ಷಾ ಕಿಟ್‌ಗಳನ್ನು ವಿತರಿಸಲಾಗುತ್ತಿದೆ. ಸದರಿ ೩೦ ದಿನಗಳ ತರಬೇತಿಯ ಅವಧಿಯು ಹೆಚ್ಚಾಗಿದ್ದು, ಅಗತ್ಯ ಸಂಖ್ಯೆಯಲ್ಲಿ ತರಬೇತಿಗಾಗಿ ನೋಂದಾಯಿತ ಕಟ್ಟಡ ಕಾರ್ಮಿಕರು ಲಭ್ಯವಾಗುತ್ತಿಲ್ಲ ಮತ್ತು ಈ ಅವಧಿಯಲ್ಲಿ ಸದರಿ ಶಿಬಿರಾರ್ಥಿಗಳಗೆ ನೀಡುತ್ತಿರುವ ವೇತನನಷ್ಟ ರೂ.೨೪೦/- ಕೂಡ ಸಾಕಾಗುತ್ತಿಲ್ಲ ಎಂದು ಹಲವಾರು ಅಹವಾಲುಗಳು ಮಂಡಳಗೆ ಬಂದಿವೆ. ಪ್ರಸ್ತುತ *MGNREGA*ವೇತನವನ್ನು ಯೋಜನೆಯಡಿಯಲ್ಲಿ ರೂ.೨೮೫/- ಗಳ ವೇತನ ನೀಡುತ್ತಿದ್ದು, ಅದರಂತೆ ಸದರಿ ತರಬೇತಿಗೆ ಒಳಪಡುವ ಶಿಬಿರಾರ್ಥಿಗಳಗೆ ರೂ.೨೮೫/- ರಂತೆ ವೇತನ ನಷ್ಟವನ್ನು ಪಾವತಿಸಲು ಸರ್ಕಾರದ ಆದೇಶದಲ್ಲಿ ಸೂಕ್ತ ತಿದ್ದುಪಡಿ ತರಲು ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದಾಗಿದೆ.

ಕಳೆದ ೨೦೧೮, ೨೦೧೯ ಮತ್ತು ೨೦೨೦ನೇ ಸಾಲಿನಲ್ಲಿ ಒಟ್ಟು ೫೬೪೬ ಕಟ್ಟಡ ಕಾರ್ಮಿಕರು ಮಾತ್ರ ಸದರಿ ಯೋಜನೆಯ ಸದುಪಯೋಗವನ್ನು ಪಡೆದಿರುತ್ತಾರೆ.

೨೦೨೦-೨೧ ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಸದರಿ ಯೋಜನೆಗೆ ರೂ.೪೦.೦೦ ಕೋಟಿಗಳನ್ನು ಮೀಸಲಿರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಪ್ರಸ್ತುತ ಸದರಿ ಯೋಜನೆಯನ್ನು ಸರ್ಕಾರದ ಸ್ವಾಮ್ಯ ಸಂಸ್ಥೆಗಳ ವತಿಯಿಂದ ಮಾತ್ರ ಏರ್ಪಡಿಸಲಾಗುತ್ತಿದೆ.

ಮಂಡಳಿಯ ೨೦೨೦-೨೧ನೇ ಸಾಲಿನ ಆಯವ್ಯಯದಲ್ಲಿ RPL ಟ್ರೈನಿಂಗ್-ಕಮ್-ಟೂಲ್‌ಕಿಟ್ ಗಾಗಿ ರೂ.೫೦.೦೦ ಕೋಟಿಗಳ (ಅನುಬಂಧ-೨, ಇ.೭) ಮೀಸಲಿರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಸದರಿ ಯೋಜನೆಯಡಿ ವಿವಿಧ ಕೌಶಲ್ಯ ತರಬೇತಿಯನ್ನು ನುರಿತ ತರಬೇತಿ ಸಂಸ್ಥೆಗಳ ಮೂಲಕ ಒದಗಿಸಲು ಕೇಂದ್ರ ಸರ್ಕಾರವು ಸೂಚಿಸಿರುತ್ತದೆ. ಅದರಂತೆ ಸದರಿ ಯೋಜನೆಯಡಿ ತರಬೇತಿ ನೀಡಲು ನುರಿತ ಏಜೆನ್ಸಿಗಳನ್ನು ನೇಮಕ ಮಾಡಿಕೊಳ್ಳಲು ಈಗಾಗಲೇ ಟೆಂಡರ್ ಪ್ರಕಟಿಸಿದ್ದು ಸದರಿ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಅಲ್ಲದೇ,ಅಧಿಸೂಚನೆ (Notification NO:LD 106 LET 2019, BENGALURU, DATED:01-10-2019)ಯಲ್ಲಿತಿಳಸಿರುವಂತೆಸರ್ಕಾರೇತರ ಸಂಸ್ಥೆಗಳಿಂದಲೂ ತರಬೇತಿಯನ್ನು ನೀಡಲು ಅವಕಾಶ ಮಾಡಿಕೊಡಲಾಗಿದೆ.

ಆದುದರಿಂದ, ಪ್ರಸ್ತುತ ಶ್ರಮ ಸಾಮರ್ಥ್ಯ ಯೋಜನೆ (ಟ್ರೈನಿಂಗ್-ಕಮ್-ಟೂಲ್‌ಕಿಟ್) ಯೋಜನೆಯಡಿಯಲ್ಲಿ ತರಬೇತಿ ನೀಡುತ್ತಿರುವ ಸರ್ಕಾರದ ಸ್ವಾಮ್ಯ ಸಂಸ್ಥೆಗಳ ಜೊತೆಗೆ ಆರ್‌ಪಿಎಲ್ ಯೋಜನೆಯಡಿಯಲ್ಲಿ Empanel ಗೊಳ್ಳುವ ನುರಿತ ಏಜೆನ್ಸಿಗಳ ಮೂಲಕ ನಿಯಮಾನುಸಾರ ತರಬೇತಿಗಳನ್ನು ಆಯೋಜಿಸಿದ್ದಲ್ಲಿ ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿ ದಿನಾಂಕ:೨೧-೦೬-೨೦೧೯ ರಂತೆ ಹೊರಡಿಸಿರುವ ಆರ್‌ಪಿಎಲ್ ಯೋಜನೆಯ ಮಾರ್ಗಸೂಚಿಯಂತೆ ತರಬೇತಿ ಅವಧಿಯನ್ನು ೩೦ದಿನಗಳಿಂದ ೧೨ ಗಂಟೆಯವರೆಗೆ ಕಡಿತಗೊಳಿಸಿದ್ದಲ್ಲಿ ಹೆಚ್ಚಿನ ಕಾರ್ಮಿಕರು ಸದರಿ ಯೋಜನೆಯಡಿ ತರಬೇತಿ ಪಡೆಯಲು ಆಸಕ್ತಿ ತೋರಿಸುವ ಸಂಭವವಿರುತ್ತದೆ.

ಮುಂದುವರೆದು, ಕೆಲವು ತರಬೇತಿಗಳು ಕಡ್ಡಾಯವಾಗಿ ೩೦ ದಿನಗಳವರೆಗೆ ಆಯೋಜಿಸಬೇಕಾಗಿದ್ದು ಅಂತಹ ತರಬೇತಿಗಳನ್ನು ತರಬೇತಿದಾರರಿಂದ ೩೦ ದಿನಗಳವರೆಗೆ ಶಿಬಿರಾರ್ಥಿಗಳಗೆ ತರಬೇತಿಯನ್ನು ನೀಡಲು ಸೂಚಿಸಬಹುದಾಗಿದೆ.ಸದರಿ ವಿಷಯವನ್ನು ಮಂಡಳಿಯ

ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಶ್ರೀ ಮೋಹನ್ ರಾವ್, ಕಾರ್ಯದರ್ಶಿಗಳು, ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ ರವರು ಮಾತನಾಡಿ ತಮ್ಮ ಸಂಘಟನೆ ವತಿಯಿಂದ ಸದರಿ ತರಬೇತಿಯು ಕೈಗೊಳ್ಳಲು ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ತಮ್ಮನ್ನು ಸಹ ತರಬೇತಿ ನೀಡಲು ಪರಿಗಣಿಸುವಂತೆ ಕೋರಿದರು, ಹಾಗೂ ತರಬೇತಿಯನ್ನು ನೀಡಿದ ಶಿಭಿರಾರ್ಥಿಗಳಿಗೆ ಉದ್ಯೋಗವನ್ನು ನೀಡುವ ಭರವಸೆ ನೀಡಿದರು.**

**ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು, ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ ರವರು ಕಟ್ಟಡ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಉತ್ತಮ ಕಾರ್ಯನಿರ್ವಹಿಸುತ್ತಿದ್ದು ಈ ಹಿಂದೆ ಸಹ ಹಲವಾರು ತರಬೇತಿ ನೀಡಿರುತ್ತಾರೆ. ಆದ್ದರಿಂದ ಸದರಿಯವರನ್ನು ಪರಿಗಣಿಸಲು ಕಾರ್ಯದರ್ಶಿಗಳಿಗೆ ಸೂಚಿಸಿದರು.**

**ಮುಂದುವರೆದು, ಅಧ್ಯಕ್ಷರು ಹಾಗೂ ಸಚಿವರು ತರಬೇತಿಯೊಂದಿಗೆ ಉದ್ಯೋಗವನ್ನು ನೀಡುವುದು ಮುಖ್ಯವಾಗಿದ್ದು, ಅವಶ್ಯಕತೆ ಇರುವ ಕಡೆ ತರಬೇತಿ ನೀಡಲು ಸೂಚಿಸಿದರು.ಈ ಪ್ರಸ್ತಾವನೆಯನ್ನು ಅಧ್ಯಕ್ಷರ ಒಪ್ಪಿಗೆಯೊಂದಿಗೆ ಪರಿಗಣಿಸಲಾಗುವುದೆಂದು ತಿಳಿಸಿದರು. ಬಿಲ್ಡರ್ ಅಸೋಸಿಯೇಷನ್ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು ಮಾತನ್ನು ಮುಂದುವರೆಸುತ್ತಾ, ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ನೀಡಿರುವ ಟೂಲ್ ಕಿಟ್‌ಗಳನ್ನು ಉಪಯೋಗಿಸದೇ ಹಾಗೆಯೇ ಇರುವುದಾಗಿ, ಅದನ್ನು ವಾಪಾಸ್ಸು ಪಡೆಯಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.ರಾಜ್ಯದಲ್ಲಿರುವ ನಿರ್ಮಿತಿ ಕೇಂದ್ರಗಳು ಸರಿಯಾಗಿ ಕಾರ್ಯ ನಿರ್ವಹಿಸದ ಬಗ್ಗೆ ಸಚಿವರು ಅಸಾಮಾಧಾನ ವ್ಯಕ್ತಪಡಿಸುತ್ತಾ, ಬೆಂಗಳೂರಿನಲ್ಲಿ ಇರುವ ನಿರ್ಮಿತಿ ಕೇಂದ್ರಗಳಿಗೆ ನೀಡಿರುವ 20 ಲಕ್ಷ ಅನುದಾನವನ್ನು ಯಾವುದೇ ಕೆಲಸ ಕಾರ್ಯಗಳು ಆಗದೇ ಇರುವ ಕಾರಣ ವಾಪಾಸ್ಸು ಪಡೆಯುವ ಬಗ್ಗೆ ಚರ್ಚಿಸಲಾಯಿತು.**

**ಈ ಕುರಿತು ಎಲ್ಲಾ ಸದಸ್ಯರು ಶ್ರಮ ಸಾಮರ್ಥ್ಯ ಯೋಜನೆಯಡಿಯಲ್ಲಿ ಪ್ರಸ್ತುತ Training-Cum-Tool kit ಸೌಲಭ್ಯವನ್ನು ಸರ್ಕಾರದ ಸ್ವಾಮ್ಯ ಸಂಸ್ಥೆಗಳ ಮೂಲಕ ಒದಗಿಸುತ್ತಿದ್ದು, ಸದರಿ ತರಬೇತಿಗಳನ್ನು ಸರ್ಕಾರದ ಸ್ವಾಮ್ಯ ಸಂಸ್ಥೆಗಳ ಜೊತೆಗೆ ಆರ್‌ಪಿಎಲ್ ಯೋಜನೆಯಡಿಯಲ್ಲಿ Empanel ಗೊಳ್ಳುವ ಏಜೆನ್ಸಿಗಳ ಮೂಲಕ ನಿಯಮಾನುಸಾರ ತರಬೇತಿಗಳನ್ನು ಆಯೋಜಿಸಲು ತಮ್ಮ ಒಪ್ಪಿಗೆಯನ್ನು ಸೂಚಿಸಿದರು.**

**ವಿಷಯ ಸಂಖ್ಯೆ-08**

**ಶ್ರಮ ಸಾಮರ್ಥ್ಯ ಯೋಜನೆಯಡಿಯಲ್ಲಿನ Training-Cum-Tool kit ಕಾರ್ಯಕ್ರಮವನ್ನು 1) Providing Training-Cum-Toolkit ಮತ್ತು 2) Distribution of Toolkits ಕಾರ್ಯಕ್ರಮಗಳಾಗಿ ಪರಿವರ್ತನೆ ಮಾಡಿ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು.**

ಪ್ರಸ್ತಾವನೆ:-

ದಿನಾಂಕ: 22-06-2017 ರಂದು ನಡೆದ ಮಂಡಳಿಯ 23ನೇ ಸಭೆಯಲ್ಲಿ ಶ್ರಮ ಸಾಮರ್ಥ್ಯ ಯೋಜನೆ (ಟ್ರೈನಿಂಗ್-ಕಮ್-ಟೂಲ್‌ಕಿಟ್) ಎಂಬ ಪರಿಷ್ಕೃತ ಯೋಜನೆಗೆ ಅನುಮೋದನೆ ದೊರೆತಿದ್ದು,

ಅದರನ್ವಯ ದಿನಾಂಕ: 09-11-2017 ರಂದು ಜರುಗಿದ ಸಚಿವ ಸಂಪುಟದ ಸಭೆಯಲ್ಲಿ ಸದರಿ ಯೋಜನೆಗೆ ಅನುಮೋದನೆ ದೊರಕಿದ್ದು, ಅದರನ್ವಯ ಸರ್ಕಾರವು ಆದೇಶ ಸಂಖ್ಯೆ: ಕಾಇ 196 ಎಲ್ಇಟಿ 2017 ದಿನಾಂಕ: 24-11-2017 ಆದೇಶ ಹೊರಡಿಸಿರುತ್ತದೆ.

ಸದರಿ ಆದೇಶದ ಹಿನ್ನಲೆಯಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 2017-18ನೇ ಸಾಲಿನಿಂದ 'ಶ್ರಮ ಸಾಮರ್ಥ್ಯ ಯೋಜನೆ' ಎಂಬ ಶೀರ್ಷಿಕೆಯಡಿ 'ಟ್ರೈನಿಂಗ್-ಕಮ್-ಟೂಲ್‌ಕಿಟ್' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಯೋಜನೆಯಡಿಯಲ್ಲಿ ರಾಜ್ಯದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ತಮಗೆ ಬೇಕಾದ ವೃತ್ತಿ ಕೌಶಲ್ಯ ಮತ್ತು ನೈಪುಣ್ಯತೆಯನ್ನು ಪಡೆಯುವುದಲ್ಲದೇ, ಈ ತರಬೇತಿ ಪಡೆದ ಅರ್ಹ ಕಾರ್ಮಿಕರಿಗೆ ತಮ್ಮ ವೃತ್ತಿಗನುಗುಣವಾದ ಉತ್ತಮ ಗುಣಮಟ್ಟದ ಉಪಕರಣಗಳನ್ನು ಪಡೆಯಲು ಅನುಕೂಲವಾಗುತ್ತದೆ. ಜೊತೆಗೆ, ಕಾರ್ಮಿಕರಿಗೆ ಜೀವನಕೌಶಲ್ಯ, ಆರೋಗ್ಯ ಮತ್ತು ಸ್ವಾಸ್ಥ್ಯಗಳ ಬಗ್ಗೆ ಅರಿವು ಮೂಡಿಸುವುದು, ರಕ್ಷಣಾತ್ಮಕ ಸಲಕರಣೆಯ ಉಪಯೋಗ, ಪ್ರಮಾಣಪತ್ರ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

ಈ ಕಾರ್ಯಕ್ರಮವನ್ನು ಮಂಡಳಿ ಮತ್ತು ವಸತಿ ಇಲಾಖೆಯ ಕೌಶಲ್ಯಶಾಲೆ/ಕಾರ್ನಿಕ್/ನಿರ್ಮಿತಿ ಕೇಂದ್ರಗಳು/ಕ್ಯಾಪ್ಟ್ಯುಟೆಕ್ ನಿರ್ಮಿತಿ ಕೇಂದ್ರಗಳು ಜಂಟಿಯಾಗಿ ಕಾರ್ಪೋರೇಟ್ ಪಾಲುದಾರ ಸಂಸ್ಥೆಗಳಾದ ಏಷಿಯನ್ ಪೇಂಟ್ಸ್ ಲಿಮಿಟೆಡ್, ಸುಪ್ರೀಮ್ ಇಂಡಸ್ಟ್ರೀಸ್ ಲಿಮಿಟೆಡ್, ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ಮೈಕೋ ಬಾಷ್ ಲಿಮಿಟೆಡ್ ಮತ್ತು ನಿರ್ಮಿತಿ ಕೇಂದ್ರಗಳು/ಕ್ಯಾಪ್ಟ್ಯುಟೆಕ್/ಕಾರ್ನಿಕ್/ಕೌಶಲ್ಯ ಶಾಲೆ ಸಹಯೋಗದೊಂದಿಗೆ ಅನುಷ್ಟಾನಗೊಳಿಸಲಾಗುತ್ತಿದೆ.

ಸದರಿ ಯೋಜನೆಯಡಿ ಪ್ರಸ್ತುತ ಶಿಬಿರಾರ್ಥಿಗಳಿಗೆ 30 ದಿನಗಳ ತರಬೇತಿಯನ್ನು ನೀಡಿ ತರಬೇತಿಗೆ ಅನುಗುಣವಾಗಿ ಟೂಲ್ ಕಿಟ್ ಮತ್ತು ಸುರಕ್ಷಾ ಕಿಟ್‌ಗಳನ್ನು ವಿತರಿಸಲಾಗುತ್ತಿದೆ.

ಪ್ರಸ್ತುತ ಕೊರೋನಾ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುತ್ತಿರುವ ಈ ಸಮಯದಲ್ಲಿ ತರಬೇತಿ ಸಂಸ್ಥೆಗಳನ್ನು ಮತ್ತು ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಅನುಮತಿ ಇರುವುದಿಲ್ಲ. ಈ ವರ್ಷದ ಅಂತ್ಯದಲ್ಲಿ ಈ ಸಂಸ್ಥೆಗಳಿಗೆ ತರಬೇತಿ ನೀಡಲು ಅನುಮತಿ ಸಿಕ್ಕರೂ ಸಹ ಈ ವರ್ಷದ ತರಬೇತಿಯ ಗುರಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ, ಕಟ್ಟಡ ಕಾರ್ಮಿಕರು ತಮ್ಮ ವೃತ್ತಿ ಅನುಭವದ ಆಧಾರದ ಮೇಲೆ ತಮ್ಮ ವೃತ್ತಿಗೆ ಸಂಬಂಧಪಟ್ಟಂತೆ ನಿಪುಣತೆ ಹೊಂದಿದ್ದು ಸದರಿ ಅವರುಗಳು ತರಬೇತಿಯನ್ನು ಪಡೆಯಲು ಆಸಕ್ತಿ ಹೊಂದಿರುವುದಿಲ್ಲ. ಈ ಕಾರಣಗಳಿಂದಾಗಿ ಸದರಿ ಯೋಜನೆಯು "ಟ್ರೈನಿಂಗ್-ಕಮ್-ಟೂಲ್‌ಕಿಟ್" ಅಂದರೆ ತರಬೇತಿ ಪಡೆದವರಿಗೆ ಮಾತ್ರ ಟೂಲ್‌ಕಿಟ್‌ಗಳನ್ನು ವಿತರಣೆ ಮಾಡುವ ಯೋಜನೆಯಾಗಿರುವುದರಿಂದ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅನಾನುಕೂಲತೆ ಇರುತ್ತದೆ.

ಈ ಹಿನ್ನಲೆಯಲ್ಲಿ, "ಶ್ರಮ ಸಾಮರ್ಥ್ಯ ಯೋಜನೆ"ಯ ಟ್ರೈನಿಂಗ್-ಕಮ್-ಟೂಲ್‌ಕಿಟ್ ತರಬೇತಿ ಕಾರ್ಯಕ್ರಮವನ್ನು 1)Providing Training-Cum-Tool Kit ಮತ್ತು 2) Distribution of Tool Kitsಕಾರ್ಯಕ್ರಮಗಳಾಗಿ ಪರಿವರ್ತನೆಮಾಡಿ ಅನುಷ್ಠಾನಗೊಳಿಸಿದ್ದಲ್ಲಿ ತರಬೇತಿ ಪಡೆಯಲು ಇಚ್ಛಿಸುವ

ಕಾರ್ಮಿಕರು ತರಬೇತಿಯನ್ನು ಪಡೆದ ನಂತರ ತರಬೇತಿಗೆ ಅನುಗುಣವಾಗಿ ಟೂಲ್ ಕಿಟ್ ಮತ್ತು ಸುರಕ್ಷಾ ಕಿಟ್‌ಗಳನ್ನು ಪಡೆಯಬಹುದಾಗಿದೆ ಮತ್ತು ತರಬೇತಿ ಪಡೆಯಲು ಇಚ್ಚಿಸದೇ ಇರುವ ಕಾರ್ಮಿಕರಿಗೆ ಅವರ ವೃತ್ತಿ ಅನುಭವ ಮತ್ತು ಸೇವಾ ಅನುಭವದ ಆಧಾರದ ಮೇಲೆ ವೃತ್ತಿಗೆ ಅನುಗುಣವಾಗಿ ಕಿಟ್‌ಗಳನ್ನು ಜೇಷ್ಠತೆಯ ಆಧಾರದ ಮೇಲೆ ವಿತರಿಸಬಹುದಾಗಿದೆ.

ಈ ರೀತಿ ಸದರಿ ಯೋಜನೆಯನ್ನು "ಟ್ರೈನಿಂಗ್-ಕಮ್-ಟೂಲ್‌ಕಿಟ್" ಕಾರ್ಯಕ್ರಮದಿಂದ 1)Providing Training-Cum-Tool Kit ಮತ್ತು 2) Distribution of Tool Kitsಎಂದು ಎರಡು ಕಾರ್ಯಕ್ರಮಗಳಾಗಿ ವಿಂಗಡಿಸಿದ್ದಲ್ಲಿ ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಬಹುದಾಗಿರುತ್ತದೆ. ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

**ಈ ಕುರಿತು ಮಾತನಾಡಿದ ಶ್ರೀ ಮೋಹನ್‌ರಾವ್ (ಅಧ್ಯಕ್ಷರು, ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ ರವರ ಪರವಾಗಿ) ರವರು ಈವರೆಗೆ ವಿವಿಧ ತರಬೇತಿಗಳನ್ನು ನೀಡಲು ಹಾಗೂ ಸಾಮಾಗ್ರಿಗಳನ್ನು ಖರೀದಿಸಲು ನಿರ್ಮಿತಿ ಕೇಂದ್ರಕ್ಕೆ ಈ ಮಂಡಳಿಯಿಂದ ಅನುದಾನವನ್ನು ಬಿಡುಗಡೆ ಮಾಡಿದ್ದು, ಸದರಿ ಸಾಮಾಗ್ರಿಗಳ ಸ್ಟಾಕ್ ಬಗ್ಗೆ ಮತ್ತು ಬಿಡುಗಡೆ ಮಾಡಿದ ಅನುದಾನಕ್ಕೆ ಖರ್ಚು ಮಾಡಿದ ವಿವರಗಳನ್ನು ಕುರಿತು ಮಾಹಿತಿಯನ್ನು ಪಡೆಯಲು ವಿನಂತಿಸಿಕೊಂಡರು.**

**ಮಾನ್ಯ ಅಪರ ಮುಖ್ಯಕಾರ್ಯದರ್ಶಿಯವರು ತರಬೇತಿ ಇಲ್ಲದೇ ಟೂಲ್‌ಕಿಟ್‌ಗಳನ್ನು ವಿತರಿಸಬೇಕಾಗಿದ್ದರಿಂದ ಸದರಿ ಫಲಾನುಭವಿಗಳು ಮೂಲತಃ ಕಟ್ಟಡ ಕಾರ್ಮಿಕರೆಂದು ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಪಡೆದು ವಿತರಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು.**

**ಕಾರ್ಮಿಕ ಅಧಿಕಾರಿಗಳ ದೃಢೀಕರಣ ಪತ್ರದ ಆಧಾರದ ಮೇಲೆ ತರಬೇತಿ ಪಡೆಯದೆ ಇರುವ ಫಲಾನುಭವಿಗಳಿಗೆ ಅವರ ಸೇವಾ ಅನುಭವ ಮತ್ತು ವೃತ್ತಿಗೆ ಅನುಗುಣವಾಗಿ ಸಾಮಾಗ್ರಿಗಳನ್ನು ವಿತರಿಸಲು ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.**

**ಶ್ರಮ ಸಾಮರ್ಥ್ಯ ಯೋಜನೆಯಡಿಯಲ್ಲಿನ Training-Cum-Tool kit ಕಾರ್ಯಕ್ರಮವನ್ನು 1) Providing Training-Cum-Toolkit ಮತ್ತು 2) Distribution of Toolkits ಕಾರ್ಯಕ್ರಮಗಳಾಗಿ ಪರಿವರ್ತನೆ ಮಾಡಿ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತುಶ್ರಮ ಸಾಮರ್ಥ್ಯ ಯೋಜನೆಯಡಿಯಲ್ಲಿ ತರಬೇತಿ ಪಡೆದವರಿಗೆ ಮಾತ್ರ Training-Cum-Tool kit ನೀಡುವ ಯೋಜನೆಯಿದ್ದು, ೫೫ ವರ್ಷದವರಿಗೆ ಮಾತ್ರ ತರಬೇತಿ ನೀಡುವುದಿದ್ದು, ನಂತರದ ವಯಸ್ಸಿನವರು ತರಬೇತಿ ಮತ್ತು ಟೂಲ್‌ಕಿಟ್ ವಂಚಿತರಾಗುತ್ತಿರುವುದರಿಂದ, ಅವರಿಗೂ ಸಹ ಟೂಲ್ ಕಿಟ್ ನೀಡುವ ಸಂಬಂಧ ಯೋಜನೆ ರೂಪಿಸಲಾಗುತ್ತಿದೆಯೆಂದು ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಇವರು ತಿಳಿಸಿದರು. ಸಚಿವರು ಯೋಜನೆಗಳನ್ನು ಸರಳೀಕರಣ ಮಾಡಿ ಬಡ ಕಾರ್ಮಿಕರಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದರು.**

## ವಿಷಯ ಸಂಖ್ಯೆ-09

**2020-21 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅವಲಂಬಿತರಿಗೆ "ಶ್ರಮಸಾಮರ್ಥ್ಯ ಅವಲಂಭಿತರ ಯೋಜನೆಯಡಿ" ತರಬೇತಿ ಮತ್ತು ವಿವಿಧ ಸಾಮಾಗ್ರಿಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಖರೀದಿಸಿ ವಿತರಿಸಲು ಅನುಮೋದನೆ ನೀಡುವ ಕುರಿತು**

ಪ್ರಸ್ತಾವನೆ:-

2020-21 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅವಲಂಬಿತರಿಗೆ "ಶ್ರಮಸಾಮರ್ಥ್ಯ ಅವಲಂಭಿತರ ಯೋಜನೆಯಡಿ" ರೂ.60.00 ಕೋಟಿಗಳನ್ನು ಮೀಸಲಿರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಲ್‌ಡಿ 106 ಎಲ್‌ಇಟಿ 2019 ದಿನಾಂಕ 01-10-2019 ರನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) (ಕರ್ನಾಟಕ) ನಿಯಮಗಳು 2006 ರ ನಿಯಮಗಳನ್ನು ತಿದ್ದುಪಡಿ ಮಾಡಿ ಹೊಸದಾಗಿ ರೂಲ್ 41(ಎ) ಯನ್ನು ಸೇರ್ಪಡೆ ಮಾಡಿರುತ್ತಾರೆ. ಅದರಂತೆ

41-A Shrama Samsara Samartya training scheme (1) The spouse/Son/daughter of a Register building or other construction worker who are solely dependent or him and who within the age group of 18 to 35 years are eligible to acquire skill training of skill up gradation training.

2) The skill training of skill up-gradation training shall be imparted in building or other construction work and other trades as determined by the board.

3) The skill training of skill upgradation training shall be implemented by the Board jointly with other Govt Departments or Non-Governmental organizations. The component of the training program shall be as decided by the Board.

4) The dependents desirous of obtaining training shall submit an application in Form-15A

ಅದರಂತೆ,ಸದರಿ ಯೋಜನೆಯಡಿ ಕಟ್ಟಡ ಕಾರ್ಮಿಕರ ಅವಲಂಬಿತರಿಗೆ ರೂಲ್ 41(ಎ)(1) ರಂತೆ ವಿವಿಧ ತರಬೇತಿಗಳನ್ನು ನೀಡಬಹುದಾಗಿದೆ ಮತ್ತು 41(ಎ)(3) ರಂತೆ ಸದರಿ ತರಬೇತಿಯ ಅಂಶಗಳ ಕುರಿತು ಮಂಡಳಿಯು ಸೂಕ್ತ ನಿರ್ಧಾರ ಕೈಗೊಳ್ಳಲು ಅಧಿಕಾರ ಪ್ರತ್ಯೇಜಿಸಲಾಗಿರುತ್ತದೆ.

ಅದರಂತೆ, ಕಟ್ಟಡ ಕಾರ್ಮಿಕರ ಅವಲಂಬಿತರಿಗೆ ದಿನಾಂಕ: 24-09-2018 ರ ಸಭೆಯ ವಿಷಯ ಸಂಖ್ಯೆ-15 ರಲ್ಲಿ ನಿರ್ಧರಿಸಿದಂತೆ ಈ ಕೆಳಕಾಣಿಸಿದ ಘಟಕದಡಿ ತರಬೇತಿಯನ್ನು ನೀಡಿ ಸದರಿ ತರಬೇತಿಗೆ ಅನುಗುಣವಾಗಿ ಅವಶ್ಯಕತೆ ಇರುವ ಸಾಮಾಗ್ರಿಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಖರೀದಿಸಿ ವಿತರಿಸಲು ಅನುಮೋದಿಸಲು ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

ತೀರ್ಮಾನ:-

ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.

ಈ ಕುರಿತು ಮಾತನಾಡಿದ ಅಪರ ಮುಖ್ಯ ಕಾರ್ಯದರ್ಶಿಯವರು ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದ ತರಬೇತಿಗಳೊಂದಿಗೆ ಬಿಲ್ಡರ್ಸ್ ಅಸೋಸಿಯೇಷನ್ ವತಿಯಿಂದ ನೀಡಬಹುದಾದಂತಹ ಇತರೆ ತರಬೇತಿಗಳ ಮಾಹಿತಿಯನ್ನು ಪಡೆದು ಸದರಿ ಎಲ್ಲಾ ತರಬೇತಿಗಳನ್ನು ಬೇಡಿಕೆಗೆ ಅನುಗುಣವಾಗಿ ಕೆ.ಟಿ.ಪಿ.ಪಿ ನಿಯಮಾನುಸಾರ ಆಯೋಜಿಸಿ ಸಾಮಾಗ್ರಿಗಳನ್ನು ವಿತರಿಸಲು ತಿಳಿಸಿದರು.

ಮಾನ್ಯ ಅಧ್ಯಕ್ಷರು ಈ ಕುರಿತು ಮಾತನಾಡಿ, ಅವಶ್ಯಕತೆ ಇರುವ ಟೈಲರಿಂಗ್ ಮತ್ತು ಇತರೆ ತರಬೇತಿಗಳನ್ನು ಸೇರಿಸಿಕೊಂಡು, ಸದರಿ ಯೋಜನೆಯನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಕಾರ್ಯದರ್ಶಿಯವರಿಗೆ ಸೂಚಿಸಿದರು.

## ವಿಷಯ ಸಂಖ್ಯೆ-10

**ಲಾಕ್ ಡೌನ್ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರಾದ ಶ್ರೀಮತಿ ಗಂಗಮ್ಮ ರವರು ಸ್ವಂತ ಊರಿಗೆ ಹೋಗುವಾಗ ಅಸ್ವಸ್ಥಗೊಂಡು ಮೃತಪಟ್ಟ ಹಿನ್ನಲೆಯಲ್ಲಿ ರೂ. 3.00 ಲಕ್ಷ ಪರಿಹಾರವನ್ನು ಅವರ ಅವಲಂಬಿತರಿಗೆ ನೀಡಿದ್ದು, ಸದರಿ ಪರಿಹಾರಧನಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು**

ಪ್ರಸ್ತಾವನೆ:-

ಕಟ್ಟಡ ಕಾರ್ಮಿಕಳಾದ ಶ್ರೀಮತಿ ಗಂಗಮ್ಮ ಕೋಂ ಮಲ್ಲಿಕಾರ್ಜುನ ಇವರು ಒಂದು ವರ್ಷದ ಹಿಂದೆ ಕಟ್ಟಡ ನಿರ್ಮಾಣ ಕೆಲಸಕ್ಕಾಗಿ ಸಿಂಧನೂರುನಿಂದ ಬೆಂಗಳೂರಿಗೆ ಆಗಮಿಸಿ ಕೆಂಗೇರಿಯ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅಷ್ಟರಲ್ಲೆ ದಿನಾಂಕ:23-03-2020ರಂದು ಕೊರೋನ ವೈರಸ್ ಸೋಂಕು ರೋಗದ ಹರಡುವಿಕೆಯನ್ನು ತಡೆಗಟ್ಟಲು ಲಾಕ್ ಡೌನ್ ಘೋಷಿಸಲಾಯಿತು. ಲಾಕ್ ಡೌನ್‌ನಿಂದಾಗಿ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸವು ಸ್ಥಗಿತಗೊಂಡು ಎಲ್ಲಾ ಕಾರ್ಮಿಕರು ಸಂದಿಗ್ಧ ಪರಿಸ್ಥಿತಿಗೆ ಒಳಪಟ್ಟು ತಮ್ಮ ಸ್ವಂತ ಊರಿಗೆ ಹೋಗಲು ಬೆಂಗಳೂರಿನಿಂದ ಒಂದೇ ಟ್ರ್ಯಾಕ್ಟರ್‌ನಲ್ಲಿ 37 ಮಂದಿ ಕಾರ್ಮಿಕರು ತಮ್ಮ ತಮ್ಮ ಊರುಗಳಾದ ರಾಯಚೂರು, ಗಂಗಾವತಿ ಮತ್ತು ಸಿಂಧನೂರಿಗೆ ಹೊರಡುವ ಸಮಯದಲ್ಲಿ ದಿನಾಂಕ:30-03-2020 ರಂದು ಪೋಲಿಸರು ಬಳ್ಳಾರಿ ಬಸ್ ನಿಲ್ದಾಣದ ಬಳಿ ಟ್ರ್ಯಾಕ್ಟರ್‌ನ್ನು ತಡೆದು ಎಲ್ಲಾ 37 ಕಾರ್ಮಿಕರಿಗೆ ಜಿಲ್ಲಾಡಳಿತ ವತಿಯಿಂದ ತೆರೆಯಲಾಗಿದ್ದ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಕರೆದುಕೊಂಡು ಹೋಗಿ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಿ ಕ್ವಾರಂಟೈನ್‌ಗೆ ಒಳಪಡಿಸಿರುತ್ತಾರೆ.

ದಿನಾಂಕ: 02-04-2020 ರಂದು ಶ್ರೀಮತಿ ಗಂಗಮ್ಮ ಕೋಂ ಮಲ್ಲಿಕಾರ್ಜುನ ಇವರು ತೀವ್ರ ಜ್ವರದಿಂದ ಬಳಲುತ್ತಿದ್ದ ಕಾರಣ ವಿಮ್ಸ್ ಆಸ್ಪತ್ರೆ, ಬಳ್ಳಾರಿಯಲ್ಲಿ ದಾಖಲಿಸಿ ಚಿಕಿತ್ಸೆಯನ್ನು ನೀಡಲಾಗಿರುತ್ತದೆ. ಆದರೆ ಚಿಕಿತ್ಸೆ ಫಲಕಾರಿಯಾಗದ ಕಾರಣ ದಿನಾಂಕ:05-04-2020ರಂದು ಸಂಜೆ 5.40ರ ಸಮಯದಲ್ಲಿ ಶ್ರೀಮತಿ ಗಂಗಮ್ಮ @ ಪೂಜಾ ಕೋಂ ಮಲ್ಲಿಕಾರ್ಜುನ ಇವರು ಮೃತರಾಗಿರುತ್ತಾರೆಂದು ಸಹಾಯಕ ಕಾರ್ಮಿಕ ಆಯುಕ್ತರು ಬಳ್ಳಾರಿ ವಿಭಾಗ, ದಾವಣಗೆರೆ ಇವರು ಸಲ್ಲಿಸಿದ ವರದಿಯ ಮುಖೇನ ತಿಳಿದು ಬಂದಿರುತ್ತದೆ.

ಆದಕಾರಣ,ದಿವಂಗತ ಶ್ರೀಮತಿ ಗಂಗಮ್ಮ @ ಪೂಜಾ ಕೋಂ ಮಲ್ಲಿಕಾರ್ಜುನ ಇವರು ಕಡು ಬಡವರಾಗಿದ್ದು, ಸದರಿಯವರಿಗೆ ಇಬ್ಬರು ಮಕ್ಕಳಿದ್ದು, ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಮೃತ ಗಂಗಮ್ಮ @ ಪೂಜಾ ಇವರು ನೋಂದಾಯಿತ ಕಟ್ಟಡ ಕಾರ್ಮಿಕರಲ್ಲದಿದ್ದರೂ ಸಹ ಕಟ್ಟಡ ಕಾರ್ಮಿಕರಾದ ಪ್ರಯುಕ್ತ ಸದರಿಯವರ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಇವರಿಗೆ ಮರಣ ಪರಿಹಾರವಾಗಿ ರೂ.3,00,000/-(ಮೂರು ಲಕ್ಷ)ಗಳನ್ನು ಕಾರ್ಮಿಕ ಅಧಿಕಾರಿ ರಾಯಚೂರು ಕಛೇರಿಗೆ ಬಿಡುಗಡೆಗೊಳಿಸಿ ಆ ಇಬ್ಬರು ಮಕ್ಕಳು ಪ್ರಬುದ್ಧಾವಸ್ಥೆಗೆ ಬರುವರೆಗೂ ಅವರುಗಳ ಹೆಸರಿಗೆ (ರೂ.1,50,000/- ಮತ್ತು 1,50,000/-) ಪ್ರತ್ಯೇಕ ನಿಶ್ಚಿತ ಠೇವಣಿ ಬಾಂಡ್‌ಗಳನ್ನು ನೀಡಲು ಮಂಡಳಿವತಿಯಿಂದ ಕ್ರಮ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ಸದರಿಯವರಿಗೆ ನೀಡಿದ ಪರಿಹಾರ ಧನಕ್ಕೆ ಘಟನೋತ್ತರ ಅನುಮೋದನೆಗಾಗಿ ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ, ಈಗಾಗಲೇ ದಿವಂಗತ ಶ್ರೀಮತಿ ಗಂಗಮ್ಮ ರವರಿಗೆ ನೀಡಿದ ಪರಿಹಾರ ಮೊತ್ತಕ್ಕೆ ಘಟನೋತ್ತರ ಮಂಜೂರು ಮಾಡಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ-11

**ಮಂಡಳಿಯ ಅಧಿಕಾರೇತರ ಸದಸ್ಯರುಗಳಿಗೆ ಪ್ರಸ್ತುತ ಪಾವತಿಸುತ್ತಿರುವ ರೂ. 3,000/- ಗಳ ಸಿಟ್ಟಿಂಗ್ ಫೀ ಅನ್ನು ಪರಿಷ್ಕರಿಸುವ ಕುರಿತು**

**ಪ್ರಸ್ತಾವನೆ:-**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮ, 2006 ರ ರಲ್ಲಿ ಸರ್ಕಾರದಿಂದ ಆಯ್ಕೆಯಾದ ಅಧಿಕಾರೇತರ ಸದಸ್ಯರುಗಳಿಗೆ ನಿಯಮ 26 ರಲ್ಲಿ Sitting Fees, Travel allowance & Conveyance allowance ಅನ್ನು ಪಾವತಿಸಲು ಪ್ರಾವದಾನಗಳಿರುತ್ತದೆ. ಅದರಂತೆ, ಸದರಿ ನಿಯಮ 28 ರಲ್ಲಿ ಅಧಿಕಾರೇತರ ಸದಸ್ಯರುಗಳಿಗೆ ಪ್ರಸ್ತುತ ಸಿಟ್ಟಿಂಗ್ ಫೀ ರೂ.3,000/- ಗಳನ್ನು ನಿಗಧಿಪಡಿಸಲಾಗಿರುತ್ತದೆ.

ಮಂಡಳಿಯ ಅಧಿಕಾರೇತರ ಸದಸ್ಯರುಗಳಿಗೆ ಪ್ರಸ್ತುತ ಪಾವತಿಸುತ್ತಿರುವ ರೂ. 3,000/- ಗಳ ಸಿಟ್ಟಿಂಗ್ ಫೀ ಅನ್ನು ಪರಿಷ್ಕರಿಸುವುದು ಅವಶ್ಯಕವಿರುವುದರಿಂದ ಸದರಿ ಸಿಟ್ಟಿಂಗ್ ಫೀ ಯನ್ನು ಪರಿಷ್ಕರಿಸಲು ಹಾಗೂ ಸದರಿ ಪ್ರಸ್ತಾವನೆಯನ್ನು ಅಳವಡಿಸಿ ಸಂಬಂಧಿಸಿದ ನಿಯಮಕ್ಕೆ ಮಾರ್ಪಾಡು ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆಗಾಗಿ ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಮತ್ತು ಸೇವಾ ಷರತ್ತುಗಳು) ನಿಯಮಗಳು 2006 ರ ನಿಯಮ 26ರಲ್ಲಿ ನೀಡಲಾದ ಸೌಲಭ್ಯಗಳ ಜೊತೆಗೆ ಬೆಂಗಳೂರನ್ನು ಹೊರತುಪಡಿಸಿ ಹೊರವಲಯದಿಂದ ಬರುವ ಮಂಡಳಿಯ ಅಧಿಕಾರೇತರ ಸದಸ್ಯರುಗಳಿಂದ ಸ್ವಯಂ ದೃಢೀಕರಣ ಪತ್ರದೊಂದಿಗೆ ಪ್ರಯಾಣ ಭತ್ಯೆ ಬಿಲ್ಲಗಳನ್ನು ಪಡೆದು**

ಪರಿಶೀಲಿಸಿ ಪ್ರತಿ ಕಿಲೋಮೀಟರ್‌ಗೆ ರೂ.20/- ರಂತೆ ಪ್ರಯಾಣ ಭತ್ಯೆಯನ್ನು ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-12

**ಪ್ರಸ್ತುತ ಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿ ನೀಡುತಿರುವ ರೂ. 2.00 ಲಕ್ಷ ಮುಂಗಡ ಸಾಲವನ್ನು ರೂ. 5.00 ಲಕ್ಷಕ್ಕೆ ಹೆಚ್ಚಿಸುವ ಕುರಿತು**

**ಪ್ರಸ್ತಾವನೆ:-**

ಮಂಡಳಿಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ & ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು 2006ರ ನಿಯಮ 42 ರಡಿಯಲ್ಲಿ ನೋಂದಾಯಿತ ಫಲಾನುಭವಿಗಳಿಗೆ ಕಾರ್ಮಿಕ ಗೃಹ ಭಾಗ್ಯ ಸೌಲಭ್ಯವನ್ನು ರೂಪಿಸಲಾಗಿರುತ್ತದೆ. ಈ ಸೌಲಭ್ಯದಡಿ ಅರ್ಜಿ ಸಲ್ಲಿಸುವ ಫಲಾನುಭವಿಯು ಯಾವುದಾದರೂ ಸರ್ಕಾರದ ವಸತಿ ಯೋಜನೆಯಡಿ ಫಲಾನುಭವಿಯೆಂದು ಆಯ್ಕೆಯಾಗಿರಬೇಕಾಗಿರುತ್ತದೆ. ಅಂತಹ ಫಲಾನುಭವಿಗೆ ಮಂಡಳಿ ವತಿಯಿಂದ ಗರಿಷ್ಠ ರೂ.2.00 ಲಕ್ಷಗಳವರೆಗೆ ಫಲಾನುಭವಿಯ ವಂತಿಕೆ ಮೊತ್ತವನ್ನು ಸಾಲದ ರೂಪದಲ್ಲಿ ಸಂಬಂಧಪಟ್ಟ ಸಂಸ್ಥೆಗೆ ಬಿಡುಗಡೆ ಮಾಡಲು ಅವಕಾಶವಿರುತ್ತದೆ.

ಆದರೆ, ಪ್ರಸಕ್ತ ಸಂದರ್ಭದಲ್ಲಿ ಮನೆ ನಿರ್ಮಾಣ ಸಾಮಾಗ್ರಿಗಳ ದರಗಳು ಹೆಚ್ಚಾಗಿರುವುದರಿಂದ ಒಟ್ಟಾರೆ ಮನೆ ನಿರ್ಮಾಣದ ಅಂದಾಜು ವೆಚ್ಚವು ಹೆಚ್ಚಾಗಿರುತ್ತದೆ. ಹಾಗಾಗಿ ಈ ಮೊತ್ತವನ್ನು ಹೆಚ್ಚಿಸುವಂತೆ ಹಲವಾರು ಕಾರ್ಮಿಕ ಸಂಘಟನೆಗಳು ಮತ್ತು ಫಲಾನುಭವಿಗಳು ಕೋರುತ್ತಿರುತ್ತಾರೆ. ಹಾಗಾಗೀ ಕಾರ್ಮಿಕ ಗೃಹ ಭಾಗ್ಯ ಸೌಲಭ್ಯದಡಿ ಪ್ರಸ್ತುತ ನೀಡುತ್ತಿರುವ ರೂ.2.00 ಲಕ್ಷಗಳ ಸಾಲ ಸೌಲಭ್ಯವನ್ನು ರೂ.5.00ಲಕ್ಷದವರೆಗೆ ಹೆಚ್ಚಿಸುವ ಕುರಿತು ಮತ್ತು ಸದರಿ ಪ್ರಸ್ತಾವನೆಯನ್ನು ಅಳವಡಿಸಿ ಸಂಬಂಧಿಸಿದ ನಿಯಮಕ್ಕೆ ಮಾರ್ಪಾಡು ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆಗಾಗಿ ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

**ಶ್ರೀ ಎಸ್.ಎಸ್.ಪ್ರಕಾಶಂ, ಅಧ್ಯಕ್ಷರು, ಐ.ಎನ್.ಟಿ.ಯು.ಸಿ, ಬೆಂಗಳೂರು ರವರು ಸದರಿ ಮೊತ್ತವನ್ನು ಹೆಚ್ಚಿಸಲು ಒಪ್ಪುತ್ತಾ ಸದರಿ ಕಾರ್ಮಿಕ ಗೃಹಭಾಗ್ಯ ಯೋಜನೆಯನ್ನು ವಸತಿ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಇತರೆ ಯೋಜನೆಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಿದ್ದಲ್ಲಿ ಫಲಾನುಭವಿಗಳಿಗೆ ಹೆಚ್ಚಿನ ಸಹಾಯಧನ ಒದಗಿಸಿದಂತಾಗುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.**

ಶ್ರೀ ಕೆ.ವಿಶ್ವನಾಥ್ ಶೆಟ್ಟಿ, ಅಧ್ಯಕ್ಷರು, ಭಾರತೀಯ ಮಜ್ದೂರ್ ಸಂಘ, ಬೆಂಗಳೂರು ರವರು ಮಾತನಾಡುತ್ತಾ ಸದರಿ ಸಾಲ ಸೌಲಭ್ಯದ ಮೊತ್ತವನ್ನು ರೂ.5.00 ಲಕ್ಷಗಳಿಂದ 10.00 ಲಕ್ಷದವರೆಗೆ ಹೆಚ್ಚಿಸಲು ಸಭೆಗೆ ಕೋರಿದರು.

ಮುಂದುವರೆದು, ಶ್ರೀ ಎಸ್.ಎಸ್.ಪ್ರಕಾಶಂ, ಅಧ್ಯಕ್ಷರು, ಐ.ಎನ್.ಟಿ.ಯು.ಸಿ, ಬೆಂಗಳೂರು ರವರು ಮಾತನಾಡುತ್ತಾ, ನೋಂದಣಿಗೊಂಡ ಎಲ್ಲಾ ಕಟ್ಟಡ ಕಾರ್ಮಿಕರಿಗೆ ಬೆಂಗಳೂರು ಗ್ರಾಮೀಣ ಪ್ರದೇಶದಲ್ಲಿ 20*30

ಅಳತೆಯ ಸೈಟುಗಳನ್ನು ಮಂಡಳಿಯಿಂದ ಉಚಿತವಾಗಿ ವಿತರಿಸಿದಲ್ಲಿ ಕಾರ್ಮಿಕರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

ಈ ಕುರಿತು ಮಾತನಾಡಿದ, ಮಾನ್ಯ ಅಧ್ಯಕ್ಷರು ಈ ಕುರಿತು ಸುದೀರ್ಘವಾಗಿ ಚರ್ಚಿಸಿ ನಿರ್ಧರಿಸಲಾಗುವುದೆಂದು ತಿಳಿಸಿದರು.

ಕಾರ್ಮಿಕ ಗೃಹಭಾಗ್ಯ ಯೋಜನೆಯ ಸಾಲ ಸೌಲಭ್ಯದ ಮೊತ್ತವನ್ನು ರೂ.2.00 ಲಕ್ಷದಿಂದ 5.00 ಲಕ್ಷದವರೆಗೆ ಹೆಚ್ಚಿಸಲು ಸಭೆಯ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-13

**ಮಂಡಳಿಯ ಕಾರ್ಯದರ್ಶಿಗಳು ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಹೆಚ್ಚಿನ ಆರ್ಥಿಕ ಅಧಿಕಾರವನ್ನು ಪ್ರತ್ಯೇಜಿಸುವ ಬಗ್ಗೆ**

**ಪ್ರಸ್ತಾವನೆ:-**

ಮಂಡಳಿಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ & ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು 2006ರ ನಿಯಮ 31(ಎ)(3) ರಡಿಯಲ್ಲಿ ಮಂಡಳಿಯ ಕಾರ್ಯದರ್ಶಿಯವರಿಗೆ ಒಂದು ಕೆಲಸಕ್ಕೆ ರೂ.2.00 ಕೋಟಿ ವರೆಗೆ ಆಡಳಿತಾತ್ಮಕ ಅನುಮೋದನೆ ಅಧಿಕಾರವಿರುತ್ತದೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 03 ಟಿಎಫ್‌ಪಿ 2018 ದಿನಾಂಕ 14-05-2018 ರಲ್ಲಿ ಸದರಿ ಅಧಿಕಾರದ ಮೊತ್ತವನ್ನು ಹೆಚ್ಚಿಸಿ ರೂ. 2.50 ಕೋಟಿ ವರೆಗೆ (Estimate of Rs.2.5 crore for one work subject to availability of grants) ಆಡಳಿತಾತ್ಮಕ ಅನುಮೋದನೆ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದರೆ, ಪ್ರಸ್ತುತ ಮಂಡಳಿಯ ಕಾರ್ಯವ್ಯಾಪ್ತಿಯು ವಿಸ್ತೀರ್ಣಗೊಂಡಿದ್ದು ಹಲವಾರು ಹೊಸ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗಳ ಮೊತ್ತವು ರೂ.2.50 ಕೋಟಿಗಿಂತ ಹೆಚ್ಚಿಗೆ ಇರುತ್ತದೆ. ಈಗಾಗಲೇ ಸರ್ಕಾರದ ಇತರೆ ಮಂಡಳಿಗಳ ಮತ್ತು ನಿಗಮಗಳ ಮುಖ್ಯ ಅಧಿಕಾರಿಗಳಿಗೆ ಹೆಚ್ಚಿನ ಮೊತ್ತದ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದಿಂದ ಪ್ರತ್ಯೇಜಿಸಲಾಗಿರುತ್ತದೆ. ಅದರಂತೆ ಪ್ರಸ್ತುತ ಕಾರ್ಯದರ್ಶಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಇರುವ ರೂ.2.50 ಕೋಟಿಗಳ ಆಡಳಿತಾತ್ಮಕ ಅನುಮೋದನೆಯನ್ನು ಹೆಚ್ಚಿಸಲು ಮತ್ತು ಸಂಬಂಧಿಸಿದ ನಿಯಮಕ್ಕೆ ಮಾರ್ಪಾಡು ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆಗಾಗಿ ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.

ಅಧ್ಯಕ್ಷರು ಮಾತನಾಡುತ್ತಾ, ಪ್ರಸ್ತುತ ಮಂಡಳಿಯ ಕಾರ್ಯವ್ಯಾಪ್ತಿಯು ವಿಸ್ತೀರ್ಣಗೊಂಡಿದ್ದು ಹಲವಾರು ಹೊಸ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗಳ ಮೊತ್ತವು ರೂ.2.50

ಕೋಟಿಗಿಂತ ಹೆಚ್ಚಿಗೆ ಇರುತ್ತದೆ. ಈಗಾಗಲೇ ಸರ್ಕಾರದ ಇತರೆ ಮಂಡಳಿಗಳ ಮತ್ತು ನಿಗಮಗಳ ಮುಖ್ಯ ಅಧಿಕಾರಿಗಳಿಗೆ ಹೆಚ್ಚಿನ ಮೊತ್ತದ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದಿಂದ ಪ್ರತ್ಯೇಚಿಸಲಾಗಿರುತ್ತದೆ. ಅದರಂತೆ ಪ್ರಸ್ತುತ ಕಾರ್ಯದರ್ಶಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಇರುವ ರೂ.2.50 ಕೋಟಿಗಳ ಆಡಳಿತಾತ್ಮಕ ಅನುಮೋದನೆಯನ್ನು ರೂ.5.00 ಕೋಟಿಗೆ ಹೆಚ್ಚಿಸಲು ಮತ್ತು ಸಂಬಂಧಿಸಿದ ನಿಯಮಕ್ಕೆ ಮಾರ್ಪಾಡು ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು. ಸದರಿ ವಿಷಯಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು.

## ವಿಷಯ ಸಂಖ್ಯೆ-14

**ಲಾಕ್‌ಡೌನ್ ಸಮಯದಲ್ಲಿ ಸರ್ಕಾರ ಘೋಷಿಸಿದ ರೂ.5,000/- ಗಳ ಕೋವಿಡ್ ಸಹಾಯ ಧನವನ್ನು ಕೋರಿ ಸಲ್ಲಿಸಿರುವ ಬಾಕಿ ಇರುವ ಅರ್ಜಿದಾರರಿಗೆ ಸಹಾಯ ಧನ ವಿತರಿಸುವ ಕುರಿತು**

**ಪ್ರಸ್ತಾವನೆ:-**

ಕೋವಿಡ್-19 ರ ಸಾಂಕ್ರಾಮಿಕ ರೋಗ ಹಿನ್ನಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ನೊಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸರಕಾರದ ಆದೇಶ ಸಂಖ್ಯೆ: ಕಾ.ಇ:170 ಸ್ವೀಮರ 2019(ಭಾಗ) ಬೆಂಗಳೂರು ದಿನಾಂಕ: 24-03-2020 ರಲ್ಲಿ ಪ್ರತಿ ನೋಂದಾಯಿತ ಕಾರ್ಮಿಕರಿಗೆ ರೂ.1000 ಪಾವತಿಸುವಂತೆ ತಿಳಿಸಲಾಗಿದೆ.

ಸರ್ಕಾರದ ಪತ್ರ ಸಂಖ್ಯೆ: ಕಾ.ಇ:170:ಸ್ವೀಮರ:2019(ಭಾಗ) ಬೆಂಗಳೂರು ದಿನಾಂಕ: 04-04-2020 ರಲ್ಲಿ ಪುನ: ಪ್ರತಿ ನೋಂದಾಯಿತ ಕಾರ್ಮಿಕರಿಗೆ ರೂ.1000 ಪಾವತಿಸಲು ತಿಳಿಸಲಾಗಿದೆ.

ಸರ್ಕಾರದ ಪತ್ರ ಸಂಖ್ಯೆ: ಕಾ.ಇ:153:ಎಲ್ಇಟಿ: 2020 ಬೆಂಗಳೂರು ದಿನಾಂಕ: 06-05-2020 ರಲ್ಲಿ ಈಗಾಗಲೇ ನೀಡಿರುವ ರೂ. 2000 ಗಳ ಜೊತೆಗೆ ಹೆಚ್ಚುವರಿಯಾಗಿ ರೂ.3000 ಗಳನ್ನು ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಪಾವತಿಸಲು ತಿಳಿಸಲಾಗಿದೆ.

ಅದರಂತೆ ಈ ಮಂಡಳಿಯಿಂದ ದಿನಾಂಕ:30-06-2020 ರಂದು ಪತ್ರಿಕಾ ಪ್ರಕಟಣೆ ನೀಡಿ ದಿನಾಂಕ:23-03-2020ರ ಅಂತ್ಯಕ್ಕೆ ನೋಂದಾಯಿತರಾದ ಫಲಾನುಭವಿಗಳ ಪೈಕಿ ಇನ್ನೂ ಸಹಾಯಧನ ಪಡೆಯದಿರುವ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ದಿನಾಂಕ:30-06-2020 ರೊಳಗಾಗಿ ಕಾರ್ಮಿಕ ಇಲಾಖೆಯ ಕಛೇರಿಗಳಿಗೆ ಸಲ್ಲಿಸಿ ಸಹಾಯಧನ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಲಾಗಿರುತ್ತದೆ.

ಅದರಂತೆ, ಮಂಡಳಿಯಿಂದ DBT ಆಧಾರ್ ಸಂಖ್ಯೆ ಮುಖಾಂತರ 10,14,656 ಫಲನುಭವಿಗಳಿಗೆ ರೂ.507,32,80,000/- ಗಳನ್ನು ಪಾವತಿಸಲಾಗಿದೆ. ಉಳಿದ ಫಲಾನುಭವಿಗಳಿಗೆ ಮಂಡಳಿಯಿಂದ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ IFSC ಕೋಡ್ ಆಧರಿಸಿ 1,42,096 ಫಲಾನುಭವಿಗಳಿಗೆ ರೂ.71,04,80,000/- ಗಳನ್ನು ಪಾವತಿಸಲಾಗಿರುತ್ತದೆ.

ಸುಮಾರು ಫಲಾನುಭವಿಗಳ ಬ್ಯಾಂಕ್ ಖಾತೆ ಸಂಖ್ಯೆಗಳಲ್ಲಿ ವ್ಯತ್ಯಾಸ, ಆಧಾರ ಸಂಖ್ಯೆಗಳಲ್ಲಿ ವ್ಯತ್ಯಾಸ, IFSC ಕೋಡ್‌ನಲ್ಲಿ ವ್ಯತ್ಯಾಸವಾಗಿದ್ದ ಹಿನ್ನಲೆಯಲ್ಲಿ ಉಳಿದ 10,21,267 ಫಲಾನುಭವಿಗಳ ವಿವರಗಳನ್ನು ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಕಳುಹಿಸಿ ತಮ್ಮ ಹಂತದಲ್ಲಿಯೇ ಸರಿಪಡಿಸಿಕೊಂಡು ಮಂಡಳಿಯಿಂದ ಕೆನರಾ ಬ್ಯಾಂಕ್, ಹೊಂಬೇಗೌಡನಗರ ಇಲ್ಲಿ ತೆರೆದಿರುವ ಬ್ಯಾಂಕ್ ಖಾತೆಯಿಂದ ನೇರವಾಗಿ ಫಲಾನುಭವಿಗಳ ವಿವರ ಸಲ್ಲಿಸಿ RTGS ಮೂಲಕ ಫಲಾನುಭವಿಗಳ ಖಾತೆಗಳಿಗೆ ಪಾವತಿಸಲು ಮಂಡಳಿಯ ಸುತ್ತೋಲೆ ದಿನಾಂಕ: 16-05-2020 ರಲ್ಲಿ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿರುತ್ತದೆ. ಅದರಂತೆ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳು 4,91,679 ಫಲಾನುಭವಿಗಳಿಗೆ ರೂ.245,83,95,000 ಮೊತ್ತವನ್ನು RTGS ಮುಖಾಂತರ ಪಾವತಿಸಿರುತ್ತಾರೆ.

ದಿನಾಂಕ:23-03-2020ರ ಅಂತ್ಯಕ್ಕೆ ನೋಂದಣಿಗೊಂಡಿರುವ ಒಟ್ಟು 21,78,019 ಫಲಾನುಭವಿಗಳ ಪೈಕಿ 16,48,431 ಫಲಾನುಭವಿಗಳು ಸದರಿ ಯೋಜನೆಯಡಿ ಸಹಾಯಧನ ಪಡೆದಿದ್ದು, ಉಳಿದ 5,29,588 ಫಲಾನುಭವಿಗಳಿಗೆ ಸಹಾಯಧನ ಪಾವತಿಸುವುದು ಬಾಕಿ ಇರುತ್ತದೆ.

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಫಲಾನುಭವಿಗಳಿಗೆ ಸಹಾಯಧನ ಒದಗಿಸುವ ಕುರಿತು ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:6742/2020 ದಾಖಲಾಗಿರುತ್ತದೆ. ಆದ್ದರಿಂದ ಪಾವತಿಗೆ ಬಾಕಿಯಿರುವ ಅರ್ಹ ಫಲಾನುಭವಿಗಳಿಗೆ ಸಹಾಯಧನ ಪಾವತಿಸುವ ಕುರಿತು ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

**ಈ ಕುರಿತು ಕಾರ್ಯದರ್ಶಿಗಳು ಮಾತನಾಡುತ್ತಾ, ಪ್ರಸ್ತುತ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರಣೆ ಜರುಗುತ್ತಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು ಹಾಗೂ ಡೆಪ್ಯುಟಿ ಜನರಲ್ ಆಫ್ ಪೋಲೀಸ್ (ಇಂಟೆಲಿಜೆನ್ಸ್) ರವರು, ಈ ಕುರಿತು ಸರ್ಕಾರಕ್ಕೆ ಬರೆದ ಪತ್ರದ ಕುರಿತು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು.**

**ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು ಪ್ರಸ್ತುತ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರಣೆ ಜರುಗುತ್ತಿರುವುದರಿಂದ, ಘನ ನ್ಯಾಯಾಲಯದ ಆದೇಶದಂತೆ ಕ್ರಮ ವಹಿಸಲು ಕಾರ್ಯದರ್ಶಿಗಳಿಗೆ ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು.**

## ವಿಷಯ ಸಂಖ್ಯೆ-15

**ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು Cadre & Recruitment (C&R) Ruleಪ್ರಕಾರ ಭರ್ತಿ ಮಾಡಲು ಅನುಮೋದನೆ ನೀಡುವ ಕುರಿತು**

ಪ್ರಸ್ತಾವನೆ:-

ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ:LD 217 LET 2018ದಿನಾಂಕ:22-06-2020ರಂತೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಈ ಕೆಳಕಂಡಂತೆ ಒಟ್ಟು640 ಅನುಮೋದಿತ ಹುದ್ದೆಗಳು ಸೃಜನೆಗೊಂಡಿರುತ್ತದೆ. ಅವುಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ | ಹುದ್ದೆಗಳ ಪದನಾಮ | ಸೃಜನೆಗೊಂಡ ಹುದ್ದೆಗಳ ಸಂಖ್ಯೆ | ಹಾಲಿ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 1 | ಕಾರ್ಯದರ್ಶಿ | 1 | 1 | – | ನಿಯೋಜನೆ |
| 2. | ಜಂಟಿ ಕಾರ್ಯದರ್ಶಿ | 1 | 1 | – | ನಿಯೋಜನೆ |
| 3. | ಉಪ ಕಾರ್ಯದರ್ಶಿ | 4 | – | 4 | ನಿಯೋಜನೆ |
| 4. | ಡೆಪ್ಯೂಟಿ ಕಂಟ್ರೋಲರ್ | 1 | – | 1 | ನಿಯೋಜನೆ |
| 5. | ವಿಶೇಷ ಅಧಿಕಾರಿ | 1 | – | 1 | ನಿಯೋಜನೆ |
| 6 | ಸಹಾಯಕ ಕಾರ್ಯದರ್ಶಿ | 4 | 1 | 3 | ನಿಯೋಜನೆ |
| 7. | ಅಸಿಸ್ಟೆಂಟ್ ಕಂಟ್ರೋಲರ್ | 2 | – | 2 | ನಿಯೋಜನೆ |
| 8 | ಎಕ್ಸಿಕ್ಯೂಟಿವ್ ಇಂಜಿನಿಯರ್ | 1 | – | 1 | ನಿಯೋಜನೆ |
| 9. | ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ | 1 | – | 1 | ನಿಯೋಜನೆ |
| 10. | ಕಾರ್ಮಿಕ ಅಧಿಕಾರಿ | 7 | 7 | – | ನಿಯೋಜನೆ |
| 11. | ಜೂನಿಯರ್ ಇಂಜಿನಿಯರ್ | 2 | – | 2 | ನಿಯೋಜನೆ |
| 12 | ಸಿಸ್ಟಮ್ ಅನಾಲಿಸ್ಟ್ | 1 | – | 1 | ನೇರ ನೇಮಖಾತಿ |
| 13 | ಪ್ರೋಗ್ರಾಮರ್ (ಡಿಸಾಯಿನ್ ಸಾಫ್ಟ್‌ವೇರ್) | 1 | – | 1 | ನೇರ ನೇಮಖಾತಿ |
| 14 | ಅಸಿಸ್ಟೆಂಟ್‌ಪ್ರೋಗ್ರಾಮರ್: ವೆಬ್ ಡಿಸಾಯಿನ್ &ಟ್ರೈನಿಂಗ್ | 1 | – | 1 | ನೇರ ನೇಮಖಾತಿ |
| 15 | ನೆಟ್‌ವರ್ಕ್ ಅಡ್ಮಿನಿಸ್ಟ್ರೇಟರ್ | 1 | – | 1 | ನೇರ ನೇಮಖಾತಿ |
| 16 | ಅಕೌಂಟ್ಸ್ ಸೂಪರಿಂಟೆಂಡೆಂಟ್ | 2 | – | 2 | ನೇರ ನೇಮಖಾತಿ |
| 17 | ಹಿರಿಯ ಕಾರ್ಮಿಕ ನಿರೀಕ್ಷಕರು | 7 | 4 | 2 | ನಿಯೋಜನೆ |
| 18 | ಕಲ್ಯಾಣ ಅಧಿಕಾರಿ | 35 | – | 35 | ನೇರ ನೇಮಖಾತಿ |
| 19 | ಕ್ಷೇತ್ರ ನಿರೀಕ್ಷಕರು | 215 | – | 215 | ನೇರ ನೇಮಖಾತಿ |
| 20 | ಪ್ರಥಮ ದರ್ಜೆ ಸಹಾಯಕರು | 47 | – | 47 | ನೇರ ನೇಮಖಾತಿ |
| 21 | ಆಪ್ತ ಸಹಾಯಕ | 3 | – | 3 | ನೇರ ನೇಮಖಾತಿ |
| 22 | ಎರಡನೇ ದರ್ಜೆ ಸಹಾಯಕರು | 262 | – | 262 | ನೇರ ನೇಮಖಾತಿ |
| 23 | ಟೆಕ್ನಿಲ್ ಅಂಡ್ ಕನ್ಸ್ಟ್ರಕ್ಷನ್ ಟ್ರೈನಿಂಗ್ ಎಕ್ಸಪರ್ಟ್ | 1 | – | 1 | ನಿಯೋಜನೆ |
| 24 | ಪಿಂಚಣಿ ಹಾಗೂ ವಿಮಾ ತಜ್ಞ | 1 | – | 1 | ನೇರ ನೇಮಖಾತಿ |
| 25 | ಬ್ಯಾಂಕಿಂಗ್ ತಜ್ಞ | 1 | – | 1 | ನೇರ ನೇಮಖಾತಿ |
| 26 | ಕಾನೂನು ಅಧಿಕಾರಿ | 1 | – | 1 | ನೇರ ನೇಮಖಾತಿ |
| 27 | ವಾಹನ ಚಾಲಕ | 10 | – | 10 | ನೇರ ನೇಮಖಾತಿ |
| 28 | ಗ್ರೂಪ್ ಡಿ | 10 | – | 10 | ನೇರ ನೇಮಖಾತಿ |
| 29 | ಹೌಸ್ ಕೀಪಿಂಗ್ | 6 | – | 6 | ನೇರ ನೇಮಖಾತಿ |
| 30 | ಭದ್ರತಾ ಸಿಬ್ಬಂದಿ | 10 | – | 10 | ನೇರ ನೇಮಖಾತಿ |
| | ಒಟ್ಟು ಸಂಖ್ಯೆ | 640 | 14 | 626 | |

a) ಮಂಡಳಿಯಲ್ಲಿ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನಾ ವಿಭಾಗದಲ್ಲಿರುವ, ಉಪ ನಿಯಂತ್ರಕರು-01, ಸಹಾಯಕ ನಿಯಂತ್ರಕರು-02, ಹಾಗೂ ಲೆಕ್ಕ ಅಧೀಕ್ಷಕರು-02 ಹುದ್ದೆಗಳು ಸಿ & ಆರ್ ನಲ್ಲಿ ಮಂಜೂರಾಗಿರುತ್ತವೆ. ಸದರಿ ಹುದ್ದೆಗಳು ಭರ್ತಿಯಾಗಿರುವುದಿಲ್ಲ ಸದರಿ ಖಾಲಿ ಹುದ್ದೆಗಳನ್ನು State Accounts Department ನ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಂದ ನೇಮಕಗೊಳಿಸುವ ಆದೇಶವಿದ್ದು, ಪ್ರಸ್ತುತ ಮಂಡಳಿಯಲ್ಲಿ ಸದರಿ ಹುದ್ದೆಗಳು ಖಾಲಿ ಇದ್ದು, ಕೆಲವು ಕಾರ್ಯಗಳ ಸುಗಮ ನಿರ್ವಹಣೆಗೆ ಸದರಿ

ಅಧಿಕಾರಿಗಳ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಆದಕಾರಣ ಸಂಬಂಧಿಸಿದ ಹುದ್ದೆಗಳನ್ನು ನಿಯೋಜನೆ ಮೇರೆಗೆ ಭರ್ತಿ ಮಾಡಲು ದಿನಾಂಕ:11-09-2020ರಂದು ಪ್ರಧಾನ ನಿರ್ದೇಶಕರು, ರಾಜ್ಯ ಲೆಕ್ಕಪತ್ರ ಹಾಗೂ ಪರಿಶೋಧನ ಇಲಾಖೆ, ಬೆಂಗಳೂರು ರವರಿಗೆ ಪತ್ರ ಬರೆಯಲಾಗಿದೆ.

b) ಮಂಡಳಿಯಲ್ಲಿ ಕಾರ್ಯಪಾಲಕ ಅಭಿಯಂತರರು-01, ಸಹಾಯಕ ಕಾರ್ಯಪಾಲಕ ಅಭಿಯಂತರರು-01 ಹಾಗೂ ಕಿರಿಯ ಅಭಿಯಂತರರು-02 ಹುದ್ದೆಗಳು ಮಂಜೂರಾಗಿದ್ದು. ಸದರಿ ಹುದ್ದೆಗಳು ಭರ್ತಿಯಾಗಿರುವುದಿಲ್ಲ ಖಾಲಿ ಹುದ್ದೆಗಳನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಅಧಿಕಾರಿಗಳಿಂದ ನೇಮಕಗೊಳಿಸುವ ಆದೇಶವಿದ್ದು, ಪ್ರಸ್ತುತ ಮಂಡಳಿಯಲ್ಲಿ ಸದರಿ ಹುದ್ದೆಗಳು ಖಾಲಿ ಇದ್ದು, ಕೆಲಸ ಕಾರ್ಯಗಳ ಸುಗಮ ನಿರ್ವಹಣೆಗೆ ಸದರಿ ಅಧಿಕಾರಿಗಳ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಆದಕಾರಣ ಸಂಬಂಧಿಸಿದ ಹುದ್ದೆಗಳನ್ನು ನಿಯೋಜನೆ ಮೇರೆಗೆ ಭರ್ತಿ ಮಾಡಲು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ,ಬೆಂಗಳೂರು ರವರಿಗೆ ಪತ್ರ ಬರೆಯಲಾಗಿದೆ.

c) ಮಂಡಳಿಯಲ್ಲಿ ನಿಯೋಜನೆ ಮೇರೆಗೆ ನೇಮಕಾತಿಗೆ ಸರ್ಕಾರದ ಅಧಿಕಾರಿಗಳ 25 ಹುದ್ದೆಗಳಿದ್ದು, ಅವುಗಳಲ್ಲಿ ಉಪ ಕಾರ್ಯದರ್ಶಿ-04, ವಿಶೇಷಾಧಿಕಾರಿ-01, ಸಹಾಯಕ ಕಾರ್ಯದರ್ಶಿ-03, ಹಿರಿಯ ಕಾರ್ಮಿಕ ನಿರೀಕ್ಷಕರು-03, ಸದರಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಬೆಂಗಳೂರು ರವರಿಗೆ ಪತ್ರ ಬರೆಯಲಾಗಿದೆ.

d) ಮಂಡಳಿಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸೃಜಿಸಿರುವ ಹುದ್ದೆಗಳು ನೇರ ನೇಮಕಾತಿಯಡಿ ಭರ್ತಿಯಾಗಬೇಕಾಗಿದ್ದು, ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಹದ್ದೆಗಳ ಪದನಾಮ | ಸೃಜನೆಗೊಂಡ ಹುದ್ದೆಗಳ ಸಂಖ್ಯೆ | ಹಾಲಿ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 1 | ಸಿಸ್ಟಮ್ ಅನಾಲಿಸ್ಟ್ | 1 | - | 1 | ನೇರ ನೇಮಖಾತಿ |
| 2 | ಪ್ರೋಗ್ರಾಮರ್ (ಡಿಸಾಯಿನ್ ಸಾಫ್ಟ್‌ವೇರ್) | 1 | - | 1 | ನೇರ ನೇಮಖಾತಿ |
| 3 | ಅಸಿಸ್ಟೆಂಟ್‌ಪ್ರೋಗ್ರಾಮರ್: ವೆಬ್ ಡಿಸಾಯಿನ್ &ಟ್ರೈನಿಂಗ್ | 1 | - | 1 | ನೇರ ನೇಮಖಾತಿ |
| 4 | ನೆಟ್‌ವರ್ಕ್ ಅಡ್ಮಿನಿಸ್ಟ್ರೇಟರ್ | 1 | - | 1 | ನೇರ ನೇಮಖಾತಿ |
| 5 | ಕಲ್ಯಾಣ ಅಧಿಕಾರಿ | 35 | - | 35 | ನೇರ ನೇಮಖಾತಿ |
| 6 | ಕ್ಷೇತ್ರ ನಿರೀಕ್ಷಕರು | 215 | - | 215 | ನೇರ ನೇಮಖಾತಿ |
| 7 | ಪ್ರಥಮ ದರ್ಜೆ ಸಹಾಯಕರು | 47 | - | 47 | ನೇರ ನೇಮಖಾತಿ |
| 8 | ಆಪ್ತ ಸಹಾಯಕ | 3 | - | 3 | ನೇರ ನೇಮಖಾತಿ |
| 9 | ಎರಡನೇ ದರ್ಜೆ ಸಹಾಯಕರು | 262 | - | 262 | ನೇರ ನೇಮಖಾತಿ |
| 10 | ಪಿಂಚಣಿ ಹಾಗೂ ವಿಮಾ ತಜ್ಞ | 1 | - | 1 | ನೇರ ನೇಮಖಾತಿ |
| 11 | ಬ್ಯಾಂಕಿಂಗ್ ತಜ್ಞ | 1 | - | 1 | ನೇರ ನೇಮಖಾತಿ |
| 12 | ಕಾನೂನು ಅಧಿಕಾರಿ | 1 | - | 1 | ನೇರ ನೇಮಖಾತಿ |
| 13 | ವಾಹನ ಚಾಲಕ | 10 | - | 10 | ನೇರ ನೇಮಖಾತಿ |
| 14 | ಗ್ರೂಪ್ ಡಿ | 10 | - | 10 | ನೇರ ನೇಮಖಾತಿ |
| 15 | ಹೌಸ್ ಕೀಪಿಂಗ್ | 6 | - | 6 | ನೇರ ನೇಮಖಾತಿ |
| 16 | ಭದ್ರತಾ ಸಿಬ್ಬಂದಿ | 10 | - | 10 | ನೇರ ನೇಮಖಾತಿ |
| | ಒಟ್ಟು ಸಂಖ್ಯೆ | 605 | - | 605 | |

ಮೇಲಿನ ಕೋಷ್ಟಕದಲ್ಲಿ ಉಲ್ಲೇಖಿಸಿದಂತೆ Cadre & Recruitment (C&R) Rule ಪ್ರಕಾರ ಮಂಡಳಿಯಲ್ಲಿ ಖಾಲಿ ಇರುವ ಹೊರಗುತ್ತಿಗೆ ಮತ್ತು ನೇರ ನೇಮಕಾತಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಅನುಮೋದನೆಗಾಗಿ ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

**ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು, ಅಧಿಸೂಚನೆಯಲ್ಲಿ ಸೃಜನೆಗೊಂಡಿರುವ ಹುದ್ದೆಗಳ ಅವಶ್ಯಕತೆಯನ್ನು ಪುನರ್ ಪರಿಶೀಲಿಸಿ ಅವಶ್ಯಕತೆಗೆ ಅನುಗುಣವಾಗಿ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಮಂಡಳಿಯ ಕಾರ್ಯದರ್ಶಿಗಳ ಅಭಿಪ್ರಾಯ ಪಡೆದು ಸೂಕ್ತ ನಿರ್ಧಾರ ಕೈಗೊಳ್ಳಲು ಅಧ್ಯಕ್ಷರಿಗೆ ಅಧಿಕಾರ ನೀಡಿ ಸಭೆಯು ತೀರ್ಮಾನಿಸಿತು.**

**ವಿಷಯ ಸಂಖ್ಯೆ-16**

**ಮಂಡಳಿಯ ಕಾರ್ಯನಿರ್ವಹಣೆಗೆ ಅವಶ್ಯಕವಿರುವ ವಿವಿಧ ಸಾಫ್ಟ್‌ವೇರ್ ಗಳನ್ನು ಸರ್ಕಾರದ ಸ್ವಾಮ್ಯ ಸಂಸ್ಥೆಗಳು ಅಥವಾ ನುರಿತ ಖಾಸಗಿ ಸಂಸ್ಥೆಗಳಿಂದ ನಿಯಾಮಾನುಸಾರ ಅಭಿವೃದ್ಧಿ ಪಡಿಸಲು ಅನುಮೋದನೆ ನೀಡುವ ಕುರಿತು.**

**ಪ್ರಸ್ತಾವನೆ:-**

ಮಂಡಳಿಯಲ್ಲಿ ಪ್ರಸ್ತುತ ಕಾರ್ಮಿಕರ ನೋಂದಣಿ ಮತ್ತು ನವೀಕರಣ ಹಾಗೂ ಸೌಲಭ್ಯಗಳ ವಿತರಣಾ ಆನ್‌ಲೈನ್ ಕಾರ್ಯಗಳನ್ನು ಸೇವಾಸಿಂಧು ತಂತ್ರಾಂಶ ಮತ್ತು ಕಾರ್ಮಿಕ ತಂತ್ರಾಂಶದ ಮೂಲಕ ಮಾಡಲಾಗುತ್ತಿದೆ. ಆದರೆ ಪ್ರಸ್ತುತ ಸೇವಾಸಿಂಧು ತಂತ್ರಾಂಶದಲ್ಲಿ ಸರ್ವರ್ ತೊಂದರೆಗಳು ಆಗಾಗ್ಗೆ ಕಂಡು ಬರುತ್ತಿದ್ದು, ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳಿಂದ ದೂರುಗಳು ಮಂಡಳಿಯಲ್ಲಿ ಸ್ವೀಕೃತಗೊಳ್ಳುತ್ತಿರುತ್ತವೆ.

ಈ ಹಿನ್ನಲೆಯಲ್ಲಿ, ಕಾರ್ಮಿಕರ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ವಿತರಣಾ ಕಾರ್ಯವನ್ನು ಸರಳೀಕರಣಗೊಳಿಸಿ ಯಾವುದೇ ಕಛೇರಿಗಳಿಗೆ ಹೋಗುವ ಅವಶ್ಯಕತೆ ಇರದೇ ಮೊಬೈಲ್ ಮೂಲಕ ಅರ್ಜಿ ಸಲ್ಲಿಸಬಹುದಾದ ತಂತ್ರಾಂಶವನ್ನು ಸಿದ್ಧಪಡಿಸುವುಸುದು ಸೂಕ್ತವಾಗಿರುತ್ತದೆ.

ಮುಂದುವರೆದು, ಮಂಡಳಿಯಲ್ಲಿ ಕಾಯ್ದೆ ಮತ್ತು ನಿಯಮಗಳನ್ವಯ ಎಲ್ಲಾ ಸಿವಿಲ್ ಕಾಮಗಾರಿಗಳ ಮೇಲೆ ಮತ್ತು ರೂ.10.00 ಲಕ್ಷಗಳ ಮೇಲ್ಪಟ್ಟು ಖಾಸಗಿ ಕಟ್ಟಡ ನಿರ್ಮಿಸುತ್ತಿದ್ದಲ್ಲಿ ಶೇ.1ರಷ್ಟು ಸುಂಕ ಮೊತ್ತವನ್ನು ಸ್ವೀಕರಿಸುತ್ತಿದ್ದು, ಸದರಿ ಸುಂಕ ಮೊತ್ತವನ್ನು ಆನ್‌ಲೈನ್ ಮೂಲಕ ಸ್ವೀಕರಿಸಲು ಅವಶ್ಯಕವಿರುವ ತಂತ್ರಾಂಶ ರೂಪಿಸಿದಲ್ಲಿ ಮಂಡಳಿಗೆ ಬರಬೇಕಾದ ಸುಂಕದ ಮೊತ್ತ, ಸ್ವೀಕರಿಸಿದ ಮೊತ್ತ ಮತ್ತು ಬಾಕಿ ಇರುವ ಮೊತ್ತದ ಬಗ್ಗೆ ಮಾಹಿತಿ ಪಡೆಯಲು ಸಾಧ್ಯವಾಗುತ್ತದೆ ಮತ್ತು ಬಾಕಿ ಉಳಿಸಿಕೊಂಡಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ಬಾಕಿಯನ್ನು ವಸೂಲಿ ಮಾಡಬಹುದಾಗಿರುತ್ತದೆ.

ಅದೇ ರೀತಿ ಮಂಡಳಿಯ ಲೆಕ್ಕಪತ್ರಗಳನ್ನು ಮ್ಯಾನ್ಯುಯಲ್ ಆಗಿ ನಿರ್ವಹಿಸುತ್ತಿದ್ದು, ಸದರಿ ಲೆಕ್ಕಪತ್ರಗಳ ವಿವರಗಳನ್ನು ಆನ್‌ಲೈನ್ ತಂತ್ರಾಂಶದ ಮೂಲಕ ನಿರ್ವಹಿಸಿದಲ್ಲಿ ಮಂಡಳಿಯ ಜಮೆ, ಖರ್ಚುಗಳ ವಿವರ ಮತ್ತು ಇತರೆ ಲೆಕ್ಕಗಳ ಕುರಿತು ನಿಖರವಾದ ಮಾಹಿತಿಯು ಸಕಾಲದಲ್ಲಿ ಪಡೆಯಬಹುದಾಗಿರುತ್ತದೆ.

ಅದೇ ರೀತಿ, ಮಂಡಳಿಯಿಂದ ಕಟ್ಟಡ ಕಾರ್ಮಿಕರಿಗಾಗಿ ವಿವಿಧ ರೀತಿಯ ಸೌಲಭ್ಯಗಳನ್ನು, ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು ಸದರಿ ಯೋಜನೆಗಳ ಫಲಾನುಭವಿಗಳ ಮಾಹಿತಿಯು (Data Base) ನಿರ್ವಹಿಸುವುದು ಮತ್ತು ಒಬ್ಬ ಫಲಾನುಭವಿಯು ಯಾವ ಯಾವ ಯೋಜನೆಯಡಿ ಸೌಲಭ್ಯವನ್ನು ಪಡೆಯಲಾಗಿದೆ ಎಂದು ಪರಿಶೀಲಿಸಲು ಯಾವುದೇ ತಂತ್ರಾಂಶ ಇರುವುದಿಲ್ಲ.

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ ಕಾರ್ಮಿಕರ ನೋಂದಣಿ ಮತ್ತು ನವೀಕರಣ, ಸೆಸ್ ಸಂಗ್ರಹಣೆ, ಲೆಕ್ಕಪತ್ರ ನಿರ್ವಹಣೆ, ಫಲಾನುಭವಿಗಳ ಮಾಹಿತಿಯ ನಿರ್ವಹಣೆ ಮತ್ತು ಅವಶ್ಯಕತೆ ಇರುವ ಇತರೆ ತಂತ್ರಾಂಶಗಳನ್ನು ರೂಪಿಸುವುದು ಅತೀ ಅವಶ್ಯಕತೆ ಇದ್ದು ಸದರಿ ತಂತ್ರಾಂಶಗಳನ್ನು ಸರ್ಕಾರದ ಸ್ವಾಮ್ಯ ಸಂಸ್ಥೆಗಳು ಅಥವಾ ನುರಿತ ಖಾಸಗಿ ಸಂಸ್ಥೆಗಳಿಂದ ನಿಯಾಮಾನುಸಾರ ಅಭಿವೃದ್ಧಿ ಪಡಿಸಲು ಅನುಮೋದನೆ ನೀಡಲು ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಮಂಡಳಿಯ ಕಾರ್ಯನಿರ್ವಹಣೆಗೆ ಅವಶ್ಯವಿರುವ ವಿವಿಧ ಸಾಫ್ಟ್‌ವೇರ್‌ಗಳನ್ನು ತಜ್ಞರಿಂದ ಪರಿಶೀಲಿಸಿ ಅಳವಡಿಸಿಕೊಳ್ಳಲು ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ-17

**ಕಟ್ಟಡ ಕಾರ್ಮಿಕರಾದ ಶ್ರೀಮತಿ ಮಾದೇವಿ ನಾರಾಯಣಗೌಡ ರವರಿಗೆ ವಿಶೇಷ ಪ್ರಕರಣದಡಿ ಮರಣ ಸಹಾಯಧನವನ್ನು ನೀಡುವ ಕುರಿತು.**

**ಪ್ರಸ್ತಾವನೆ:-**

ಶ್ರೀಮತಿ ಮಾದೇವಿ ನಾರಾಯಣಗೌಡ ರವರು ಉತ್ತರ ಕನ್ನಡ ಜಿಲ್ಲೆ ಕುಮುಟಾ ವೃತ್ತ ಇಲ್ಲಿ ಕಟ್ಟಡ ಕಾರ್ಮಿಕರಾಗಿ ನೋಂದಣಿಯಾಗಿರುತ್ತಾರೆ. ಇವರ ನೋಂದಣಿ ಸಂಖ್ಯೆ: LOK-Kumuta/UK/HPR/613/2016-17, ದಿನಾಂಕ:13-03-2017 ಆಗಿರುತ್ತದೆ. ಸದರಿಯವರ ಪತಿಯಾದ ಶ್ರೀ ನಾರಾಯಣಗೌಡ ರವರು ದಿನಾಂಕ:23-04-2020 ರಂದು ಮರಣಹೊಂದಿದ್ದು ಸದರಿಯವರಿಗೆ ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳಿರುತ್ತಾರೆ.

ಆದ್ದರಿಂದ, ಮಾನ್ಯ ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್, ಕಾರ್ಮಿಕ ಮತ್ತು ಸಕ್ಕರೆ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು, ಇವರು ತಮ್ಮ ಟಿಪ್ಪಣಿ ಸಂಖ್ಯೆ:ಕಾ&ಸಸ:703/2020, ದಿನಾಂಕ:20-08-2020 ರಲ್ಲಿ ಕಟ್ಟಡ ಕಾರ್ಮಿಕರಾದ ಶ್ರೀಮತಿ ಮಾದೇವಿ ನಾರಾಯಣ ಗೌಡ ರವರಿಗೆ ಕರ್ನಾಟಕ ಕಟ್ಟಡ ಕಾರ್ಮಿಕರ ನಿಧಿಯಿಂದ ಅನುಕಂಪದ ಆಧಾರದ ಮೇಲೆ ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿಯವರ ಪತಿಯ ಮರಣ ಪರಿಹಾರವನ್ನು ಮಂಜೂರು ಮಾಡುವಂತೆ ಸೂಚಿಸಿರುತ್ತಾರೆ. ಸದರಿ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

**ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸಹಾಯಧನವನ್ನು ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ-18

**ಮಂಡಳಿಯ 2020-2021ನೇ ಸಾಲಿನ ಬಜೆಟ್‌ನಲ್ಲಿ Transit Accommodation ಹಾಗು Housing Scheme ಗಾಗಿ ಮೀಸಲಿಸಿರುವ ಮೊತ್ತವನ್ನು Reallocate ಮಾಡುವ ಬಗ್ಗೆ**

**ಪ್ರಸ್ತಾವನೆ:-**

ಮಂಡಳಿಯ 2020-21ನೇ ಸಾಲಿನ ಆಯವ್ಯಯದಲ್ಲಿ Transit Accommodationಗಾಗಿ ಮೊತ್ತ ರೂ.210.00 ಕೋಟಿ ಹಾಗೂ Housing Schemeಗಾಗಿ ರೂ.500.00 ಕೋಟಿಗಳ ಅನುದಾನವನ್ನುಮೀಸಲಿರಿಸಿ ಮಂಡಳಿಯಿಂದ ಮತ್ತು ಸರ್ಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಮಾನ್ಯ ಸಚಿವರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಾಗ, Transit Accommodation ಒದಗಿಸಲು ವಿವಿಧ ಕಾರ್ಮಿಕ ಸಂಘಟನೆಗಳು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಮಾನ್ಯ ಸಚಿವರು Housing Schemeಗಾಗಿ ಮೀಸಲಿಟ್ಟಿರುವ ರೂ.500.00 ಕೋಟಿಗಳನ್ನು Transit Accommodation ಗಾಗಿ ಮೀಸಲಿಡಲು ಮತ್ತು Transit Accommodation ಗಾಗಿ ಮೀಸಲಿಟ್ಟಿರುವ ರೂ.210.00 ಕೋಟಿಗಳನ್ನು Housing Schemeಗಾಗಿ ಮೀಸಲಿಡಲು ಪರಿಷ್ಕೃತ ಹಂಚಿಕೆ ಮಾಡಲು ಸೂಚಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಮಂಡಳಿಯ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ರಾಜ್ಯದ ವಿವಿಧ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡಾಗ ಕಾರ್ಮಿಕ ಸಂಘಟನೆಗಳಿಂದ Transit Accommodation ಗಳನ್ನು ನಿರ್ಮಿಸಲು ಹೆಚ್ಚಿನ ಬೇಡಿಕೆ ಇರುತ್ತದೆ. ಸದರಿ Transit Accommodation ಗಳನ್ನು ನಿರ್ಮಿಸುವುದರಿಂದ ಮಂಡಳಿಗೆ ಆಸ್ತಿ ಆಗುತ್ತದೆ ಮತ್ತು ಸದರಿ Transit Accommodation ಗಳಿಂದ ಬಾಡಿಗೆ ರೂಪದಲ್ಲಿ ಹಣ ಸಂಗ್ರಹಣೆಯಾಗುತ್ತದೆ. ಆದ್ದರಿಂದ ಪ್ರತಿ ಜಿಲ್ಲೆಗೆ ರೂ.10.00 ಕೋಟಿಗಳಲ್ಲಿ Transit Accommodation ಗಳನ್ನು ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಹೆಚ್ಚಿನ ಮೊತ್ತವನ್ನು ಮೀಸಲಿರಿಸಿ Transit Accommodation ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಸಭೆಗೆ ತಿಳಿಸಿದರು.**

**ಶ್ರೀ ಮೋಹನ್‌ರಾವ್, ಕಾರ್ಯದರ್ಶಿಗಳು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ರವರು ಮಾತನಾಡಿ ಸದರಿ ಯೋಜನೆಯು ಒಳ್ಳೆಯ ಯೋಜನೆಯಾಗಿದ್ದು ವಲಸೆ ಕಾರ್ಮಿಕರಿಗೆ ಅನುಕೂಲವಾಗುತ್ತದೆ.ಸದರಿ Transit Accommodationಗಳನ್ನು ನಿರ್ಮಿಸುವ ಪೂರ್ವದಲ್ಲಿ Public Private Partnership (PPP) / Precast Technology ಅಳವಡಿಸಿಕೊಳ್ಳಲು ಸಲಹೆ ನೀಡಿದರು ಹಾಗು ಪರಿಣಿತರಿಂದ ಸಲಹೆ ಸೂಚನೆಗಳನ್ನು ಪಡೆಯುವುದು ಸೂಕ್ತವೆಂದು ಸಭೆಗೆ ತಿಳಿಸಿದರು.**

**ಅಪರ ಮುಖ್ಯಕಾರ್ಯದರ್ಶಿಗಳು ಮಾತನಾಡುತ್ತಾ, ಸದರಿ ವಿಷಯದ ಕುರಿತು ಅಪರ ಮುಖ್ಯಕಾರ್ಯದರ್ಶಿಗಳು, ಮಂಡಳಿಯ ಕಾರ್ಯದರ್ಶಿಗಳು ಹಾಗು ಶ್ರೀ ಮೋಹನ್‌ರಾವ್, ಕಾರ್ಯದರ್ಶಿಗಳು,ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಇವರನ್ನೊಳಗೊಂಡ ಒಂದು ಸಮಿತಿಯನ್ನು**

ರಚಿಸಿ, ಸದರಿ ಸಮಿತಿಯಲ್ಲಿ ಈ ಕುರಿತು ಪರಿಶೀಲಿಸಿ 10 ದಿನಗಳೊಳಗಾಗಿ ವರದಿಯನ್ನು ಸಲ್ಲಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

ದಿನಾಂಕ:29-03-2020ರ ಮಂಡಳಿಯ 29ನೇ ಸಭೆಯಲ್ಲಿ ಅನುಮೋದಿಸಿದ ಆಯವ್ಯಯದಲ್ಲಿ **Housing Scheme** ಗಾಗಿ ಮೀಸಲಿಟ್ಟಿರುವ ರೂ.500.00 ಕೋಟಿಗಳನ್ನು **Transit Accommodation** ಗಾಗಿ ಮೀಸಲಿಡಲು ಮತ್ತು **Transit Accommodation** ಗಾಗಿ ಮೀಸಲಿಟ್ಟಿರುವ ರೂ.210.00 ಕೋಟಿಗಳನ್ನು **Housing Scheme** ಗಾಗಿ ಮೀಸಲಿಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-19

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸಲು ಕೋರಿ ಸ್ವೀಕೃತವಾದ ಅರ್ಜಿಗಳ ಕುರಿತು**

**ಪ್ರಸ್ತಾವನೆ:-**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯು ಅನುಮೋದನೆ ನೀಡಿರುತ್ತದೆ. ಪ್ರಸ್ತುತ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಕೋರಿ ಸುಮಾರು 18 ಅರ್ಜಿಗಳು ಸ್ವೀಕೃತಗೊಂಡಿದ್ದು ಅರ್ಜಿಗಳ ವಿವರ ಈ ಕಳಕಂಡಂತ್ತಿರುತ್ತದೆ.

<u>ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಪ್ರಕರಣಗಳ ಪಟ್ಟಿ ಅನುಮೋದನೆಗಾಗಿ</u>

| ಕ್ರ. ಸಂ | ದೂರುದಾರರ ಹೆಸರು | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಹೆಸರು |
|---|---|---|---|---|
| 1 | ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ-2, ಬೆಂಗಳೂರು | ಸಂಖ್ಯೆ:ಕಕಾಮಂ/ ಕಲ್ಯಾಣ /ಅಪಘಾತ/ಸಿಆರ್-15/2019-20 | ಮನೆಯ ಪ್ಲಂಬಿಂಗ್ ಕೆಲಸ ಮಾಡುವಾಗ ಜಿಪ್ಪಿಂಗ್ ಮಾಡುವ ಮಷೀನನ್ನು ಮೊದಲ ಮಹಡಿಗೆ ತೆಗೆದುಕೊಂಡು ಹೋಗುವಾಗ ಮಷೀನಿನಲ್ಲಿದ್ದ ವಿದ್ಯುತ್ ತಂತಿಯು ಕೈಗೆ ತಗುಲಿ ವಿದ್ಯುತ್ ಆವರಿಸಿಕೊಂಡು ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಶ್ರೀ ಬಸವಲಿಂಗಯ್ಯ, ಹೊನ್ನಹಳ್ಳಿ, ಲಿಂಗಸೂಗೂರು, ರಾಯಚೂರು-584115 ರವರು ಮೃತಪಟ್ಟಿರುವ ಕುರಿತು. | 1.ಬಸವಲಿಂಗಯ್ಯ (ರಾಯಚೂರು) |
| 2 | ಕಾರ್ಮಿಕ ಅಧಿಕಾರಿ ಚಿಕ್ಕಬಳ್ಳಾಪುರ ಜಿಲ್ಲೆ | ಸಂಖ್ಯೆ:ಕಕಾಮಂ/ಕಲ್ಯಾಣ /ಅಪಘಾತ/ಸಿಆರ್-16/2019-20 | ಶ್ರೀ ವಾಜೀದ್ ಬಿನ್ ಲೇಟ್ ನೂರ್‌ಹಸನ್, ರವರು ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾಗಿದ್ದು, ರೂಫಿಂಗ್ ಶೀಟ್ ಬದಲಾಯಿಸುವ ವೇಳೆ ರೂಫಿಂಗ್ ಶೀಟ್ ಮುರಿದು ಬಿದ್ದ ಪರಣಾಮ ಮರಣ ಹೊಂದಿರುವ ಕುರಿತು. | 1. ಶ್ರೀ ವಾಜೀದ್ (ಉತ್ತರ ಪ್ರದೇಶ) |

| | | | | |
|---|---|---|---|---|
| 3 | ಕಾರ್ಮಿಕ ಅಧಿಕಾರಿ ಕಾರವಾರ | ಸಂಖ್ಯೆ:ಕಕಾಮಂ/ಕಲ್ಯಾಣ /ಅಪಘಾತ/ಸಿಆರ್-17/2019-20 | ಹೊಸದಾಗಿ ಕಟ್ಟುತ್ತಿದ್ದ ಕಟ್ಟಡದಲ್ಲಿ ಶ್ರೀ ನಿಲೇಶ್ ಉತ್ತಮ್ ಮಹೇಕರ್ ಇವರು ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾಗಿದ್ದು, ಎಲೆಕ್ಟ್ರೀಷನ್ ಕೆಲಸ ಮಾಡುತ್ತಿರುವಾಗ 3ನೇ ಮಹಡಿಯಿಂದ ನೆಲ ಮಹಡಿಗೆ ಬಿದ್ದು ಮೃತ ಪಟ್ಟಿರುತ್ತಾರೆ. | 1.ನಿಲೇಶ ಉತ್ತಮ ಮಹೇಕರ (ಕಾರವಾರ) |
| 4 | ಕಾರ್ಮಿಕ ಅಧಿಕಾರಿ ಉಪ ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ ಕಲ್ಯಾಣ /ಅಪಘಾತ/ಸಿಆರ್-18/2019-20 | ಮನೆ ಡೋರ್‌ಗಳಿಗೆ ಸೊಳ್ಳೆ ಮೆಸ್ ಹಾಕಲು ಹೋಗಿ ಶ್ರೀ ರಾಜಶೇಖರ್ ರವರುನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾಗಿದ್ದು, ಡ್ರಿಲ್ಲಿಂಗ್ ಕೆಲಸ ಮಾಡುತ್ತಿದ್ದ ಸಮಯದಲ್ಲಿ ವಿದ್ಯುತ್ ಶಾಕ್ ತಗುಲಿ ಮೃತಪಟ್ಟಿರುತ್ತಾರೆ. | 1. ರಾಜಶೇಖರ್ (ಬೆಂಗಳೂರು) |
| 5 | ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ-4 ಬೆಂಗಳೂರು | ಸಂಖ್ಯೆ:ಕಕಾಮಂ/ ಕಲ್ಯಾಣ /ಅಪಘಾತ /ಸಿಆರ್-19/2019-20 | ಶ್ರೀ ರಾಮ್ ಸಿಕಿಲ್ ಮಂಡಲ್ ರವರು ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾಗಿದ್ದು, ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿರುವಾಗ 35 ಅಡಿ ಎತ್ತರದಿಂದ ಕೆಳಗೆ ಬಿದ್ದಾಗ ಸ್ಕಪರ್ಡಿಂಗ್ ಅವರ ಮೇಲೆ ಬಿದ್ದು ಮೃತಪಟ್ಟಿರುತ್ತಾರೆ. | 1.ರಾಮ್ ಸಿಕಿಲ್ ಮಂಡಲ್ (ಬಿಹಾರ್) |
| 6 | ಕಾರ್ಮಿಕ ಅಧಿಕಾರಿ ಉಪ ವಿಭಾಗ-1 ಮಂಗಳೂರು | ಸಂಖ್ಯೆ:ಕಕಾಮಂ/ ಕಲ್ಯಾಣ /ಅಪಘಾತ/ಸಿಆರ್-20/2019-20 | ಬಂಟ್ವಾಳ ತಾಲ್ಲೂಕಿನ ಒಡಿಯೂರು ದೇವಸ್ಥಾನದ ಕಟ್ಟಡ ನಿರ್ಮಾಣ ಸಮಯದಲ್ಲಿ ಗುಡ್ಡ ಜರಿದು ಮೃತಪಟ್ಟ ಬಾಳಪ್ಪ ನಾಯ್ಕ, ಪ್ರಕಾಶ್ ಹಾಗೂ ಗಂಭೀರ ಗಾಯಗೊಂಡ ಪ್ರಭಾಕರ್ ಇವರ ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾಗಿದ್ದು ಸದರಿಯವರುಗಳ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ. | 1.ಬಾಳಪ್ಪ ನಾಯ್ಕ (ದಕ್ಷಿಣ ಕನ್ನಡ)<br><br>2.ಪ್ರಕಾಶ್ (ದಕ್ಷಿಣ ಕನ್ನಡ) |
| 7 | ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ-1 ಮಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ /ಅಪಘಾತ/ಸಿಆರ್-21/2019-20 | ಮಂಗಳೂರು ತಾಲ್ಲೂಕಿನ ಬಂಟ್ಸ್ ಹಾಸ್ಟೇಲ್ ಬಳಿಯ ಶ್ರೀಮತಿ ಎ.ಜೆ.ಶೆಟ್ಟಿ ಮಾಲೀಕತ್ವದ ತ್ರೀ ಸ್ಟಾರ್ ಹೋಟೆಲ್ ಕಟ್ಟಡ ನಿರ್ಮಾಣ ಸಮಯದಲ್ಲಿ ರಸ್ತೆ ಬದಿಯ ತಡೆಗೋಡೆ ಜರಿದು ಅಪಘಾತ ಸಂಭವಿಸಿರುವ ಕುರಿತು. | 1.ಶ್ರೀ ಮಸ್ರಿಕುಲ್ ಆಲಾಂ(17 ವರ್ಷ) (ವೆಸ್ಟ್ ಬೆಂಗಾಲ್) |
| 8 | ಕಾರ್ಮಿಕ ಅಧಿಕಾರಿ ಉಪ ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ ಅಪಘಾತ/ಸಿಆರ್-22/2019-20 | ಶ್ರೀ ಯಡೂರು ಯರಯ್ಯ ಬಿನ್ ಲೇಟ್ ರಾಮುಲು ಯಡೂರು ಇವರು ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾಗಿದ್ದು, ದಿನಾಂಕ:28-02-2019ರಂದು ಪಟ್ಟಣ ಗೆರೆ ಮೆಟ್ರೋ ನಿಲ್ದಾಣ ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿದ್ದು ಮೆಟ್ರೋ ನಿಲ್ದಾಣದ ಮೊದಲನೇ ಮಹಡಿಯಲ್ಲಿ ಕಾಂಕ್ರಿಟ್ ಗಾರೆಯನ್ನು ಡ್ರಿಲ್ಲಿಂಗ್ ಮಶಿನ್ ಮೂಲಕ ತೆಗೆಯುತ್ತಿರುವಾಗ ಡ್ರಿಲ್ಲಿಂಗ್ ಮಶಿನ್ ಕೆಳಗೆ ಜಾರಿ ಸದರಿಯವರು ಮಶಿನ್ ಜೊತೆಗೆ ಕೆಳಗೆ ಕಟ್ಟಿದ್ದ ಬಲೆಯ ಮೇಲೆ ಬಿದ್ದಾಗ ಬಲೆ ಹರಿದು ಕೆಳಗೆ ಬಿದ್ದು ಮೃತಪಟ್ಟಿರುತ್ತಾರೆ. | 1.ಶ್ರೀ ಯಡೂರು ಯರಯ್ಯ |

| | | | | |
|---|---|---|---|---|
| 9 | ಕಾರ್ಮಿಕ ಅಧಿಕಾರಿ ಉಪ ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ ಅಪಘಾತ/ಸಿಆರ್-23/2019-20 | ಹೇಮಂತ್ ಕುಮಾರ್ ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಾಗಿದ್ದು, ಬಿ.ಇ.ಎಲ್ ನಾರ್ಥ ಗೇಟ್ ಜಾಲಹಳ್ಳಿ, ನಾಗಾಲ್ಯಾಂಡ್ ಬಸ್ ಸ್ಟಾಫ್ ಬಳಿಯ ಎಂಟಿಆರ್‌ಡಿಸಿ-ಡಿಆರ್‌ಡಿಓ ಸಂಸ್ಥೆಯ ನಿರ್ಮಾಣದಲ್ಲಿ ದಿನಾಂಕ:07-11-2019 ರಂದು ಕಟ್ಟಡದ ಮೇಲಿನಿಂದ ಬಿದ್ದು ಅಪಘಾತ ಸಂಭವಿಸಿ ಮರಣ ಹೊಂದಿರುವ ಕುರಿತು. | 1.ಹೇಮಂತ್ ಕುಮಾರ್ (ಉತ್ತರ ಪ್ರದೇಶ) |
| 10 | ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ-4 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ ಅಪಘಾತ/ಸಿಆರ್-2/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕ ದಿ॥ ಮೋಹನ್ ರಾಜ್‌ರವರು ನಂ.34, ಹಲಸೂರು ರಸ್ತೆ, ಬೆಂಗಳೂರು ಇಲ್ಲಿನ ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಎರಡನೇ ಮಹಡಿಯಿಂದ ಬಿದ್ದು ಮೃತಪಟ್ಟಿದ್ದುಪರಿಹಾರಕ್ಕಾಗಿ ಮನವಿ ಸಲ್ಲಿಸಿರುವ ಕುರಿತು. | ಮೋಹನ್ ರಾಜ್ (ಯಾದಗಿರಿ) |
| 11 | ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ-4 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ ಅಪಘಾತ/ಸಿಆರ್-3/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕ ದಿ॥ ಮೊಹಮ್ಮದ್ ಆಸೀಫ್ ಪಾಷಾರವರು ಆರ್.ಸಿ.ಸಿ. ಮತ್ತು ಟೆರಸ್ ಮೇಲೆ ಫೈಬರ್ ಶೀಟ್ ಅಳವಡಿಸುವ ಕೆಲಸ ನಿರ್ವಹಿಸುತ್ತಿದ್ದ ವೇಳೆಯಲ್ಲಿ ಕೆಳಗೆ ಬಿದ್ದು ಕೆಲಸದ ಸ್ಥಳದಲ್ಲಿ ಮೃತ ಪಟ್ಟಿದ್ದು ಪರಿಹಾರಕ್ಕಾಗಿ ಮನವಿ ಸಲ್ಲಿಸಿರುವ ಕುರಿತು. | ಮೊಹಮ್ಮದ್ ಆಸೀಫ್ ಪಾಷಾ (ಬೆಂಗಳೂರು) |
| 12 | ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ-4 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ ಅಪಘಾತ/ಸಿಆರ್-4/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ದಿ॥ ದಾದಾಪೀರ್‌ರವರುಆರ್.ಸಿ.ಸಿ. ಮತ್ತು ಟೆರಸ್ ಮೇಲೆ ಫೈಬರ್ ಶೀಟ್ ಅಳವಡಿಸುವ ಕೆಲಸ ನಿರ್ವಹಿಸುತ್ತಿದ್ದ ವೇಳೆಯಲ್ಲಿ ಕೆಳಗೆ ಬಿದ್ದು ಕೆಲಸದ ಸ್ಥಳದಲ್ಲಿ ಮೃತ ಪಟ್ಟಿದ್ದು ಪರಿಹಾರಕ್ಕಾಗಿ ಮನವಿ ಸಲ್ಲಿಸಿರುವ ಕುರಿತು. | ದಾದಾಪೀರ್ (ಬೆಂಗಳೂರು) |
| 13 | ಕಾರ್ಮಿಕ ಅಧಿಕಾರಿ ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ | ಸಂಖ್ಯೆ:ಕಕಾಮಂ/ಕಲ್ಯಾಣ/ ಅಪಘಾತ/ಸಿಆರ್-5/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕ ದಿ॥ ಎಸ್. ಮೆಹಬೂಬ್ ಪಾಷಾರವರು ಶ್ರೀ ರಹೀಂ ಅಲಿಯಾಸ್ ಬಾಬು ಬಿ.ಹೆಚ್.ಆರ್ ಸೈಕಲ್ ಪಾಷ ರವರ ಮನೆಯ ಕಟ್ಟಡ ಕೆಲಸ ಮಾಡುತ್ತಿದ್ದಾಗ ವಿದ್ಯುತ್ ತಂತಿ ತಗುಲಿ ಕೆಲಸದ ಸ್ಥಳದಲ್ಲಿ ಮೃತ ಪಟ್ಟಿದ್ದು ಪರಿಹಾರಕ್ಕಾಗಿ ಮನವಿ ಸಲ್ಲಿಸಿರುವ ಕುರಿತು. | ಎಸ್.ಮೆಹಬೂಬ್ ಪಾಷಾ (ಚಿಕ್ಕಬಳ್ಳಾಪುರ) |
| 14 | ಕಾರ್ಮಿಕ ಅಧಿಕಾರಿ ಶಿವಮೊಗ್ಗ ಜಿಲ್ಲೆ ಶಿವಮೊಗ್ಗ | ಸಂಖ್ಯೆ:ಕಕಾಮಂ/ಕಲ್ಯಾಣ/ ಅಪಘಾತ/ಸಿಆರ್-6/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಶ್ರೀ ಮಾರುತಿ ಇವರು ಹೊಸನಗರ ತಾಲ್ಲೂಕು, ವಸುವೆ ಗ್ರಾಮದಲ್ಲಿ ಅರಣ್ಯಾಧಿಕಾರಿಗಳು ಮರಕಡಿತಲೆ ಮಾಡುವ ಸಲುವಾಗಿ ಬಿಚ್ಚಿದ್ದ ವಿದ್ಯುತ್ ತಂತಿಯನ್ನು ಪುನಃ ಎಳೆಯಲು ವಿದ್ಯುತ್ ಸಂಪರ್ಕ ಕಡಿತಗೊಳಿಸಿಕೊಂಡು ಕೆಲಸ ಮಾಡುತ್ತಿದ್ದಾಗ ಮಾರುತಿಯು ಆಕಸ್ಮಿಕವಾಗಿ ಕಾಲು ಜಾರಿ ಸುಮಾರು 20 ಅಡಿ ಎತ್ತರದ | ಶ್ರೀ ಮಾರುತಿ (ಹಾವೇರಿ) |

| | | | | |
|---|---|---|---|---|
| | | | ವಿದ್ಯುತ್ ಕಂಬದಿಂದ ಹಿಮ್ಮುಖವಾಗಿ ನೆಲಕ್ಕೆ ಬಿದ್ದು ಮೃತಪಟ್ಟಿರುವ ಕುರಿತು. | |
| 15 | ಕಾರ್ಮಿಕ ಅಧಿಕಾರಿ ಉಪ ವಿಭಾಗ-1 ಮಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ/ಸಿಆರ್-7/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಶ್ರೀ ಶ್ಯಾಮ್ ಇವರ ಮಂಗಳೂರು ತಾಲ್ಲೂಕಿನ ಕುಡುಪು ಎಂಬಲ್ಲಿರುವ ತೇಜಸ್ವಿನಿ ನರ್ಸಿಂಗ್ ಕ್ಯಾಂಪಸ್‌ನ ಕಟ್ಟಡ ಕಾಮಗಾರಿಯ ಗುಡ್ಡಕ್ಕೆ ಅಡ್ಡಲಾಗಿ ರಿಟರ್ನಿಂಗ್ ವಾಲ್ ನಿರ್ಮಾಣದ ವೇಳೆ ಗುಡ್ಡದ ಮೇಲ್ಭಾಗದ ಮಣ್ಣು ಕುಸಿದು ಮೃತಪಟ್ಟಿದ್ದು, ಅಪಘಾತ ಮರಣ ಹೊಂದಿರುವ ಕುರಿತು. | ಶ್ರೀ ಶ್ಯಾಮ್ (ದಕ್ಷಿಣ ಕನ್ನಡ) |
| 16 | ಕಾರ್ಮಿಕ ನಿರೀಕ್ಷಕರು 1ನೇ ವೃತ್ತ ಭದ್ರಾವತಿ | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ/ಸಿಆರ್-8/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಶ್ರೀ ಸಂತೋಷ.ವಿ ರವರು ಶ್ರೀ ಚಂದ್ರಶೇಖರ್.ಕೆ ರವರ ಮನೆಯಲ್ಲಿ ಬಣ್ಣ ಹೊಡೆಯುವ ಕೆಲಸವನ್ನು ಮಾಡುತ್ತಿರುವ ಸಂದರ್ಭದಲ್ಲಿ ಮನೆಯ ಮೇಲ್ಛಾವಣಿಯ ಮೇಲೆ ಹತ್ತಿದಾಗ ಆಕಸ್ಮಿಕವಾಗಿ ವಿದ್ಯುತ್ ತಂತಿ ತಗುಲಿ ವಿದ್ಯುತ್ ಶಾಕ್‌ನಿಂದಾಗಿ ಮೃತಪಟ್ಟಿದ್ದು, ಪರಿಹಾರಕ್ಕಾಗಿ ಮನವಿ ಸಲ್ಲಿಸಿರುವ ಕುರಿತು. | ಶ್ರೀ ಸಂತೋಷ. ವಿ (ಭದ್ರಾವತಿ) |
| 17 | ಕಾರ್ಮಿಕ ಅಧಿಕಾರಿ ಉಪ ವಿಭಾಗ-6 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ/ಸಿಆರ್-09/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಶ್ರೀ ಮೊಹಮ್ಮದ್ ಸೂಹೈಲ್ ಇವರು ಕಟ್ಟಡ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡ ಕುಸಿದು ಮೃತರಾಗಿರುತ್ತಾರೆ ಅಪಘಾತ ಮರಣ ಸಹಾಯಧನದ ಕುರಿತು. | ಶ್ರೀ ಮೊಹಮ್ಮದ್ ಸೂಹೈಲ್ (ಶಿವಮೊಗ್ಗ) |
| 18 | ಕಾರ್ಮಿಕ ಅಧಿಕಾರಿ ಉಪ ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ಕಲ್ಯಾಣ/ಅಪಘಾತ/ಸಿಆರ್-10/2020-21 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಶ್ರೀ ಧನಂಜಯ ಕುಮಾರ್ ಬಿನ್ ರಾಮಶಿಶ್ ಕುಮಾರ್ ಇವರು ಜಯನಗರ ಮೆಟ್ರೋ ಕಾಮಗಾರಿ ನಿರ್ಮಾಣ ಕೆಲಸ ಮಾಡುತ್ತಿರುವ ಸಮಯದಲ್ಲಿ ಅಪಘಾತ ಮರಣ ಸಹಾಯಧನದ ಕುರಿತು. | ಶ್ರೀ ಧಂಜಯ ಕುಮಾರ್ ಬಿನ್ ರಾಮಶಿಶ್ ಕುಮಾರ್ (ಬಿಹಾರ) |

ಸದರಿ ನೋಂದಾಯಿತರಲ್ಲದ ಕಾರ್ಮಿಕರುಗಳಿಗೆ ಮಾನವೀಯತೆ ದೃಷ್ಟಿಯಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಸಹಾಯಧನ ವಿತರಿಸಲು ಅನುಮೋದನೆ ನೀಡಲು ಕೋರಿ ಸಭೆಗೆ ಮಂಡಿಸಿದೆಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ ಅಪಘಾತ ಮರಣ ಪರಿಹಾರ ನೀಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ದಿನಾಂಕ 14-11-2019 ರಲ್ಲಿ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ ಮರಣ ಧನ ಸಹಾಯ ಪಡೆಯುವ ಸಂಬಂಧ ಅವರ ಅವಲಂಭಿತ ಅರ್ಜಿದಾರರು ಅರ್ಜಿ ಸಲ್ಲಿಸಲು ನಮೂನೆ 21-ಬಿ ಅನ್ನು**

ಉಪನಿಯಮ 6 ಮತ್ತು ನಿಯಮ 47ರಡಿ ಅಳವಡಿಸಲಾಗಿರುತ್ತದೆ. ಸದರಿ ವಿಷಯವನ್ನು ಸಭೆಯು ಪರಿಗಣಿಸಿ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ರೂ.2.00 ಲಕ್ಷಗಳ ಮರಣ ಧನ ಸಹಾಯ ನೀಡಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-20

**ವಲಸೆ ಕಾರ್ಮಿಕರ ಮಗನಾದ ಮಹೇಶ್ ಬಿ. ರವರು ಎಸ್ಎಸ್ಎಲ್ಸಿ ಯಲ್ಲಿ ಉನ್ನತ ಅಂಕ ಪಡೆದು ಉತ್ತೀರ್ಣನಾಗಿದ್ದು, ಅವರಿಗೆ ಮಂಡಳಿಯಿಂದ ವಿಶೇಷ ಪ್ರೋತ್ಸಾಹಧನ ವಿತರಿಸುವ ಕುರಿತು**

**ಪ್ರಸ್ತಾವನೆ:-**

6 ವರ್ಷಗಳ ಹಿಂದೆ ಯಾದಗಿರಿಯಿಂದ ಕೂಲಿ ಅರಸಿ ಸದ್ಯ ಮಲ್ಲೇಶಪಾಳ್ಯ, ಬೆಂಗಳೂರಿನಲ್ಲಿರುವ ಮಲ್ಲಮ್ಮ ಇವರ ಮಗನಾದ ಕು॥ ಬಿ.ಮಹೇಶ್ ರವರು 2020-21ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625ಕ್ಕೆ 616 ಅಂಕಗಳಿಸಿ ಶೇಕಡ 98.56 ರಷ್ಟು ಪಡೆದಿರುತ್ತಾರೆ.

ಕು॥ ಬಿ.ಮಹೇಶ್ ರವರು ತಮ್ಮ ತಂದೆಯನ್ನು ಚಿಕ್ಕವಯಸ್ಸಿನಲ್ಲಿಯೇ ಕಳೆದುಕೊಂಡಿದ್ದು ಇವರ ತಾಯಿಗೆ ಕೂಲಿ ಕೆಲಸವೇ ಜೀವನಾಧಾರವಾಗಿರುತ್ತದೆ. ಶ್ರೀಮತಿ ಮಲ್ಲಮ್ಮ ರವರು ವಲಸೆ ಕಾರ್ಮಿಕರಾಗಿದ್ದು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಫಲಾನುಭವಿಯಾಗಿ ನೋಂದಣಿಯಾಗಿರುವುದಿಲ್ಲ.

ಕು॥ ಬಿ.ಮಹೇಶ್ ರವರಿಗೆ ಹೆಚ್ಚಿನ ವಿದ್ಯಾಭ್ಯಾಸ ಕೈಗೊಳ್ಳಲು ಆರ್ಥಿಕ ಸಹಾಯದ ಅಗತ್ಯತೆ ಇರುವುದರಿಂದ ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಮಂಡಳಿಯಿಂದ ಸಹಾಯಧನ ಒದಗಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಸದರಿ ವಿದ್ಯಾರ್ಥಿಯ ಮುಂದಿನ ವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚದ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲೆಯ ಕಾರ್ಮಿಕ ಅಧಿಕಾರಿಗಳಿಂದ ಪಡೆದು ಕ್ರಮಕೈಗೊಳ್ಳಲು ಮಂಡಳಿಯ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ಮುಂದುವರೆದು, ಅಪರ ಮುಖ್ಯಕಾರ್ಯದರ್ಶಿಯವರು ಮಾತನಾಡುತ್ತಾ ಕಟ್ಟಡ ಕಾರ್ಮಿಕರ ಮಕ್ಕಳು ಶೇ.90 ಅಂಕಗಳಿಸಿದ್ದಲ್ಲಿ ಸದರಿಯವರಿಗೆ ವಿಶೇಷ ಪ್ರೋತ್ಸಾಹ ಧನವನ್ನು ವಿತರಿಸಲು ಹೊಸ ಯೋಜನೆಯನ್ನು ರೂಪಿಸುವುದು ಸೂಕ್ತವೆಂದು ಸಭೆಗೆ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಅಧ್ಯಕ್ಷರು ಇದಕ್ಕೆ ಸಹಮತ ವ್ಯಕ್ತಪಡಿಸಿ ಹೊಸ ಯೋಜನೆಯನ್ನು ರೂಪಿಸಲು ಮಂಡಳಿಯ ಕಾರ್ಯದರ್ಶಿಯವರಿಗೆ ಸೂಚಿಸಿದರು.

## ವಿಷಯ ಸಂಖ್ಯೆ-21

**ಮಂಡಳಿಯ ಅಧ್ಯಕ್ಷರ ಕಛೇರಿಯನ್ನು ನವೀಕರಣಗೊಳಿಸಿ ಹಾಗೂ ಅಗತ್ಯವಿರುವ ಪಿಠೋಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡುವ ಕುರಿತು.**

ಪ್ರಸ್ತಾವನೆ:-

ಮಂಡಳಿಯ ಕಲ್ಯಾಣ ಸುರಕ್ಷಾ ಭವನದ ನೆಲಮಹಡಿಯಲ್ಲಿ ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರಿಗಾಗಿ ಕೊಠಡಿಯನ್ನು ಮೀಸಲಿಡಲಾಗಿರುತ್ತದೆ. ಸದರಿ ಕೊಠಡಿಯಲ್ಲಿ ನವೀಕೃತ ಪಿಠೋಪಕರಣಗಳು ಇರುವುದಿಲ್ಲ. ಹಾಗಾಗೀ ನೆಲಮಹಡಿಯ ಮಾನ್ಯ ಅಧ್ಯಕ್ಷರ ಕೊಠಡಿಯ ಒಳಾಂಗಣ ವಿನ್ಯಾಸವನ್ನು ನವೀಕರಣಗೊಳಿಸಿ ಅಗತ್ಯವಿರುವ ಪಿಠೋಪಕರಣಗಳನ್ನುಖರೀದಿಸುವುದು ಅವಶ್ಯಕತೆ ಇರುವುದರಿಂದ ಅನುಮೋದನೆಗಾಗಿ ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಮಾನ್ಯ ಅಧ್ಯಕ್ಷರ ಕೊಠಡಿಯ ಒಳಾಂಗಣ ವಿನ್ಯಾಸವನ್ನು ಸರಳವಾಗಿ ನವೀಕರಣಗೊಳಿಸಿ ಅಗತ್ಯವಿರುವ ಪೀಠೊಪಕರಣಗಳನ್ನು ಖರೀದಿಸಲು ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ-22

**ಕಲ್ಯಾಣ ಸುರಕ್ಷಾ ಭವನದಲ್ಲಿರುವ ಮಂಡಳಿಯ ಕೇಂದ್ರ ಕಛೇರಿಯ ಮೊದಲನೇ ಮತ್ತು ಎರಡನೇ ಮಹಡಿಗಳನ್ನು ನವೀಕರಣಗೊಳಿಸಿ ಹಾಗೂ ಅಗತ್ಯವಿರುವ ಪೀಠೋಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡುವ ಕುರಿತು.**

ಪ್ರಸ್ತಾವನೆ:-

ಮಂಡಳಿಯ ಕಲ್ಯಾಣ ಸುರಕ್ಷಾ ಭವನದ ಒಂದನೇ ಮತ್ತು ಎರಡನೇ ಮಹಡಿಯ ಎಡಭಾಗದಲ್ಲಿ ಮಂಡಳಿಯ ಅಧಿಕಾರಿಗಳ ಕೊಠಡಿಗಳು ಮತ್ತು ಕಛೇರಿಯು ಇರುತ್ತದೆ. ಈ ಭಾಗದಲ್ಲಿ ಒಳಾಂಗಣ ವಿನ್ಯಾಸ ಮತ್ತು ಪಿಠೋಕರಣಗಳನ್ನು ಕಲ್ಯಾಣ ಸುರಕ್ಷಾ ಭವನದ ಪ್ರಾರಂಭದಲ್ಲಿ ಅಂದರೆ 2016 ರಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ಆದರೆ, ಪ್ರಸ್ತುತ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹೆಚ್ಚಳವಾಗಿರುವುದರಿಂದ ಅವಶ್ಯಕ ಪಿಠೋಪಕರಣಗಳು, ಒಳಾಂಗಣ ವಿನ್ಯಾಸ, ಸಿವಿಲ್, ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕಲ್ ದುರಸ್ಥಿ ಕೆಲಸಗಳನ್ನು ಮಾಡಿಸುವ ಅವಶ್ಯಕವಿರುತ್ತದೆ.

ಆದ್ದರಿಂದ ಸದರಿ ಎರಡು ಮಹಡಿಗಳನ್ನು ನವೀಕರಣಗೊಳಿಸಿ ಹಾಗೂ ಅಗತ್ಯವಿರುವ ಪೀಠೋಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲು ಸಭೆಗೆ ಮಂಡಿಸಿದೆ. ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಸದರಿ ಎರಡು ಮಹಡಿಗಳನ್ನು ನವೀಕರಣಗೊಳಿಸಿ ಹಾಗೂ ಅಗತ್ಯವಿರುವ ಪೀಠೋಪಕರಣಗಳನ್ನು ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ-23

**ಮಂಡಳಿಯ ಜಂಟಿ ಕಾರ್ಯದರ್ಶಿಯವರಿಗೆ ಪ್ರಸ್ತುತ ನೀಡಿರುವ ವಾಹನವು ಅತೀ ಹಳೆಯದಾಗಿದ್ದು ಸದರಿ ವಾಹನವನ್ನು ನಿಯಾಮಾನುಸಾರ ವಿಲೇಗೊಳಿಸಿ ಹೊಸ ವಾಹನವನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.**

**ಪ್ರಸ್ತಾವನೆ:-**

ಮಂಡಳಿಯ ಜಂಟಿ ಕಾರ್ಯದರ್ಶಿಯವರು ಉಪಯೋಗಿಸುತ್ತಿರುವ ವಾಹನವು 2007 ರಲ್ಲಿ ವರ್ಣಾ ಕಾರನ್ನು ಖರೀದಿ ಮಾಡಿದ್ದು, ಪ್ರಸ್ತುತ 198857 ಕೀ.ಮೀ. ಚಲಿಸಿರುತ್ತದೆ. ಸದರಿ ವಾಹನವು ದುರಸ್ಥಿಯಲ್ಲಿರುತ್ತದೆ.ಈ ಕುರಿತು ಆರ್.ಟಿ.ಓ ಕಛೇರಿಯಲ್ಲಿ ವಿಚಾರಿಸಲಾಗಿ ಯಾವುದೇ ವಾಹನವು 07 ವರ್ಷ ಮೇಲ್ಪಟ್ಟಿದ್ದಲ್ಲಿ ಸದರಿ ವಾಹನವನ್ನು ವಿಲೇಗೊಳಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ, ಜಂಟಿ ಕಾರ್ಯದರ್ಶಿಯವರ ಕಚೇರಿ ಉಪಯೋಗಕ್ಕಾಗಿ ಒಂದು ಹೊಸ ಹುಂಡೈ ವರ್ಣಾ ವಾಹನವನ್ನು (ಬಿಎಸ್-6 2020 ಮಾಡೆಲ್ 1.5 ಎಂ.ಪಿ.ಐ ಎಂ.ಟಿ.ಎಸ್.ಎಕ್ಸ್) ರೂ.8,90,877/- ಜೆಮ್ ಮೂಲಕ ಖರೀದಿಸಲು ಅನುಮೋದನೆ ನೀಡಲು ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಹೊಸ ವಾಹನಗಳನ್ನು ಖರೀದಿಸಿದಲ್ಲಿ ಅದರ ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ ಆದ್ದರಿಂದ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ-24

**ಆಯುಕ್ತರು, ಕಾರ್ಮಿಕ ಇಲಾಖೆ ರವರ ಕೋರಿಕೆಯಂತೆ ಕಾರ್ಮಿಕ ಇಲಾಖೆ ಅಧಿಕಾರಿಗಳಾದ ಉಪ ಕಾರ್ಮಿಕ ಆಯುಕ್ತರು, ಸಹಾಯ ಕಾರ್ಮಿಕ ಆಯುಕ್ತರು, ಕಾರ್ಮಿಕ ಅಧಿಕಾರಿಗಳು ರವರುಗಳಿಗೆ ಮಂಡಳಿಯ ಕೆಲಸ ನಿರ್ವಹಿಸಲು ವಾಹನ ಸೌಲಭ್ಯ ಒದಗಿಸುವ ಕುರಿತು.**

**ಪ್ರಸ್ತಾವನೆ:-**

ಕಳೆದ ಕೆಲವು ವರ್ಷಗಳಿಂದ ಈಚೆಗೆ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿ ಕಾಯ್ದೆಗಳನ್ನು ಜಾರಿಗೊಳಿಸಲು ಪ್ರತ್ಯೇಕವಾಗಿ ಮಂಡಳಿಗಳನ್ನು ರಚಿಸಿದ್ದರೂ, ಸಹ ಕಟ್ಟಡ ಕಾರ್ಮಿಕರ ಮತ್ತು ಅಸಂಘಟಿತ ಕಾರ್ಮಿಕರ ನೋಂದಣಿ, ನವೀಕರಣ, ನಿರ್ಮಾಣ ಸಂಸ್ಥೆಗಳ ಸೆಸ್

ಮೌಲ್ಯಮಾಪನ ಹಾಗೂ ಈ ಮಂಡಳಿಗಳು ಜಾರಿಗೊಳಿಸುತ್ತಿರುವ 19 ಯೋಜನೆಗಳನ್ನು ಇಲಾಖೆಯ ಅಧಿಕಾರಿಗಳು ಹಾಗೂ ನಿರೀಕ್ಷಕರು ಕ್ಷೇತ್ರಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಿದ್ದಾರೆ.

ರಾಜ್ಯದಲ್ಲಿ ಇಲ್ಲಿಯವರೆಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 25 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳನ್ನು ನೋಂದಾಯಿಸಲಾಗಿದೆ. ಕಟ್ಟಡ ಮಂಡಳಿಯೊಂದರಲ್ಲೇ ಒಟ್ಟು 19 ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ದಿನ ಕಳೆದಂತೆ ಹೊಸ ಯೋಜನೆಗಳನ್ನು ಸಹ ರೂಪಿಸಲಾಗುತ್ತಿದೆ. ಎಲ್ಲಾ ಯೋಜನೆಗಳನ್ನು ಅಧಿಕಾರಿಗಳು/ನಿರೀಕ್ಷಕರುಗಳು ತಾವು ನಿರ್ವಹಿಸುತ್ತಿರುವ ದೈನಂದಿನ ಕೆಲಸಕಾರ್ಯಗಳ ಜೊತೆಗೆ ಅನುಷ್ಠಾನಗೊಳಿಸಬೇಕಾಗಿರುತ್ತದೆ ಹಾಗೂ ಹೆಚ್ಚಿನ ಸಮಯವನ್ನು ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಮಯವನ್ನು ಮೀಸಲಿಡಬೇಕಾಗಿರುತ್ತದೆ.

ಈಗಾಗಲೇ, 2017-18ನೇ ಸಾಲಿನಿಂದ ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದ ಕಾರ್ಮಿಕ ಅಧಿಕಾರಿಗಳಿಗೆ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು 41 ಬಾಡಿಗೆ ವಾಹನ ವ್ಯವಸ್ಥೆಯನ್ನು ಒದಗಿಸಲಾಗಿರುತ್ತದೆ ಹಾಗೂ ಅದರ ಮಾಹೆಯಾನ ಬಾಡಿಗೆಯ ರೂ.25,000/- ಮೊತ್ತವನ್ನು ಮಂಡಳಿಯಿಂದ ಪಾವತಿಸಲಾಗುತ್ತಿದೆ.

ಮುಂದುವರೆದು, ಉಪ ಕಾರ್ಮಿಕ ಆಯುಕ್ತರು, ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳು ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಪ್ರತ್ಯೇಕವಾಗಿ ವಾಹನವನ್ನು ಒದಗಿಸಲು ಕೋರಿ ಆಯುಕ್ತರು, ಕಾರ್ಮಿಕ ಇಲಾಖೆ ರವರು ಕೋರಿರುತ್ತಾರೆ.

ಮಂಡಳಿಗೆ ಸಂಬಂಧಿಸಿದಂತೆ ಹಿರಿಯ ಕಾರ್ಮಿಕ ನಿರೀಕ್ಷಕರನ್ನು ಹೊರತು ಪಡಿಸಿ ಎಲ್ಲಾ ಅಧಿಕಾರಿಗಳಿಗೆ ಮಂಡಳಿಯಿಂದ ವಾಹನ ಸೌಲಭ್ಯವು ಮಂಜೂರಾಗಿರುತ್ತದೆ. ಹಾಗೂ ಕಾರ್ಮಿಕ ಅಧಿಕಾರಿಗಳೊಂದಿಗೆ ಹಿರಿಯ ಕಾರ್ಮಿಕ ನಿರೀಕ್ಷಕರನ್ನು ಸಹ ಮಂಡಳಿಗೆ ಸಂಬಂಧಿಸಿದ ವಿವಿಧ ಕೆಲಸ/ಕರ್ತವ್ಯ ನಿರ್ವಹಿಸಲು ನೋಡಲ್ ಅಧಿಕಾರಿಗಳಾಗಿ ನೇಮಿಸಿದ್ದು ಸದರಿ ಕೆಲಸ ನಿರ್ವಹಣೆಗೆ ವಾಹನದ ಅಗತ್ಯತೆ ಇರುತ್ತದೆ.

ಆದ್ದರಿಂದ, ಕಾರ್ಮಿಕ ಇಲಾಖೆಯ ಉಪ ಕಾರ್ಮಿಕ ಆಯುಕ್ತರು, ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳು ಹಾಗೂ ಮಂಡಳಿಯ ಹಿರಿಯ ಕಾರ್ಮಿಕ ನಿರೀಕ್ಷಕರಿಗೆ ವಾಹನ ವ್ಯವಸ್ಥೆಗೆ ಸಂಬಂಧಿಸಿದಂತೆ ಮಂಡಳಿಯ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಹೊಸ ವಾಹನವನ್ನು ಖರೀದಿಸುವುದರಿಂದ ಅವುಗಳ ನಿರ್ವಹಣೆ ಕಷ್ಟವಾಗುತ್ತದೆ. ಆದ್ದರಿಂದ ಅಧಿಕಾರಿಗಳ ಹುದ್ದೆಯ ಸ್ಥಾನಮಾನಕ್ಕೆ ಅನುಗುಣವಾಗಿ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ತೀರ್ಮಾನಿಸಲಾಯಿತು. ಅವಶ್ಯಕತೆ ಇದ್ದರೆ 04 ಉಪ ಕಾರ್ಮಿಕ ಆಯುಕ್ತರುಗಳಿಗೆ ಇನ್ನೋವಾ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಬಹುದೆಂದು ಅಧ್ಯಕ್ಷರು ತಿಳಿಸಿದರು.**

ಮುಂದುವರೆದು, ಆಯುಕ್ತರು, ಕಾರ್ಮಿಕ ಇಲಾಖೆರವರು ಮಾತನಾಡುತ್ತಾ, ಕೇಂದ್ರ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ನಿರೀಕ್ಷಕರುಗಳ ಮಂಡಳಿಯ ಎಲ್ಲಾ ಯೋಜನೆಗಳನ್ನು ಸ್ಥಳೀಯವಾಗಿ

ಅನುಷ್ಠಾನಗೊಳಸುತ್ತಿದ್ದು, ಪ್ರತಿ ಅರ್ಜಿಯ ಕುರಿತು ವೈಯುಕ್ತಿಕವಾಗಿ ಪರಿಶೀಲಿಸಬೇಕಾಗುತ್ತದೆ. ಆದ್ದರಿಂದ ಸದರಿಯವರುಗಳಗೆ ConveyanceAllowances ನೀಡಲು ಅನುಮೋದಿಸುವಂತೆ ಸಭೆಗೆ ಕೋರಿದರು.

ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು, ಇಲಾಖಾ ಮುಖ್ಯಸ್ಥರು ವಿವರವಾದ ಪ್ರಸ್ತಾವನೆಯನ್ನು ಕಾರ್ಯದರ್ಶಿಗಳು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳ ರವರಿಗೆ ಸಲ್ಲಿಸಲು ಸೂಚಿಸಿದರು, ಹಾಗೂ ಕಾರ್ಯದರ್ಶಿಗಳಗೆ ಸದರಿ ಪ್ರಸ್ತಾವನೆ ಕುರಿತು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು ಹಾಗು ಕಾರ್ಮಿಕ ನಿರೀಕ್ಷಕರು / ಹಿರಿಯ ಕಾರ್ಮಿಕ ನಿರೀಕ್ಷಕರ ಪ್ರಯಾಣ ದರ ಭತ್ಯೆಗೆ ಸಂಬಂಧಿಸಿದಂತೆ ಪ್ರಾದೇಶಿಕವಾರು ಉಪ ಕಾರ್ಮಿಕ ಆಯುಕ್ತರುಗಳಂದ ವಿವರ ವರದಿ ಪಡೆದುಕೊಂಡು, ದೃಢೀಕರಿಸಿದ ಪ್ರಯಾಣ ಹಾಗು ಸಾಧಿಸಿದ ಪ್ರಗತಿಯೊಂದಿಗೆ ತಾಳೆಮಾಡಿ ನಿಯಮಾನುಸಾರ ಪ್ರಯಾಣ ದರ / ಭತ್ಯೆ ಮಂಜೂರು ಮಾಡಲು ಕಾರ್ಯದರ್ಶಿಗಳಗೆ / ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳಗೆ ಅಧಿಕಾರ ನೀಡಿ ಅನುಮೋದನೆ ಮಾಡಲಾಯಿತು.

**ಮಂಡಳಗೆ ಸಂಬಂಧಿಸಿದ ಹಿರಿಯ ಕಾರ್ಮಿಕ ನಿರೀಕ್ಷಕರುಗಳಗೂ ಸಹ ಅವಶ್ಯಕತೆ ಅನುಗುಣವಾಗಿ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಅನುಮೋದನೆ ಮಾಡಲಾಯಿತು.**

## ವಿಷಯ ಸಂಖ್ಯೆ -25

**ಆಯುಕ್ತರು, ಕಾರ್ಮಿಕ ಇಲಾಖೆ ರವರ ಕೋರಿಕೆಯಂತೆ ಕ್ಷೇತ್ರ ಕಛೇರಿಗಳಗೆ ಅಗತ್ಯವಿರುವ ಕಂಪ್ಯೂಟರ್ ಹಾಗು ಇತರ ಪರಿಕರಗಳನ್ನು ಮಂಡಳಯಿಂದ ನಿಯಮಾನುಸಾರ ಖರೀದಿಸಿ ಒದಗಿಸಲು ಅನುಮೋದನೆ ನೀಡುವ ಕುರಿತು.**

ಪ್ರಸ್ತಾವನೆ:-

ಕಾರ್ಮಿಕ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಕಾರ್ಮಿಕ ನಿರೀಕ್ಷಕರುಗಳು/ಕಾರ್ಮಿಕ ನಿರೀಕ್ಷಕರುಗಳಗೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಯ ಕೆಲಸ ನಿರ್ವಹಿಸಲು ಡಿಸೆಂಬರ್-2015ರ ಅವಧಿಯಲ್ಲಿ 121 ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ಗಳನ್ನು ಮಂಡಳಯಿಂದ ಒದಗಿಸಲಾಗಿದೆ. ಏಪ್ರಿಲ್-2018ರ ಅವಧಿಯಲ್ಲಿ 125 ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ಗಳನ್ನು ಮಂಡಳಯಿಂದ ಒದಗಿಸಲಾಗಿದೆ.

ನವೆಂಬರ್-2019ರ ಅವಧಿಯಲ್ಲಿ 11 ಕಾರ್ಮಿಕ ಇಲಾಖೆಯ 7 ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ 28 ಕಾರ್ಮಿಕ ಅಧಿಕಾರಿಗಳಗೆ ಕಛೇರಿ ಉಪಯೋಗಕ್ಕಾಗಿ ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್ ಖರೀದಿಗಾಗಿ ತಲಾ ರೂ.60,000/-ಮೊತ್ತವನ್ನು ಮಂಡಳಯಿಂದ ಅನುದಾನ ಬಿಡುಗಡೆ ಮಾಡಲಾಗಿದೆ.

ಮುಂದುವರೆದು, ಕಾರ್ಮಿಕ ಆಯುಕ್ತರು, ಪತ್ರ ಸಂಖ್ಯೆ:ಎಸ್‌ಟಿವೈ/ಸಿಆರ್-28/2020-21, ದಿನಾಂಕ:25-09-2020 ರಲ್ಲಿ ಕಛೇರಿಗಳ ಉಪಯೋಗಕ್ಕಾಗಿ ಈ ಕೆಳಕಂಡ ಪರಿಕರಗಳನ್ನು ಕೋರಿರುತ್ತಾರೆ.

**ಬೇಡಿಕೆ ಪಟ್ಟಿ**

| ಕ್ರ.ಸಂ | ಕಛೇರಿಯ ಹೆಸರು | ಕಂಪ್ಯೂಟರ್ | ಯುಪಿಎಸ್ | ಸ್ಕ್ಯಾನರ್ ಒಳಗೊಂಡ ಪ್ರಿಂಟರ್ |
|---|---|---|---|---|
| 1 | ಉಪ ಕಾರ್ಮಿಕ ಆಯುಕ್ತರು, ಪ್ರಾದೇಶಿಕ-1, ಬೆಂಗಳೂರು | 17 | 17 | 17 |
| 2 | ಉಪ ಕಾರ್ಮಿಕ ಆಯುಕ್ತರು, ಪ್ರಾದೇಶಿಕ-2, ಬೆಂಗಳೂರು | 69 | 69 | 69 |
| 3 | ಉಪ ಕಾರ್ಮಿಕ ಆಯುಕ್ತರು, ಹಾಸನ ಪ್ರಾದೇಶಿಕ, ಹಾಸನ | 52 | 52 | 50 |
| 4 | ಉಪ ಕಾರ್ಮಿಕ ಆಯುಕ್ತರು, ಕಲಬುರಗಿ ಪ್ರಾದೇಶಿಕ, ಕಲಬುರಗಿ | 14 | 14 | 39 |
| | **ಒಟ್ಟು** | **152** | **152** | **175** |

ಆದ್ದರಿಂದ, ಕಛೇರಿ ಉಪಯೋಗಕ್ಕಾಗಿ 152 ಕಂಪ್ಯೂಟರ್, 152 ಯುಪಿಎಸ್ ಹಾಗೂ 175 ಸ್ಕ್ಯಾನರ್ ಒಳಗೊಂಡ ಪ್ರಿಂಟರ್‌ಗಳನ್ನು ಕಾರ್ಮಿಕ ಇಲಾಖೆಯ ಕ್ಷೇತ್ರ ಕಛೇರಿಗಳಿಗೆ ಮಂಡಳಿಯಿಂದ ನಿಯಮಾನುಸಾರ ಖರೀದಿಸಿ ಒದಗಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು ತಮ್ಮ ಪ್ರವಾಸದ ವೇಳೆ ಇಲಾಖೆಗಳಲ್ಲಿ ಸರಿಯಾದ ಗಣಕಯಂತ್ರ, ಪ್ರಿಂಟರ್ ಹಾಗೂ ಇತರೆ ಸೌಲಭ್ಯಗಳು ಇಲ್ಲದೆ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿದ್ದು, ಇದರಿಂದ ಸಾರ್ವಜನಿಕರಿಗೆ ನಿಗಧಿತ ಅವಧಿಯೊಳಗೆ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ ಹಾಗೂ ಸರ್ಕಾರಕ್ಕೆ ಕೇಂದ್ರ ಕಛೇರಿಗಳಿಂದ ಸಕಾಲದಲ್ಲಿ ಮಾಹಿತಿಯನ್ನು ಸಲ್ಲಿಸಲು ವಿಳಂಭವಾಗುತ್ತಿದೆ. ಆದ್ದರಿಂದ ಸದರಿ ಕಛೇರಿಗಳಿಗೆ ಅವಶ್ಯಕತೆ ಇರುವ ಕಂಪ್ಯೂಟರ್ ಹಾಗೂ ಇತರೆ ಪರಿಕರಣಗಳನ್ನು ಮಂಡಳಿಯಿಂದ ನಿಯಮಾನುಸಾರ ಖರೀದಿಸಿ ಒದಗಿಸುವುದು ಸೂಕ್ತವೆಂದು ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.**

## ವಿಷಯ ಸಂಖ್ಯೆ-26

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕೈಗೊಳ್ಳುವ ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿಗಳನ್ನು ತಯಾರಿಸಲು (Consultancy Services) ನುರಿತ ಸಲಹೆಗಾರರ ಸೇವೆಯನ್ನು ಕೆಟಿಪಿಪಿ ನಿಯಮಾನುಸಾರ ಪಡೆದುಕೊಳ್ಳಲು ಅನುಮೋದಿಸುವ ಕುರಿತು.**

ಪ್ರಸ್ತಾವನೆ:-

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಪ್ರಸ್ತುತ ವರ್ಷದಲ್ಲಿ ಹಲವಾರು ಕಾಮಗಾರಿಗಳನ್ನು ಕೈಗೊಳ್ಳಲು ಮಂಡಳಿಯ ಆಯವ್ಯಯದಲ್ಲಿ ಅನುಮೋದನೆ ಪಡೆಯಲಾಗಿದೆ.

ಸದರಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಅನುಷ್ಠಾನಗೊಳಸಬೇಕಾಗಿದ್ದು ಮಂಡಳಿಯಲ್ಲಿ ನುರಿತ ತಾಂತ್ರಿಕ ಅಧಿಕಾರಿಗಳು ಇಲ್ಲದೇ ಇರುವುದರಿಂದ ಸದರಿ ಕಾಮಗಾರಿಗಳಗೆ ಸಂಬಂಧಪಟ್ಟಂತೆ ಅಂದಾಜು ಪತ್ರಿಕೆ, ನಕ್ಷೆ ಮತ್ತು ಇತರೆ ಕಾರ್ಯಗಳನ್ನು ಕೈಗೊಳ್ಳಲು ವಿಳಂಭವಾಗುತ್ತಿದೆ.

ಆದುದರಿಂದ, ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಕಾಮಗಾರಿಗಳಗೆ ಸಂಬಂಧಪಟ್ಟಂತೆ ನುರಿತ ಸಲಹೆಗಾರರ ಸೇವೆಯನ್ನು ಪಡೆದಲ್ಲಿ ಸದರಿ ಕಾಮಗಾರಿಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಸಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಮಂಡಳಯ ವತಿಯಿಂದ ಕೈಗೊಳ್ಳುವ ಸಿವಿಲ್ ಕಾಮಗಾರಿಗಳಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿಗಳನ್ನು ತಯಾರಿಸಲು (Consultancy Services)ನುರಿತ ಸಲಹೆಗಾರರ ಸೇವೆಯನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಪಡೆದುಕೊಳ್ಳಲು ಅನುಮೋದನೆ ನೀಡಲು ಸಭೆಗೆ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಈ ಕುರಿತು ಮಾತನಾಡಿದ ಅಪರ ಮುಖ್ಯ ಕಾರ್ಯದರ್ಶಿಗಳು feasibility study ಮಾಡುವುದು ಅವಶ್ಯಕತೆ ಇದ್ದು ಈ ಬಗ್ಗೆ ಮೆ: ಐಡೆಕ್ ಸಂಸ್ಥೆ ವತಿಯಿಂದ ಪ್ರಸ್ತಾವನೆಯನ್ನು ಪಡೆಯುವುದು ಸೂಕ್ತವೆಂದು ಸಭೆಯ ಗಮನಕ್ಕೆ ತಂದರು. ಡಿಪಿಆರ್ ಗಳನ್ನು ತಯಾರಿಸಲು ನುರಿತ ಸಲಹೆಗಾರರ ಸೇವೆಯನ್ನು ನಿಯಮಾನುಸಾರ ಪಡೆಯಲು ಸಭೆಯಲ್ಲಿ ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ-27

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಬಗಲಗುಂಟೆ ನಿವೇಶನದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಸಾಹತು ಮತ್ತು ಕಟ್ಟಡಗಳಗೆ ಸಂಬಂಧಿಸಿದಂತೆ Architectural design ಗಳನ್ನು ತಯಾರಿಸಲು ನುರಿತ ವಾಸ್ತುಶಿಲ್ಪಿ (Architect) ಸಂಸ್ಥೆಯ ಸೇವೆಯನ್ನು (Consultancy Services) ಕೆಟಿಪಿಪಿ ನಿಯಮಾನುಸಾರ ಪಡೆದುಕೊಳ್ಳಲು ಅನುಮೋದಿಸುವ ಕುರಿತು.**

**ಪ್ರಸ್ತಾವನೆ:-**

2020-21ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಮಂಡಳಿಯ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ Transit Accommodationಒದಗಿಸಲು ರೂ.210.00 ಕೋಟಿಗಳನ್ನು ಮೀಸಲಿರಿಸಿ ಅನುಮೋದನೆ ಪಡೆಯಲಾಗಿರುತ್ತದೆ.

ಮೊದಲ ಹಂತದಲ್ಲಿ ಸದರಿ ಯೋಜನೆಯನ್ನು ಮಂಡಳಿಯ ಹೆಸರಿನಲ್ಲಿರುವ ಬಗಲಗುಂಟೆ ನಿವೇಶನದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಸದರಿ ಯೋಜನೆಯ ತಾಂತ್ರಿಕ ವಿನ್ಯಾಸಗೊಳಿಸಲು ಮಂಡಳಿಯಲ್ಲಿ ನುರಿತ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇಲ್ಲದೆ ಇರುವುದರಿಂದ ಸದರಿ ಯೋಜನೆಯ Architectural design ಗಳನ್ನು ತಯಾರಿಸಲು ನುರಿತ ವಾಸ್ತುಶಿಲ್ಪಿ (Architect) ಸಂಸ್ಥೆಯ

ಸೇವೆಯನ್ನು (Consultancy Services)ಬಾಹ್ಯ ಮೂಲಗಳಿಂದ ಪಡೆಯುವುದು ಅನಿವಾರ್ಯವಾಗಿರುತ್ತದೆ.

ಆದ್ದರಿಂದ;ಬಗಲಗುಂಟೆ ನಿವೇಶನದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ Transit Accommodationಯೋಜನೆಯ Architectural design ಗಳನ್ನು ತಯಾರಿಸಲು ನುರಿತ ವಾಸ್ತುಶಿಲ್ಪಿ (Architect) ಸಂಸ್ಥೆಯ ಸೇವೆಯನ್ನು (Consultancy Services)ಕೆ.ಟಿ.ಪಿ.ಪಿ ನಿಯಮಾನುಸಾರ ಪಡೆದುಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.ಬಗಲಗುಂಟೆ ನಿವೇಶನದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ Transit Accommodationಯೋಜನೆಯ Architectural design ಗಳನ್ನು ತಯಾರಿಸಲು ನುರಿತ ವಾಸ್ತುಶಿಲ್ಪಿ (Architect) ಸಂಸ್ಥೆಯ ಸೇವೆಯನ್ನು (Consultancy Services) ಕೆ.ಟಿ.ಪಿ.ಪಿ ನಿಯಮಾನುಸಾರ ಪಡೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಮುಂದುವರೆದು, ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿಯ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳನ್ನು ಕೂಡಲೇ ಗುರುತಿಸಿ ಸದರಿ ಆಸ್ತಿಗಳಿಗೆ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸಲು ಅಗತ್ಯ ಕ್ರಮವಹಿಸಲು ಸೂಚಿಸಿದರು.**

**ಈ ಕುರಿತು ಮಾತನಾಡಿದ ಅಪರ ಮುಖ್ಯಕಾರ್ಯದರ್ಶಿರವರು ಈಗಾಗಲೇ ಕಾರ್ಮಿಕ ಇಲಾಖೆಯ ಎಲ್ಲಾ ಆಸ್ತಿಗಳನ್ನು ಗುರುತಿಸಿ ವರದಿ ಸಲ್ಲಿಸಲು ಪತ್ರ ಬರೆಯಲಾಗಿದೆ. ಆದರೆ ಈವರೆಗೆ ವರದಿಯನ್ನು ನೀಡಿರುವುದಿಲ್ಲವೆಂದು ಅಧ್ಯಕ್ಷರ ಗಮನಕ್ಕೆ ತಂದರು.**

**ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕೂಡಲೇ ಇಲಾಖೆಯ ಎಲ್ಲಾ ಆಸ್ತಿಗಳನ್ನು ಗುರುತಿಸಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿ, ಸದರಿ ಆಸ್ತಿಗಳನ್ನು ಅತಿಕ್ರಮಣವಾಗದಂತೆ ಕ್ರಮವಹಿಸಲು ಸೂಚಿಸಿದರು.**

## ವಿಷಯ ಸಂಖ್ಯೆ -28

**ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ನುರಿತ ತರಬೇತಿ ಸಂಸ್ಥೆಗಳ ಸಹಯೋಗದೊಂದಿಗೆ ಉಚಿತ ತರಬೇತಿ ಶಿಬಿರಗಳನ್ನು ಆಯೋಜಿಸಲು ಅನುಮೋದನೆ ನೀಡುವ ಕುರಿತು.**

ಪ್ರಸ್ತಾವನೆ:-

ಮಂಡಳಿಯ ನೋಂದಾಯಿತ ಫಲಾನುಭವಿಗಳ ಮಕ್ಕಳಿಗೆ ಶೈಕ್ಷಣಿಕ ಸಹಾಯಧನವನ್ನು ನರ್ಸರಿಯಿಂದ ಉನ್ನತ ಶಿಕ್ಷಣದವರೆಗೆ ಪ್ರತಿ ವರ್ಷ ನೀಡಲಾಗುತ್ತಿದೆ. ಉತ್ತಮ ಶಿಕ್ಷಣವನ್ನು ಪಡೆದ ನಂತರ ಕಾರ್ಮಿಕರ ಮಕ್ಕಳು ಸರ್ಕಾರಿ ಅಥವಾ ಇತರೆ ಉತ್ತಮ ಉದ್ಯೋಗಗಳಲ್ಲಿ ಆಯ್ಕೆಯಾಗಲು ಅಗತ್ಯ ತರಬೇತಿ ನೀಡುವ ಅವಶ್ಯಕತೆ ಇರುತ್ತದೆ.

ಹಾಗಾಗೀ, ಕಾರ್ಮಿಕರ ಮಕ್ಕಳಿಗೆ ಸರ್ಕಾರಿ, ಬ್ಯಾಂಕ್ ಮತ್ತು ಇತರೆ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ನುರಿತ ಸ್ಪರ್ಧಾತ್ಮಕ ತರಬೇತಿ ಸಂಸ್ಥೆಗಳಿಂದ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒದಗಿಸುತ್ತಿರುವ ತರಬೇತಿಗಳಂತೆ ನಮ್ಮಲ್ಲಿಯೂ ಸಹಾ ಒದಗಿಸುವ ಅವಶ್ಯಕತೆಯಿದೆ.

2020-21 ನೇ ಸಾಲಿನ ಆಯವ್ಯಯದಲ್ಲಿ Financial Assistance for Students ಉದ್ದೇಶಕ್ಕಾಗಿ ರೂ.47.50 ಕೋಟಿ ಮೊತ್ತವನ್ನು ಮೀಸಲಿರಿಸಿ ಮಂಡಳಿಯ ಹಾಗೂ ಸರ್ಕಾರದ ಅನುಮೋದನೆ ಪಡೆಯಲಾಗಿರುತ್ತದೆ.

ಆದ್ದರಿಂದ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ನುರಿತ ಸ್ಪರ್ಧಾತ್ಮಕ ತರಬೇತಿ ಸಂಸ್ಥೆಗಳ ಸಹಯೋಗದೊಂದಿಗೆ ತರಬೇತಿ ಶಿಬಿರಗಳನ್ನು ಉಚಿತವಾಗಿ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಆಯೋಜಿಸಿದ್ದಲ್ಲಿ, ಇದರಿಂದ ಉತ್ತಮ ಪ್ರಯೋಜನವನ್ನು ಕಟ್ಟಡ ಕಾರ್ಮಿಕರ ಮಕ್ಕಳು ಪಡೆಯಲಿದ್ದಾರೆ.

ಆದ್ದರಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ನುರಿತ ತರಭೇತಿ ಸಂಸ್ಥೆಗಳ ಸಹಯೋಗದೊಂದಿಗೆ ಉಚಿತ ತರಬೇತಿ ಶಿಬಿರಗಳನ್ನು ಆಯೋಜಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ರಾಜ್ಯಾದ್ಯಂತ 400 ಪದವೀಧರ ವಿಧ್ಯಾರ್ಥಿಗಳಿಗೆ ಉಚಿತವಾಗಿ ವಸತಿಯುಳ್ಳ ಐ.ಎ.ಎಸ್, ಕೆ.ಎ.ಎಸ್ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಒದಗಿಸಲು ರೂ.10.00 ಕೋಟಿಗಳ ವೆಚ್ಚದಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ಕೇಂದ್ರಗಳಲ್ಲಿ ತರಬೇತಿ ಕಾರ್ಯಕ್ರಮ ಏರ್ಪಡಿಸಲು ಟೆಂಡರ್ ಕರೆಯಲು ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-29

**ಮೆ|| ಕಿಯೋನಿಕ್ಸ್ ಸಂಸ್ಥೆಯ ಮೂಲಕ ಮಾಡಿಸುತ್ತಿರುವ ವಿಶೇಷ ನೋಂದಣಿ ಅಭಿಯಾನದ ಕಾಲಾವಧಿಯನ್ನು ವಿಸ್ತರಿಸುವ ಕುರಿತು**

**ಪ್ರಸ್ತಾವನೆ:-**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿರುವ ಕಾರ್ಮಿಕರನ್ನು ನೋಂದಾಯಿಸುವ ವಿಶೇಷ ನೋಂದಣಿ ಅಭಿಯಾನವನ್ನು ಪ್ರಾರಂಭಿಸಲು ದಿನಾಂಕ:22-06-2017ರಂದು ನಡೆದ ಮಂಡಳಿಯ 23ನೇ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ, ಈ ವಿಶೇಷ ನೋಂದಣಿ ಅಭಿಯಾನವನ್ನು ಮೊದಲ ಹಂತದಲ್ಲಿ 8 ಜಿಲ್ಲೆಗಳಾದ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರಗಿ, ಬೀದರ್ ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲು ಮೆ|| ಕಿಯೋನಿಕ್ಸ್ ಸಂಸ್ಥೆಗೆ ದಿನಾಂಕ: 01-07-2017ರಂದು ಕಾರ್ಯಾದೇಶ ನೀಡಲಾಗಿತ್ತು. ಈ ಅಭಿಯಾನವನ್ನು 3 ತಿಂಗಳೊಳಗಾಗಿ ಪೂರ್ಣಗೊಳಿಸಿ ಒಟ್ಟು 4 ಲಕ್ಷ ಕಾರ್ಮಿಕರನ್ನು ಹೊಸದಾಗಿ ನೋಂದಾಯಿಸಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಿರುವುದನ್ನು ರೂ.3.53 ಕೋಟಿ ವೆಚ್ಚದಲ್ಲಿ ನಿರ್ವಹಿಸಲು ಮಂಡಳಿ ಮತ್ತು ಮೆ|| ಕಿಯೋನಿಕ್ಸ್ ಸಂಸ್ಥೆಯ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಕಾಇ 246 ಎಲ್ಇಟಿ 2017, ದಿನಾಂಕ:24-11-2017 ರನ್ವಯ ಉಳಿದ 22 ಜಿಲ್ಲೆಗಳಲ್ಲೂ ಸಹ ಈ ವಿಶೇಷ ನೋಂದಣಿ ಅಭಿಯಾನವನ್ನು ಮಾಡಲು ಮೆ॥ ಕಿಯೋನಿಕ್ಸ್ ಸಂಸ್ಥೆಗೆ ದಿನಾಂಕ:28-11-2017 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ಈ ಅಭಿಯಾನವನ್ನು 6 ತಿಂಗಳಲ್ಲಿ ಪೂರ್ಣಗೊಳಿಸಿ, ಒಟ್ಟು 8 ಲಕ್ಷ ಹೊಸ ಕಾರ್ಮಿಕರನ್ನು ಗುರುತಿಸಿ, ನೋಂದಣಿ ಮಾಡಿ ಸ್ಮಾರ್ಟ್ ಕಾರ್ಡ್ ವಿತರಿಸುವುದು ಮತ್ತು ಈಗಾಗಲೇ ಮಂಡಳಿಯಲ್ಲಿ ನೋಂದಣಿಯಾಗಿರುವ 07 ಲಕ್ಷ ಕಾರ್ಮಿಕರ ಸದಸ್ಯತ್ವವನ್ನು ನವೀಕರಿಸಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸುವ ಕಾರ್ಯವನ್ನು ರೂ.10.71 ಕೋಟಿ ವೆಚ್ಚದಲ್ಲಿ ನಿರ್ವಹಿಸಲು MOUಮಾಡಿಕೊಳ್ಳಲಾಗಿರುತ್ತದೆ. ಆದರೆ, ಸದರಿ ಅಭಿಯಾನವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಕಾಲಾವಧಿಯನ್ನು ವಿಸ್ತರಿಸುವಂತೆ ದಿನಾಂಕ:13-07-2018ರಂದು ಕೋರಿದ್ದರು. ಈ ಬಗ್ಗೆ ದಿನಾಂಕ:18-01-2019 ರಂದು ನಡೆದ ಮಂಡಳಿಯ 27ನೇ ಸಭೆಯಲ್ಲಿ ಮಂಡಿಸಿದಾಗ ಜೂನ್ 2019 ರವರೆಗೆ ವಿಸ್ತರಿಸಲು ಅನುಮೋದನೆ ನೀಡಿರುತ್ತದೆ.

ಮೊದಲ ಹಂತದಲ್ಲಿ 8 ಜಿಲ್ಲೆಗಳಿಂದ 4 ಲಕ್ಷ ಹೊಸ ನೋಂದಣಿ ಮಾಡಿ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಬೇಕಿದ್ದು, ಇದಕ್ಕಾಗಿ ಒಟ್ಟು ರೂ.3,53,22,560/-ಗಳ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ. ಈ ಪೈಕಿ ಸದರಿ ಸಂಸ್ಥೆಯವರು ಈವರೆಗೆ 2,00,335 ಹೊಸ ನೋಂದಣಿ ಮಾಡಿ, ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಿರುತ್ತಾರೆ. ಇದಕ್ಕಾಗಿ ಮಂಡಳಿಯಿಂದ ರೂ.2,28,08,629/- ಬಿಡುಗಡೆ ಮಾಡಲಾಗಿರುತ್ತದೆ. ಇನ್ನೂ 1,99,665 ಹೊಸ ನೋಂದಣಿ ಮಾಡಿ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಲು ಬಾಕಿ ಇರುತ್ತದೆ ಅದಕ್ಕೆ ಅನುಗುಣವಾಗಿ ರೂ. 1,25,13,931/- ಗಳಷ್ಟು ಮೊತ್ತ ಪಾವತಿಗೆ ಬಾಕಿ ಉಳಿದಿರುತ್ತದೆ.

ಎರಡನೇ ಹಂತದಲ್ಲಿ ಉಳಿದ 22 ಜಿಲ್ಲೆಗಳಿಂದ 8 ಲಕ್ಷ ಹೊಸ ನೋಂದಣಿ ಮಾಡಿ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಣೆ ಮಾಡುವುದು ಮತ್ತು ಈಗಾಗಲೇ ನೋಂದಣಿಯಾಗಿರುವ 7 ಲಕ್ಷ ಫಲಾನುಭವಿಗಳ ಸದಸ್ಯತ್ವ ನವೀಕರಿಸಿ, ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಬೇಕಿದ್ದು, ಇದಕ್ಕಾಗಿ ಒಟ್ಟು ರೂ.10,70,99,999/-ಗಳ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ. ಈ ಪೈಕಿ ಸದರಿ ಸಂಸ್ಥೆಯವರು ಈವರೆಗೆ 2,01,270 ಹೊಸ ಫಲಾನುಭವಿಗಳ ನೋಂದಣಿ ಮಾಡಿ, ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಿರುತ್ತಾರೆ. ಇದಕ್ಕಾಗಿ ಮಂಡಳಿಯಿಂದ ರೂ.5,51,67,372/-ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಇನ್ನೂ 5,98,730 ಹೊಸ ನೋಂದಣಿ ಮಾಡಿ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸುವುದು ಮತ್ತು ಈಗಾಗಲೇ ನೋಂದಣಿಯಾಗಿರುವ 07 ಲಕ್ಷ ಫಲಾನುಭವಿಗಳ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸುವುದು ಬಾಕಿ ಇರುತ್ತದೆ ಇದಕ್ಕೆ ಅನುಗುಣವಾಗಿ ರೂ.5,19,32,627/-ಗಳಷ್ಟು ಮೊತ್ತ ಪಾವತಿಗೆ ಬಾಕಿ ಇರುತ್ತದೆ.

ದಿನಾಂಕ:11-06-2020 ರಂದು ಮಂಡಳಿಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮೆ: ಕಿಯೋನಿಕ್ಸ್ ಸಂಸ್ಥೆಯೊಂದಿಗೆ ಸಭೆಯನ್ನು ನಡೆಸಿ ಸದರಿ ಯೋಜನೆಯನ್ನು ಮುಂದುವರೆಸಲು ತಿಳಿಸಿ ಈ ಕೆಳಕಂಡ ಅಂಶಗಳ ಬಗ್ಗೆ ಕೂಡಲೇ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ.

1. ಮೊದಲ ಹಂತದಲ್ಲಿ ನೋಂದಣಿ ಮಾಡಿರುವ ಎಲ್ಲಾ ಕಟ್ಟಡ ಕಾರ್ಮಿಕರುಗಳಿಗೆ ಸ್ಮಾರ್ಟ್ ಕಾರ್ಡ್ ವಿತರಣೆಯನ್ನು ಕೂಡಲೇ ಮಾಡುವುದು.
2. ನಿರ್ಮಾಣ ಸ್ಥಳಗಳನ್ನು ಗುರುತಿಸಿ, ಅಲ್ಲಿ ನೋಂದಣಿಯಾಗದ ಕಾರ್ಮಿಕರನ್ನು ಫಲಾನುಭವಿಗಳನ್ನಾಗಿ ಮಾಡಲು ಸೂಚಿಸಲಾಗಿತ್ತು. ದಿನಾಂಕ:16-06-2020 ರಿಂದ ಪ್ರಾರಂಭಿಸಿ 2 ವಾರದೊಳಗಾಗಿ ಮುಕ್ತಾಯಗೊಳಿಸುವುದಾಗಿ ತಿಳಿಸಿರುತ್ತಾರೆ.
3. ರಾಜ್ಯಾದ್ಯಂತ ಅಂದಾಜು 28.00 ಲಕ್ಷ ಕಟ್ಟಡ ಕಾರ್ಮಿಕರು ಇರುವ ಬಗ್ಗೆ ಮಾಹಿತಿ ಇದ್ದು ಈ ಗುರಿಯನ್ನು 3 ತಿಂಗಳೊಳಗಾಗಿ ತಲುಪಲು ಸೂಚಿಸಲಾಗಿತ್ತು.
4. ವಿಶೇಷ ನೋಂದಣಿ ಅಭಿಯಾನದ ಕಾರ್ಯಪ್ರಗತಿಯ ವರದಿಯನ್ನು ಮಂಡಳಿಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು.
5. ಹೊಸ ನೋಂದಣಿಯನ್ನು ಸೇವಾಸಿಂಧು ತಂತ್ರಾಂಶದ ಮೂಲಕ ಮಾಡಿ ಸ್ಮಾರ್ಟ್ ಕಾರ್ಡ್ ಮುದ್ರಿಸಿ ವಿತರಣೆ ಮಾಡಲು ತಿಳಿಸಲಾಗಿತ್ತು.

6. ವಿಶೇಷ ನೋಂದಣಿ ಅಭಿಯಾನದಲ್ಲಿ ಬಾಕಿ ಉಳಿದಿರುವ IECಚಟುವಟಿಕೆಗಳನ್ನು ಮುಂದುವರೆಸುವಂತೆ ಸೂಚಿಸಲಾಗಿತ್ತು.
7. ವಿಶೇಷ ನೋಂದಣಿ ಅಭಿಯಾನದ ಸಮರ್ಪಕ ಬಳಕೆಗಾಗಿ 'ನೋಂದಣಿ ಸಪ್ತಾಹ'ವನ್ನು ಮಾಡಲು ತಿಳಿಸಲಾಗಿತ್ತು.

ಮುಂದುವರೆದು ಮೊದಲ ಮತ್ತು ಎರಡನೇ ಹಂತದ ವಿಶೇಷ ನೋಂದಣಿ ಅಭಿಯಾನವನ್ನು ಪೂರ್ಣಗೊಳಿಸುವ ಉದ್ದೇಶದಿಂದ ಪುನಃ ದಿನಾಂಕ: 31-03-2021 ರವರೆಗೆ ವಿಸ್ತರಿಸುವಂತೆ ಮೆ॥ ಕಿಯೋನಿಕ್ಸ್ ಸಂಸ್ಥೆಯವರು ದಿನಾಂಕ:26-09-2020 ರಂದು ಕೋರಿರುತ್ತಾರೆ. ಆದಕಾರಣ, ಮೇಲ್ಕಂಡ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಕೋರಿರುವಂತೆ ದಿನಾಂಕ: 31-03-2021 ರವರೆಗೆ ವಿಸ್ತರಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.**

**ಅಪರ ಮುಖ್ಯ ಕಾರ್ಯದರ್ಶಿಯವರು ಮಾತನಾಡುತ್ತಾ, ಸದರಿ ಸಂಸ್ಥೆಯವರಿಗೆ ಯಾವಾಗ ಕಾರ್ಯಾದೇಶ ನೀಡಲಾಯಿತು? ಅದರ ಕಾರ್ಯನಿರ್ವಹಣಾ ಅವಧಿ ಎಷ್ಟು? ಈವರೆಗೆ ಸಾಧಿಸಲಾದ ಪ್ರಗತಿ ಏನು? ಕೈಗೊಂಡಿರುವ IEC ಚಟುವಟಿಕೆಗಳು ಯಾವುವು? ಎಷ್ಟು ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಿದ್ದಾರೆ? ಈ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ.**

**ಸದರಿ ಸಭೆಗೆ ಮೆ: ಕಿಯೋನಿಕ್ಸ್ ಸಂಸ್ಥೆಯ ಅಧಿಕಾರಿಗಳನ್ನು ಹಾಜರಾಗಲು ಸೂಚಿಸಲಾಗಿತ್ತು. ಆದರೆ ಅವರು ಸಭೆಗೆ ಹಾಜರಾಗಿರುವುದಿಲ್ಲ.ಆದ್ದರಿಂದ ಸದರಿ ವಿಷಯವನ್ನು ಕುರಿತು ಹೆಚ್ಚಿನ ಪರಿಶೀಲನೆ ಜರುಗಿಸುವುದು ಅವಶ್ಯಕತೆ ಇದೆಯೆಂದು ಅಧ್ಯಕ್ಷರ ಗಮನಕ್ಕೆ ತಂದರು.**

**ಈ ಕುರಿತು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕಿಯೋನಿಕ್ಸ್ ಸಂಸ್ಥೆಯೊಂದಿಗೆ ಸಭೆ ನಡೆಸಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರ ನೀಡಿ ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ -30

**ಕಾರ್ಮಿಕ ಗೃಹಭಾಗ್ಯ ಸೌಲಭ್ಯದಡಿ 2020-21ನೇ ಸಾಲಿನಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರು ರೂ.403.95 ಕೋಟಿ ಮೊತ್ತವನ್ನು ಮುಂಗಡವಾಗಿ ಬಿಡುಗಡೆ ಮಾಡುವಂತೆ ಕೋರಿರುವ ಕುರಿತು.**

**ಪ್ರಸ್ತಾವನೆ:-**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರ ಕಲಂ 22 ಸಿ ರನ್ವಯ ಹಾಗೂ ಕರ್ನಾಟಕ ನಿಯಮಗಳು 2006ರ ನಿಯಮ 42 ರನ್ವಯ ಕಾರ್ಮಿಕ ಗೃಹ ಭಾಗ್ಯ ಸೌಲಭ್ಯವನ್ನು ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಒದಗಿಸಲು ರೂಪಿಸಲಾಗಿರುತ್ತದೆ. ಗೃಹ ಭಾಗ್ಯ ಸೌಲಭ್ಯವನ್ನು ಪಡೆಯಲು ನಿಯಮ 42 ರಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತದೆ.

"Every registered construction worker of at least 45 years of age and having 15 years of service for superannuation is

eligible to apply for assistance of loan and advance for construction of a house (Karmika Gruha Bhagya)”.

ಕಾಯ್ದೆ ಮತ್ತು ನಿಯಮದನ್ವಯ ಗರಿಷ್ಠ ರೂ.2.00 ಲಕ್ಷಗಳ ಮುಂಗಡ ಹಣ ಮಂಜೂರು ಮಾಡಲು ಅವಕಾಶವಿದ್ದು, ಫಲಾನುಭವಿಯು ಗರಿಷ್ಠ 20 ವರ್ಷಗಳ ಅವಧಿಯಲ್ಲಿ ವಾರ್ಷಿಕ ಸಮಾನ ಕಂತುಗಳಲ್ಲಿ ಮರು ಪಾವತಿಸಬೇಕಾಗಿರುತ್ತದೆ. ಹಾಗೂ ಸದರಿ ಮುಂಗಡ ಹಣವು ಬಡ್ಡಿ ರಹಿತವಾಗಿರುತ್ತದೆ.

ದಿನಾಂಕ:08-07-2019 ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಡಳಿಯ ಕಾರ್ಮಿಕ ಗೃಹಭಾಗ್ಯ ಸೌಲಭ್ಯದಡಿ ಕೊಳಗೇರಿಗಳಲ್ಲಿ ವಾಸಿಸುತ್ತಿರುವ ಕಟ್ಟಡ ಕಾರ್ಮಿಕರಿಗೆ ಸಾಲ ಸೌಲಭ್ಯ ಒದಗಿಸುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ವಸತಿ ಇಲಾಖೆಯಿಂದ ಕಾರ್ಮಿಕ ಇಲಾಖೆಗೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ದಿನಾಂಕ:05-08-2019 ರಂದು ನಡೆದ ಸಭೆಯಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಗೃಹಭಾಗ್ಯ ಸೌಲಭ್ಯ ಅನುಷ್ಠಾನಗೊಳಿಸುವ ಬಗ್ಗೆ ಕಾರ್ಮಿಕ ಇಲಾಖೆಯ ಅಭಿಪ್ರಾಯ ಪಡೆದು ತುಲನಾತ್ಮಕ ಸಚಿವ ಸಂಪುಟದ ಟಿಪ್ಪಣಿಯನ್ನು ಸಲ್ಲಿಸುವಂತೆ ವಸತಿ ಇಲಾಖೆಗೆ ಸೂಚಿಸಿರುತ್ತಾರೆ.

ಮುಂದುವರೆದು, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕಾರ್ಮಿಕ ಇಲಾಖೆ ಇವರು ವಸತಿ ಇಲಾಖೆಯ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರಿಗೆ ರೂ.76.00 ಕೋಟಿಗಳನ್ನು ಬಿಡುಗಡೆ ಮಾಡಲು ಮಂಡಳಿಯ ಕಡತದಲ್ಲಿ ಅನುಮೋದನೆ ನೀಡಿರುತ್ತಾರೆ ಮತ್ತು ದಿನಾಂಕ:02-11-2019ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಸತಿ ಇಲಾಖೆಗೆ ರೂ.76.00 ಕೋಟಿಗಳನ್ನು ಬಿಡುಗಡೆಗೊಳಿಸುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ವಸತಿ ಇಲಾಖೆಗೆ ರೂ.76.00 ಕೋಟಿಗಳ ಮೊತ್ತವನ್ನು ದಿನಾಂಕ 05-11-2019 ರಂದು ಬಿಡುಗಡೆ ಮಾಡಲಾಗಿರುತ್ತದೆ. ಮಂಡಳಿಯಿಂದ ಬಿಡುಗಡೆ ಮಾಡಲಾದ ಸಂಪೂರ್ಣ ಮೊತ್ತವನ್ನು ವಸತಿ ಇಲಾಖೆಯು ದಿನಾಂಕ: 07-12-2019 ರ ಆದೇಶದಂತೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿರುತ್ತದೆ. ದಿನಾಂಕ: 18-01-2020 ರಂದು ಮಂಡಳಿಯಿಂದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ವಸತಿ ಇಲಾಖೆ ಇವರಿಗೆ ಪತ್ರ ಬರೆದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಸತಿ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವ ತಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ನಿಗಮ / ಮಂಡಳಿಗಳಿಗೆ ಸದರಿ ಹಣವನ್ನು ಮರು ಹಂಚಿಕೆ ಮಾಡುವಂತೆ ಕೋರಲಾಗಿರುತ್ತದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಪತ್ರ ಸಂಖ್ಯೆ: ಕಕಾಮಂ/ಕಾಗೃಭಾ/ಸಿ.ಆರ್-II/2019-20, ದಿನಾಂಕ:07-03-2020 & 25-06-2020 ರನ್ವಯ ಮುಂಗಡ ಬಿಡುಗಡೆ ಮಾಡಲಾಗಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಹಾಗೂ ಫಲಾನಭವಿಗಳ ಜಿಲ್ಲಾವಾರು ವಿವರಗಳನ್ನು ಸಲ್ಲಿಸಲು ಕೋರಿದ್ದು, ಅದರಂತೆ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಪ್ರಧಾನ ಮಂತ್ರಿ ಆವಾಸ್ ಯೋಜನೆ - ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಘೋಷಿತ ಕೊಳಚೆ ಪ್ರದೇಶಗಳ ನೋಂದಾಯಿತ ಕಟ್ಟಡ ಕಾರ್ಮಿಕ ಫಲಾನುಭವಿಗಳಿಗೆ “ಕಾರ್ಮಿಕ ಗೃಹಭಾಗ್ಯ” ಸೌಲಭ್ಯವನ್ನು ವಿಸ್ತರಿಸಿ ಮಂಜೂರು ಮಾಡಿರುವ ಸಾಲದ ಫಲಾನುಭವಿಗಳ ಪಟ್ಟಿಯನ್ನು ಹಾಗೂ ಬಳಕೆ ಮಾಡಿರುವ ಮೊತ್ತ ರೂ. 5779.66 ಲಕ್ಷಗಳಿಗೆ ನಿಗಧಿತ ನಮೂನೆಯಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು

ಸದರಿಯವರ ಪತ್ರ ಸಂಖ್ಯೆ:ಕಕೊಅಮ/ಲೆಪಶಾ/ಎಸಿ-1/ಕೆಜಿಬಿಪಿಎಂಎವೈಹೆಚ್‌ಎಫ್‌ಎಯೂಸಿ/2020-21/251, ದಿನಾಂಕ:13-07-2020 ರಂದು ಸಲ್ಲಿಸಿರುತ್ತಾರೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಪತ್ರ ಸಂಖ್ಯೆ:ಕಕೊಅಮ/ಲೆಪಶಾ/ಎಸಿ-1/ಕೆಜಿಬಿಪಿಎಂಎವೈಹೆಚ್‌ಎಫ್‌ಎಯೂಸಿ/2020-21/397, ದಿನಾಂಕ:19-08-2020 ರನ್ವಯ ಉಳಿಕೆ ಮೊತ್ತ ರೂ.1820.34 ಗಳಿಗೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ ರವರ ಮೇಲ್ರುಜುಗಾಗಿ ಸಲ್ಲಿಸಿ ಈ ಕಾರ್ಯಾಲಯಕ್ಕೆ ಪತ್ರವನ್ನು ರವಾನಿಸಿರುತ್ತಾರೆ.

ಮುಂದುವರೆದು, ಸದರಿ ಪತ್ರದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಪಿಎಂಎವೈ-ಹೆಚ್‌ಎಫ್‌ಎ ಯೋಜನೆಯಡಿ ಕಾರ್ಯಾದೇಶ ನೀಡಿರುವ ಮನೆಗಳ ಕಾಮಗಾರಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಒಟ್ಟು ಅಗತ್ಯವಿರುವ ಸಾಲದ ಮೊತ್ತ ರೂ.807.90 ಕೋಟಿಗಳಾಗಿದ್ದು, ಈ ಪೈಕಿ ರೂ.403.95 ಕೋಟಿಗಳನ್ನು 2020-21ನೇ ಸಾಲಿನಲ್ಲಿ ಕಾರ್ಮಿಕ ಗೃಹಭಾಗ್ಯ ಸೌಲಭ್ಯದಡಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲು ಶಿಫಾರಸ್ಸು ಮಾಡುವಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ ರವರನ್ನು ಕೋರಿರುತ್ತಾರೆ ಮತ್ತು ಯಥಾ ಪ್ರತಿಯನ್ನು ಮಂಡಳಿಗೆ ಸಲ್ಲಿಸಿರುತ್ತಾರೆ.

ಆದರೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ ರವರಿಂದ ಈ ಮಂಡಳಿಗೆ ಈ ಕುರಿತು ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ತನ್ನ ಪತ್ರದಲ್ಲಿ ಕೋರಿರುವಂತೆ ರೂ.403.95 ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಲು ಫಲಾನುಭವಿಗಳ ಜಿಲ್ಲಾವಾರು ವಿವರ, ಪ್ರಸ್ತುತ ಮನೆಗಳ ನಿರ್ಮಾಣದ ಪ್ರಗತಿ, ಸದರಿ ಮನೆಗಳಿಗೆ ತಗಲುವ ಅಂದಾಜು ವೆಚ್ಚ, ನಿರ್ಮಿಸುತ್ತಿರುವ ಸ್ಥಳಗಳ ವಿವರಗಳು ಮತ್ತು ಗುರುತಿಸಲಾದ ಫಲಾನುಭವಿಗಳ ನೋಂದಣಿಗಳ ವಿವರ (ಅಂದರೆ ಹೊಸ ನೋಂದಣಿದಾರರೇ ಅಥವಾ ಈಗಾಗಲೇ ಮಂಡಳಿಯೊಂದಿಗೆ ನೋಂದಣಿಗೊಂಡಿದ್ದಾರೆಯೇ) ಎಂಬ ವಿವರಗಳು ಸಲ್ಲಿಸಿರುವುದಿಲ್ಲ. ಅಲ್ಲದೇ, ಸದರಿ ಮಂಡಳಿಯವರು ತಮ್ಮ ವ್ಯಾಪ್ತಿಯ ಫಲಾನುಭವಿಗಳಿಗೆ ಮಾತ್ರವಷ್ಟೇ ಈ ಸೌಲಭ್ಯವನ್ನು ಮಂಜೂರು ಮಾಡುತ್ತಿದ್ದು ಫಲಾನುಭವಿಗಳು ಈ ಸೌಲಭ್ಯದಿಂದ ವಂಚಿತರಾಗಿರುತ್ತಾರೆ. ಈ ವಿಷಯದ ಕುರಿತು ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಸಭೆಗೆ ಮಂಡಿಸಿದೆಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಸದರಿಯವರ ಪ್ರಸ್ತಾವನೆಯನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಈ ಬಗ್ಗೆ ಈಗಾಗಲೇ ಬಜೆಟ್‌ನಲ್ಲಿ 200 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ ಅದರಲ್ಲಿ ರೂ.76.00 ಕೋಟಿಗಳನ್ನು ಈ ಹಿಂದೆಯೇ ವಸತಿ ಇಲಾಖೆ ಮೂಲಕ ಕೊಳಚೆ ಅಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆ ಮಾಡಲಾಗಿದ್ದು, ಸದರಿಯವರಿಂದ ಫಲಾನುಭವಿಗಳ ಪೂರ್ಣ ವಿವರಗಳನ್ನು ಅಂದರೆ, ಫಲಾನುಭವಿಗಳ ಸಂಪೂರ್ಣ ವಿಳಾಸ, ಮಂಜೂರಾತಿ ಸಂದರ್ಭದಲ್ಲಿ ಫಲಾನುಭವಿಯಿಂದ ಪಡೆದಿರುವ ದಾಖಲೆಗಳ ಪ್ರತಿ, ಕಾರ್ಯಾದೇಶ, ಹಣ ಬಿಡುಗಡೆ ಮಾಡಿದ ಸಂದರ್ಭದಲ್ಲಿನ ಮನೆಯ ವಿವಿಧ ಹಂತ ಮತ್ತು ಸಂಬಂಧಪಟ್ಟ ಛಾಯಚಿತ್ರಗಳ ದೃಢೀಕೃತ ಪ್ರತಿ, ಸದರಿ ಮನೆ ನಿರ್ಮಾಣದ ಪ್ರಸ್ತುತ ಹಂತ, ಫಲಾನುಭವಿಗೆ ಮಂಜೂರಾದ ಒಟ್ಟು ಮೊತ್ತ ಮತ್ತು ಬಿಡುಗಡೆಯಾಗಬೇಕಿರುವ ಬಾಕಿ ಮೊತ್ತಗಳ ಬಗ್ಗೆ ಅಳತೆ ಪುಸ್ತಕದಲ್ಲಿನ (M.B.) entry ಗಳ ದಾಖಲೆಗಳೊಂದಿಗೆ ಫಲಾನುಭವಿವಾರು ಮಾಹಿತಿಯನ್ನು ಪಡೆದು ಮತ್ತೊಮ್ಮೆ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಕಾಯ್ದಿರಿಸಲಾಗಿದೆ.**

**ವಿಷಯ ಸಂಖ್ಯೆ -31**

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ವಿಷಯ**

**ಮಂಡಳಿಯ 2020-21ನೇ ಸಾಲಿನ ಬಜೆಟ್‌ನಲ್ಲಿ Nutrition Kits ಗಾಗಿ ಮೀಸಲಿಟ್ಟಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಅವಶ್ಯಕತೆಗೆ ಅನುಗುಣವಾಗಿ Students Essential Kits ಗಾಗಿ ಉಪಯೋಗಿಸಲು ಅನುಮೋದನೆ ನೀಡುವ ಬಗ್ಗೆ**

ಪ್ರಸ್ತಾವನೆ:-

ಮಂಡಳಿಯ 2020-21ನೇ ಸಾಲಿನ ಆಯವ್ಯಯದಲ್ಲಿ Nutrition Kitsಗಾಗಿ ಮೊತ್ತ ರೂ.100.00 ಕೋಟಿ ಹಾಗೂ Students Essential Kits ಗಾಗಿ ರೂ.60.00 ಕೋಟಿಗಳ ಅನುದಾನವನ್ನು ಮೀಸಲಿರಿಸಿ ಮಂಡಳಿಯಿಂದ ಮತ್ತು ಸರ್ಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಫಲಾನುಭವಿಗಳ ಮಕ್ಕಳಿಗೆNutrition Kitsಗಳನ್ನು ಒದಗಿಸಲು ಮೀಸಲಿಟ್ಟಿರುವ ರೂ.100.00 ಕೋಟಿಗಳು ಹೆಚ್ಚಿನ ಮೊತ್ತವಾಗಿದ್ದು, ಸಂಪೂರ್ಣ ಬಳಕೆಯಾಗುವುದು ಅಸಾಧ್ಯವಾಗಿರುತ್ತದೆ. ಆದರೆ, Students Essential Kits ಗಳನ್ನು ನೋಂದಾಯಿತ ಎಲ್ಲಾ ಫಲಾನುಭವಿಗಳ ಓದುತ್ತಿರುವ ಮಕ್ಕಳಿಗೆ ಒದಗಿಸಲು ಹೆಚ್ಚಿನ ಅನುದಾನ ಅವಶ್ಯಕತೆ ಇರುತ್ತದೆ. ಈ ಹಿನ್ನಲೆಯಲ್ಲಿ Nutrition Kits ಗಾಗಿ ಮೀಸಲಿಟ್ಟಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಅವಶ್ಯಕತೆಗೆ ಅನುಗುಣವಾಗಿ Students Essential Kits ಗಾಗಿ ಉಪಯೋಗಿಸಿಕೊಳ್ಳಲು ಮಂಡಳಿಯ ಸಭೆಯ ಅನುಮೋದನೆಗೆ ಮಂಡಿಸಿದೆ.ಎಂದು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಅವಶ್ಯಕತೆಗೆ ಅನುಗುಣವಾಗಿ ಅನುದಾನವನ್ನು ಬಳಸಿಕೊಳ್ಳಲು ಸರ್ವಾನುಮತದಿಂದ ಅನುಮೋದಿಸಲಾಯಿತು.**

**ವಿಷಯ ಸಂಖ್ಯೆ -31/1**

**ಮಂಡಳಿಯ ಬಜೆಟ್ ನಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ರೂಪಿಸಲಾದ ಕಲ್ಯಾಣ ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವ ಬಗ್ಗೆ**

ಮಾನ್ಯ ಅಧ್ಯಕ್ಷರು ಮಾತನಾಡಿ ಮಂಡಳಿಯ 2020-21ನೇ ಸಾಲಿನ ಆಯವ್ಯಯದಲ್ಲಿ ಮಂಡಳಿಯ ಫಲಾನುಭವಿಗಳಿಗೆ ರೂಪಿಸಲಾಗಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಅನುಷ್ಠಾನವು ಕೋವಿಡ್-19 ಹಿನ್ನಲೆಯಲ್ಲಿ ತಡವಾಗಿರುತ್ತದೆ. ಆಗಾಗಿ ಇನ್ನು ಮುಂದೆ ಸದರಿ ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು. ಟೂಲ್‌ಕಿಟ್ / ಇತರೆ ಕಿಟ್ / ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಸಾಮಾಗ್ರಿಗಳನ್ನು ಹಂಚುವ ಸಂಬಂಧ ಪ್ರಸ್ತಾವನೆಗಳನ್ನು ಬೆಂಗಳೂರಿನಲ್ಲಿ ವಲಯವಾರು, ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾವಾರು / ವಿಭಾಗವಾರು ಬೇಡಿಕೆ ಪಟ್ಟಿಯನ್ನು ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳಿಂದ ಪಡೆದು ನಿಯಮಾನುಸಾರ ಪರಿಶೀಲಿಸಿ ವಿತರಿಸಲು ಮತ್ತು ಸದರಿ ಜಿಲ್ಲೆ / ವಿಭಾಗ ಹಾಗೂ ವಲಯಗಳಲ್ಲಿ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇರುವುದರಿಂದ ಮಂಡಳಿ ಕಾರ್ಯದರ್ಶಿಯವರಿಗೆ ಕೆ.ಟಿ.ಪಿ.ಪಿ ಕಾಯ್ದೆ ಅಡಿಯಲ್ಲಿ ವಲಯವಾರು / ಜಿಲ್ಲಾವಾರು / ವಿಭಾಗವಾರು ಟೆಂಡರ್ ಕರೆದು ನಿಯಮಾನುಸಾರ ಕಾರ್ಯಾದೇಶ ನೀಡಲು ಸೂಚಿಸಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ -31/2**

**ಬಾಕಿ ಇರುವ ಸಹಾಯಧನ ಅರ್ಜಿಗಳನ್ನು ಇತ್ಯರ್ಥಗೊಳಿಸುವ ಬಗ್ಗೆ**

ಮಾನ್ಯ ಅಧ್ಯಕ್ಷರು ಮಾತನಾಡಿ ವಿವಿಧ ಜಿಲ್ಲೆಗಳಲ್ಲಿ ಕಟ್ಟಡ ಕಾರ್ಮಿಕರಿಂದ ಸ್ವೀಕರಿಸಲಾದ ವಿವಿಧ ಸಹಾಯಧನದ ಅರ್ಜಿಗಳು ಬಾಕಿ ಇರುವುದಾಗಿ ಗಮನಕ್ಕೆ ಬಂದಿದ್ದು, ಕೂಡಲೇ ಬಾಕಿ ಇರುವ ಎಲ್ಲಾ ಸಹಾಯಧನದ ಅರ್ಜಿಗಳನ್ನು ವಿಲೇವಾರಿಗೊಳಿಸಲು ಅಗತ್ಯ ಕ್ರಮವಹಿಸುವಂತೆ ಆಯುಕ್ತರು, ಕಾರ್ಮಿಕ ಇಲಾಖೆ ಮತ್ತು ಮಂಡಳಿಯ ಕಾರ್ಯದರ್ಶಿಯವರಿಗೆ ಸೂಚಿಸಿದರು.

## ವಿಷಯ ಸಂಖ್ಯೆ –31/3

**ಲೇಬರ್ ಕಾರ್ಡ್‌ಗಳನ್ನು ಸ್ಥಳದಲ್ಲಿಯೇ ವಿತರಿಸುವ ಬಗ್ಗೆ**

ಶ್ರೀ ಮೋಹನ್ ರಾವ್, ಕಾರ್ಯದರ್ಶಿಗಳು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರುರವರು ಮಾತನಾಡುತ್ತಾ, ಪ್ರತಿ ತಿಂಗಳು ಮೂರನೇ ಶನಿವಾರ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಟ್ಟಡ ಕಾರ್ಮಿಕರನ್ನು ಅಗತ್ಯ ದಾಖಲೆಗಳೊಂದಿಗೆ ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಸೇರಿಸಲಾಗುವುದು. ಸದರಿಯವರುಗಳಿಗೆ ಸ್ಥಳದಲ್ಲಿಯೇ ನೋಂದಣಿ ಮಾಡಿ ಲೇಬರ್ ಕಾರ್ಡ್‌ಗಳನ್ನು ವಿತರಿಸಲು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿಕೊಂಡರು.

ಈ ಕುರಿತು ಮಾತನಾಡಿದ ಅಪರ ಮುಖ್ಯ ಕಾರ್ಯದರ್ಶಿಗಳು ನೋಂದಣಿ ಮಾಡಿ ಲೇಬರ್ ಕಾರ್ಡ್‌ಗಳನ್ನು ವಿತರಿಸುವ ಜೊತೆಗೆ ಸದರಿಯವರುಗಳ ಆರೋಗ್ಯ ತಪಾಸಣೆಯನ್ನು ಜರುಗಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದರಿ ಪ್ರಸ್ತಾವನೆಗೆ ಮಾನ್ಯ ಅಧ್ಯಕ್ಷರು ಹಾಗೂ ಇತರೆ ಸದಸ್ಯರು ಒಪ್ಪಿಗೆ ಸೂಚಿಸಿದರು.

## ವಿಷಯ ಸಂಖ್ಯೆ –31/4

**ಮಂಡಳಿಯ ಸದಸ್ಯರುಗಳಿಗೆ ಗುರುತಿನ ಚೀಟಿ ವಿತರಿಸುವ ಬಗ್ಗೆ**

ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ, ಬೆಂಗಳೂರು ರವರು ಮಾತನಾಡುತ್ತಾ, ಮಂಡಳಿಯ ಎಲ್ಲಾ ಅಧಿಕಾರೇತರ ಸದಸ್ಯರುಗಳಿಗೆ ಗುರುತಿನ ಚೀಟಿಗಳನ್ನು ಒದಗಿಸುವಂತೆ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು. ಈ ಕುರಿತು ಮಾತನಾಡಿದ ಮಾನ್ಯ ಅಧ್ಯಕ್ಷರು ಹತ್ತು ದಿನದೊಳಗಾಗಿ ಎಲ್ಲಾ ಅಧಿಕಾರೇತರ ಸದಸ್ಯರುಗಳಿಗೆ ಗುರುತಿನ ಚೀಟಿಯನ್ನು ವಿತರಿಸಲು ಕ್ರಮವಹಿಸುವುದಾಗಿ ತಿಳಿಸಿದರು.

## ವಿಷಯ ಸಂಖ್ಯೆ –31/5

**ಕರ್ನಾಟಕ ರಾಜ್ಯದ ವತಿಯಿಂದ Vision Zero ಅಡಿಯಲ್ಲಿ ಅಪಘಾತಗಳ ತಡೆಯುವಿಕೆ ಬಗ್ಗೆ ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು ದಿನಾಂಕ 17 ಮತ್ತು 18ನೇ ಫೆಬ್ರವರಿ 2020 ರಂದು ನಡೆಸಲಾಗಿದ್ದು ಬಾಕಿ ಉಳಿದಿರುವ ಮೊತ್ತವನ್ನು ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಗೆ ಪಾವತಿಸುವ ಕುರಿತು**

ಕರ್ನಾಟಕ ರಾಜ್ಯದ ವತಿಯಿಂದ Vision Zero ಅಡಿಯಲ್ಲಿ ಅಪಘಾತಗಳ ತಡೆಯುವಿಕೆ ಬಗ್ಗೆ ಅಂತರಾಷ್ಟ್ರೀಯ ಮಟ್ಟದ ಸಮ್ಮೇಳವನ್ನು ದಿನಾಂಕ 17 ಮತ್ತು 18ನೇ ಫೆಬ್ರವರಿ 2020 ರಂದು ಅಶೋಕ್‌ನಲ್ಲಿ ನಡೆಸಲಾಗಿದ್ದು, ಸದರಿ ಕಾರ್ಯಾಗಾರದ Event Management ಗಾಗಿ ಮಂಡಳಿವತಿಯಿಂದ ರೂ. 25,000,00/-(ಇಪ್ಪತ್ತೈದು ಲಕ್ಷ) ಮೊತ್ತದೊಳಗೆ ಖರ್ಚು ವೆಚ್ಚವನ್ನು ಭರಿಸಲು ಸರ್ಕಾರದ ಆದೇಶ ಸಂಖ್ಯೆ: ಇ-ಕಾಇ 38 ಎಲ್ಇಟಿ 2020 ಬೆಂಗಳೂರು, ದಿನಾಂಕ: 11-02-

2020 ರಲ್ಲಿ ಆದೇಶಿಸಲಾಗಿರುತ್ತದೆ. ಸರ್ಕಾರದ ಆದೇಶದಂತೆ Event Management ಜವಬ್ದಾರಿಯನ್ನು Marketing Communication & Advertising Limited (MC&A) ಇವರು ನಡೆಸಲು ಮಂಡಳಿವತಿಯಿಂದ ಕಾರ್ಯಾದೇಶ ನೀಡಲಾಗಿರುತ್ತದೆ. ಆದರಂತೆ, ಸದರಿ ಕಾರ್ಯಾಗಾರದ ಒಟ್ಟು ವೆಚ್ಚ ರೂ. 16,78,275/- ಗಳಾಗಿದ್ದು, ಸದರಿ ಬಿಲ್ ಮೊತ್ತ ರೂ.16,78,275/- ಗಳನ್ನು ಈಗಾಗಲೇ MC&A ಇವರಿಗೆ ಮಂಡಳಿವತಿಯಿಂದ ಪಾವತಿಸಲಾಗಿರುತ್ತದೆ.

ಮುಂದುವರೆದು, The Lalit Ashok ಇವರು ಸದರಿ ಕಾರ್ಯಾಗಾರದ ಉಪಹಾರ ಮತ್ತು ಊಟದ ವ್ಯವಸ್ಥೆ ಮಾಡಿರುವುದಾಗಿ ಅದರ ಒಟ್ಟು ಬಿಲ್ ಮೊತ್ತ ರೂ. 16,46,529.04/- ಗಳಾಗಿರುತ್ತದೆ. ಈ ಮೊತ್ತದಲ್ಲಿ ರೂ.4,50,000/- ಈಗಾಗಲೇ ಕರ್ನಾಟಕ ರಾಜ್ಯ ಅಧ್ಯಯನ ಸಂಸ್ಥೆ ಇವರು ಪಾವತಿಸಿರುತ್ತಾರೆ. ಉಳಿದ ಮೊತ್ತ ರೂ. 11,96,529.04/- ಗಳ ಬಿಲ್‌ಅನ್ನು ಮಂಡಳಿಯ ಕಾರ್ಯಾದರ್ಶಿಯವರ ಹೆಸರಿಗೆ ಸಲ್ಲಿಸಿರುತ್ತಾರೆ. ಆದರೆ ಮಂಡಳಿವತಿಯಿಂದ ಈ ಬಿಲ್ ಮೊತ್ತವನ್ನು ಭರಿಸಲು ಕಾರ್ಯಾದೇಶ ನೀಡದೇ ಇರುವ ಹಿನ್ನಲೆಯಲ್ಲಿ ಹಿಂಬರಹ ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಕಾರ್ಯಗಾರಕ್ಕೆ ಸರ್ಕಾರದ ಆದೇಶದನ್ವಯ ಖರ್ಚುವೆಚ್ಚಕ್ಕಾಗಿ ರೂ. 25,000,00/- ಗಳನ್ನು ಮಂಡಳಿವತಿಯಿಂದ ಭರಿಸಲು ಆದೇಶಿಸಲಾಗಿದ್ದು, Marketing Communication & Advertising Limited (MC&A) ಇವರಿಗೆ ರೂ. 16,46,529.04/- ಗಳನ್ನು ಈಗಾಗಲೇ ಕಾಯಾದೇಶದನ್ವಯ ಪಾವತಿಸಲಾಗಿದ್ದು, ಉಳಿದ ಮೊತ್ತ ರೂ. 8,21,275/- ಗಳನ್ನು ಕರ್ನಾಟಕ ರಾಜ್ಯ ಅಧ್ಯಯನ ಸಂಸ್ಥೆಗೆ ಮಂಡಳಿ ನೀಡಿದ್ದಲ್ಲಿ, ಸದರಿ ಮೊತ್ತವನ್ನು The Lalit Ashok ಇವರಿಗೆ ಕರ್ನಾಟಕ ರಾಜ್ಯ ಅಧ್ಯಯನ ಸಂಸ್ಥೆ ಪಾವತಿಸುವುದಾಗಿ ಕಾರ್ಮಿಕ ಆಯುಕ್ತರು ಹಾಗು ನಿರ್ದೇಶಕರು ಸಭೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಚರ್ಚಿಸಿದ ನಂತರ ಸದರಿ ಪ್ರಸ್ತಾವನೆಗೆ ಮಾನ್ಯ ಅಧ್ಯಕ್ಷರು ಹಾಗೂ ಇತರೆ ಸದಸ್ಯರು ಒಪ್ಪಿಗೆ ಸೂಚಿಸಿದರು.

ಇತರೆ ಯಾವುದೇ ವಿಷಯ ಚರ್ಚಿಸಲು ಇಲ್ಲದೇ ಇರುವುದರಿಂದ ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಅರಬೈಲ್ ಶಿವರಾಮ್ ಹೆಬ್ಬಾರ್)
ಸನ್ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು
ಹಾಗೂ
ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ
ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ